
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಏಪ್ರಿಲ್ 17 ಶುಕ್ರವಾರ 2026
47
ಸಂಪುಟ: 47 | ಸಂಚಿಕೆ: 2 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕ್ರೈಂ ಬಾಕ್ಸ್

ವರದಕ್ಷಿಣೆ ಕಿರುಕುಳ; ಪತ್ನಿ ಸಾವಿಗೆ ಕಾರಣನಾದ ಪತಿಗೆ 12 ವರ್ಷ ಜೈಲು ಶಿಕ್ಷೆ



ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ತೀರ್ಪು

ಮೈಸೂರು, ಏ.16(ಬಿಎಲ್‌ಯು)– ವರದಕ್ಷಿಣೆ ಕಿರುಕುಳ ನೀಡಿ ಪತ್ನಿ ಸಾವಿಗೆ ಕಾರಣನಾದ ಪತಿಗೆ ಮೈಸೂರು ನ್ಯಾಯಾಲಯು 12 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಮೈಸೂರಿನ ವಿಜಯನಗರ ಹಂತದ ವಾಸಿ ಹೆಚ್.ಆರ್.ಲೋಕೇಶ್ ಶಿಕ್ಷೆಗೊಳಗಾಗಿದ್ದಾನೆ. ಟಿ.ಸಿದ್ದರಾಮಯ್ಯ ಅವರ ಮಗಳಾದ ಉಷಾರಾಣಿ ಎನ್.ಎಸ್. ಎಂಬಾಕೆಯನ್ನು ಲೋಕೇಶ್ ನವೆಂಬರ್ 14, 2011ರಂದು ಮದುವೆಯಾಗಿದ್ದನು. ಮದುವೆ ವೇಳೆ 2 ಲಕ್ಷ ನಗದು, 100 ಗ್ರಾಂ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ವರದಕ್ಷಿಣೆಯಾಗಿ ಪಡೆದಿದ್ದನು.

ಆದರೆ ಬಿಜಿನೆಸ್ ಮಾಡಲು ಮತ್ತೆ 50 ಸಾವಿರ ವರದಕ್ಷಿಣೆ ತರುವಂತೆ ಪತ್ನಿ ಉಷಾರಾಣಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದನು. ಪತಿಯ ಕಿರುಕುಳದಿಂದ ಬೇಸತ್ತ ಉಷಾರಾಣಿ ಮೇ 6, 2014ರಂದು ಮನೆಯ ಫ್ಯಾನ್‌ಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಬಗ್ಗೆ ತನಿಖೆ ನಡೆಸಿದ್ದ ಅಂದಿನ ಎಸಿಪಿ ಕೆ.ಎನ್. ಮಾದಯ್ಯ ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣದ ಬಗ್ಗೆ ಸರ್ಕಾರಿ ಅಭಿಯೋಜಕರು ಸಲ್ಲಿಸಿದ್ದ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರೂಪಾ ಕೆ.ಎನ್. ಅವರು ಆರೋಪಿ ಲೋಕೇಶ್‌ಗೆ ಐಪಿಸಿ 498(ಎ) ಪ್ರಕಾರ 2 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ದಂಡ ವಿಧಿಸಿದ್ದಾರೆ. ದಂಡ ಪಾವತಿಸಲು ತಪ್ಪಿದ್ದಲ್ಲಿ ಮತ್ತೆ 3 ತಿಂಗಳ ಶಿಕ್ಷೆ ಅನುಭವಿಸುವಂತೆ ತೀರ್ಪು ನೀಡಿದ್ದಾರೆ.

ಅಲ್ಲದೆ ಐಪಿಸಿ ಕಲಂ 304(ಬಿ) ಪ್ರಕಾರ ಆರೋಪಿ ಲೋಕೇಶ್‌ಗೆ 10 ವರ್ಷಗಳ ಕಾರಾಗೃಹ ಕಠಿಣ ಶಿಕ್ಷೆ ಹಾಗೂ 1 ಲಕ್ಷ ರೂಪಾಯಿಗಳ ದಂಡ ವಿಧಿಸಿದ್ದಾರೆ. ದಂಡ ಪಾವತಿಸಲು ತಪ್ಪಿದ್ದಲ್ಲಿ ಮತ್ತೆ 6 ತಿಂಗಳ ಶಿಕ್ಷೆ ಅನುಭವಿಸುವಂತೆ ನ್ಯಾಯಾಧೀಶರಾದ ರೂಪಾ ಅವರು ತೀರ್ಪು ನೀಡಿದ್ದಾರೆ. ಈ ಪ್ರಕರಣದ ಬಗ್ಗೆ ಅಂದಿನ ಸರ್ಕಾರಿ ಅಭಿಯೋಜಕರಾದ ಬಿ.ಈ.ಯೋಗೇಶ್ವರ ಹಾಗೂ ಹಾಲಿ ಸರ್ಕಾರಿ ಅಭಿಯೋಜಕರಾದ ಎ.ಎನ್.ಮಧು ಸರ್ಕಾರದ ಪರ ವಾದ ಮಂಡಿಸಿದ್ದರು.

ಮೂವರು ಸರಗಳ್ಳರ ಬಂಧನ; 21.28 ಲಕ್ಷ ಮೌಲ್ಯದ ಚಿನ್ನಾಭರಣ, ಬೈಕ್‌ಗಳು ವಶಕ್ಕೆ



ಮೈಸೂರು,ಏ.16(ಎಂಕೆ)– ಮೂವರು ಸರಗಳ್ಳರನ್ನು ಬಂಧಿಸಿರುವ ಕೆ.ಆರ್.ನಗರ ಠಾಣೆ ಪೊಲೀಸರು, ಬಂಧಿತರಿಂದ 21.28 ಲಕ್ಷ ಮೌಲ್ಯದ 152 ಗ್ರಾಂ ಚಿನ್ನ, 3 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆ ಅಗಸರಹಳ್ಳಿ ಗ್ರಾಮದ ನಿವಾಸಿ ಎ.ವಿ.ಕೃಷ್ಣಕುಮಾರ್(35), ಕೆ.ಆರ್.ನಗರ ತಾಲೂಕಿನ ಸಾಲಿಗ್ರಾಮದ ಎಸ್.ಆರ್. ನವೀನ್ ಕುಮಾರ್(36) ಮತ್ತು ಎಸ್.ಸೈಯ್ಯದ್ ಫರ್ಹಾನ್(26) ಬಂಧಿತ ಆರೋಪಿಗಳು.

ಕೆ.ಆರ್.ನಗರ ತಾಲೂಕಿನ ಲಾಲನಹಳ್ಳಿ ಗ್ರಾಮದ ಅನ್ನಪೂರ್ಣ ಎಂಬುವರು ಏ.6ರಂದು ಸಂಜೆ 4.30ರ ಸುಮಾರಿಗೆ ಗ್ರಾಮದಿಂದ ಕೆ.ಆರ್.ನಗರ ಕಡೆಗೆ ಹೋಗುವ ರಸ್ತೆಯ ಬಳಿ ತಿಪ್ಪೆಗೆ ಕಸವನ್ನು ಹಾಕುವಾಗ ಬೈಕಿನಲ್ಲಿ ಬಂದು ಅನ್ನಪೂರ್ಣ ಅವರ ಕತ್ತಿನಲ್ಲಿದ್ದ 35 ಗ್ರಾಂ ಮಾಂಗಲ್ಯ ಸರ ಕದ್ದು ಪರಾರಿಯಾಗಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಕೆ.ಆರ್.ನಗರ ಠಾಣೆ ಪೊಲೀಸರು, ಆರೋಪಿಗಳನ್ನು ಬಂಧಿಸಿ, 21.28,000 ರೂ. ಮೌಲ್ಯದ 152 ಗ್ರಾಂ ಚಿನ್ನ ಹಾಗೂ ಕೃತ್ಯಕ್ಕೆ ಬಳಸಿದ್ದ 1 ಹೋಂಡಾ ಡಿಯೋ, 1 ಹೀರೋ ಹೋಂಡಾ ಪ್ಯಾಷನ್ ಪ್ಲಸ್ ಮತ್ತು 1 ಪ್ಯಾಷನ್ ಪ್ರೋ ಬೈಕ್ ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ 4 ಸರಗಳ್ಳತನ ಪ್ರಕರಣ ಹಾಗೂ ಒಂದು ಮನೆಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ತಿಳಿದುಬಂದಿದೆ.

ಕೆ.ಆರ್.ನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಸ್.ಶಿವಪ್ರಕಾಶ್, ಪಿಎಸ್‌ಐ ಆರ್.ಸ್ವಾಮಿಗೌಡ, ಸಿಬ್ಬಂದಿಗಳಾದ ಪರಶುರಾಮೇಗೌಡ, ಕೆ.ವಿ. ಗೋವಿಂದರಾಜು, ಗುರುಪ್ರಸಾದ್, ಧರ್ಮ, ಪಿ.ಹೆಚ್. ಕೃಷ್ಣ, ಗಿರೀಶ್, ಅಹಮ್ಮದ್ ಅಲಿ, ಅವಿನಾಶ್, ಗಣೇಶ, ಸುನಿತಾ, ಇಂದಾದ್ ಅಲಿ ಮತ್ತು ವಸಂತ್‌ಕುಮಾರ್ ತನಿಖೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಜಿಲ್ಲಾ ಪೊಲೀಸರ ಮೊರೆ ಹೋದ ಯುವ ಜೋಡಿ!




ಮೈಸೂರು,ಏ.16(ಎಂಕೆ)– ಪ್ರೀತಿಸಿ ಮದುವೆಯಾದ ತುಮಕೂರು ಮೂಲದ ಜೋಡಿ 'ನಮಗೆ ರಕ್ಷಣೆ ಕೊಡಿ' ಎಂದು ಗುರುವಾರ ಮೈಸೂರಿನ ಎಸ್‌ಪಿ ಕಚೇರಿಯಲ್ಲಿ ಮನವಿ ಮಾಡಿಕೊಂಡರು. ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಸಂಗನಹಳ್ಳಿ ಗ್ರಾಮದ ಕೃಪಾ ಮತ್ತು ಧರಣೇಶ್ ಪ್ರೀತಿಸಿ ಮದುವೆಯಾಗಿದ್ದು, ಮದುವೆಗೆ ಹುಡುಗಿ ತಂದೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಜೀವ ಭಯದ ಹಿನ್ನೆಲೆಯಲ್ಲಿ ಇಬ್ಬರೂ ಮೈಸೂರಿಗೆ ಬಂದಿದ್ದಾರೆ.

ಮೈಸೂರಿನ ಎಸ್‌ಪಿ ಕಚೇರಿಗೆ ಬಂದು, ನಾವು ಇಬ್ಬರೂ ಮೇಜರ್ ಆಗಿದ್ದೇವೆ. ಪರಸ್ಪರ ಒಪ್ಪಿಗೆ ಮೇರೆಗೆ ಮದುವೆಯಾಗಿದ್ದೇವೆ. ಆದರೆ, ನನ್ನ ತಂದೆಯಿಂದ ನಮಗೆ ಜೀವ ಭಯವಿದೆ. ದಯವಿಟ್ಟು ರಕ್ಷಣೆ ನೀಡಿ ಎಂದು ನವಜೋಡಿಗಳು ಮನವಿ ಮಾಡಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಎಎಸ್‌ಪಿ ಮಲ್ಲಿಕ್, ನಮ್ಮ ರಕ್ಷಣೆ ಕೋರಿ ತುಮಕೂರಿನ ಯುವ ಜೋಡಿ, ಬಂದಿದ್ದರು. ಅವರಿಗೆ ಧೈರ್ಯ ಹೇಳಿ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡುವಂತೆ ತಿಳಿಸಿದ್ದೇನೆ ಎಂದರು. ಅದರಂತೆ ಜಿಲ್ಲಾ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್ ಸಂಪರ್ಕಿಸಿದಾಗ ಯುವ ಜೋಡಿಯ ದೂರು ದಾಖಲಿಸಿಕೊಂಡು ರಕ್ಷಣೆ ನೀಡುವಂತೆ ಅಪರ ವರಿಷ್ಠಾಧಿಕಾರಿಗಳು ತಿಳಿಸಿದ್ದರು. ಆದರೆ, ನಮ್ಮ ಠಾಣೆಗೆ ಯಾರೂ ಬಂದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮನೆಗಳ್ಳನ ಬಂಧನ; 51.7 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ನಗದು ವಶ



ಮೈಸೂರು, ಏ.16(ಎಂಕೆ)– ಮನೆಗಳ್ಳತನ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿರುವ ಕೆ.ಆರ್.ನಗರ ಠಾಣೆ ಪೊಲೀಸರು, ಬಂಧಿತನಿಂದ 51.7 ಗ್ರಾಂ ಚಿನ್ನ ಮತ್ತು 3.50 ಲಕ್ಷ ರೂ. ನಗದು ಹಣವನ್ನು ವಶಕ್ಕೆ ಪಡೆದಿದ್ದಾರೆ.

ಕೆ.ಆರ್.ನಗರ ತಾಲೂಕು ಹಂಪಾಪುರ ಗ್ರಾಮದ ಸಂತೋಷ ಅಲಿಯಾಸ್ ಸಂತು ಅಲಿಯಾಸ್ ಜುಬೇರ್(35) ಬಂಧಿತ ಆರೋಪಿ. 2024ರ ಮೇ 7ರಂದು ಕೆ.ಆರ್. ನಗರ ಟೌನ್‌ನ ಮುಸ್ಲಿಂ ಬ್ಲಾಕ್ ನಿವಾಸಿ ಅಪ್ಸರ್ ಪಾಷ ಎಂಬುವರ ಮನೆಯಲ್ಲಿಟ್ಟಿದ್ದ 600 ಗ್ರಾಂ ಚಿನ್ನಾಭರಣ ಹಾಗೂ 25 ಲಕ್ಷ ರೂ.ನಗದು ಕಳ್ಳತನವಾಗಿರುವ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಕೆ.ಆರ್. ನಗರ ಠಾಣೆ ಪೊಲೀಸರು, ಅಬ್ಬಲ್ ಅಲಿಯಾಸ್ ಇಮ್ರಾನ್ ಮತ್ತು ತಾಸಿನ ಎಂಬ ಆರೋಪಿಗಳನ್ನು ಬಂಧಿಸಿ 9 ಲಕ್ಷ ರೂ. ನಗದನ್ನು ವಶಪಡಿಸಿ ಕೊಂಡಿದ್ದರು.

ಇದೇ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಮತ್ತೋರ್ವ ಆರೋಪಿ ಹಾಗೂ ಮೂಲತಃ ದಕ್ಷಿಣ ಕನ್ನಡ ಜಿಲ್ಲೆ ಭಂಟ್ವಾಳ ತಾಲೂಕಿನ ಪಾಗಲ್ ಪಾಡಿ ಅಜ್ಜಿಬೆಟ್ಟು ಗ್ರಾಮ ನಿವಾಸಿ ಸಂತೋಷ ಅಲಿಯಾಸ್ ಸಂತು ಎಂಬಾತನನ್ನು ಏ.9ರಂದು ಬಂಧಿಸಿರುವ ಪೊಲೀಸರು, ಆತನಿಂದ 51.7 ಗ್ರಾಂ ಚಿನ್ನ ಮತ್ತು 3,50,000 ರೂ. ನಗದು ವಶಪಡಿಸಿಕೊಂಡಿದ್ದಾರೆ.

ಶೋಷಣೆಯಿಂದ ಮುಕ್ತರಾಗಲು ಶಿಕ್ಷಣ ಪಡೆಯಿರಿ

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಆನಂದ್ ಅಭಿಮತ

ಮೈಸೂರು, ಏ.16(ಬಿಎಲ್‌ಯು)– ಶೋಷಣೆಯ ಬೇಡಿಯಿಂದ ಮುಕ್ತರಾಗಲು ಕಡ್ಡಾಯ ಶಿಕ್ಷಣ ಪಡೆಯುವುದು ಅವಶ್ಯ ಎಂದು ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಸಲಹೆ ನೀಡಿದರು.

ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ವಿದ್ಯೆರಹಿತ ಜೀವನ ಶೋಷಣೆಗೆ ಮೂಲ ಕಾರಣ ಎಂಬ ಅಂಬೇಡ್ಕರ್ ಅವರ ವಾದವನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ದಲಿತ ಹಾಗೂ ಶೋಷಿತ ಸಮುದಾಯದ ಜನರ ಮೆದುಳಿಗೆ ಬೇಡಿ ಹಾಕಿ, ನಿಯಂತ್ರಣ ಮಾಡಲು ಅವಕಾಶ ಮಾಡಿಕೊಡಬಾರದು. ಈ ನಿಯಂತ್ರಣ ದಿಂದ ಮುಕ್ತರಾಗಲು ಶಿಕ್ಷಣ ಪಡೆದು ಜ್ಞಾನ ವೃದ್ಧಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಶಿಕ್ಷಣ ಪಡೆಯುವುದು ಪದವಿ ಅಥವಾ ಉದ್ಯೋಗಕ್ಕೆ ಎಂಬ ಮನೋಭಾವ ಬಿಡಬೇಕು. ಉದ್ಯೋಗ ದೊರೆಯಲಿ, ದೊರೆಯದಿರಲಿ ಪ್ರತಿಯೊಬ್ಬರು ಶಿಕ್ಷಿತರಾಗಬೇಕು. ಈ ಮೂಲಕ ಶಿಕ್ಷಣ ಪಡೆಯುವುದು ಜ್ಞಾನ ಹೆಚ್ಚಿಸಿಕೊಳ್ಳಲು ಎಂಬ ವಾಸ್ತವತೆಯನ್ನು ಮನವರಿಕೆ ಮಾಡಿಕೊಳ್ಳಬೇಕು ಎಂದು ಪ್ರೊ.ಆನಂದ್ ತಿಳಿಸಿದರು.



ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಗುರುವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಮಾತನಾಡಿದರು.

ದಲಿತ ಹಾಗೂ ಶೋಷಿತ ಸಮಾಜಗಳು ಸರ್ಕಾರದ ಸವಲತ್ತುಗಳನ್ನು ಸದುಪಯೋಗ ಮಾಡಿಕೊಳ್ಳಬೇಕು. ಈ ಮೂಲಕ ಶೈಕ್ಷಣಿಕ, ರಾಜಕೀಯ ಹಾಗೂ ಸಾಮಾಜಿಕ ಸ್ಥಾನಮಾನ ಪಡೆಯಬೇಕು ಎಂದರು.

> “ ಅಂಬೇಡ್ಕರ್ ಅವರು ಪ್ರತಿದಿನ 18 ಗಂಟೆಗಳ ಕಾಲ ಓದು, ಸಂಶೋಧನೆ ಸೇರಿದಂತೆ ಇತರೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿದ್ದರು. ಬಹಳಷ್ಟು ಜನರು ಸೂಟು ಬೂಟಿಗಾಗಿ ಹಣ ಖರ್ಚು ಮಾಡುತ್ತಿದ್ದರೆ, ಅಂಬೇಡ್ಕರ್ ಅವರು ಪುಸ್ತಕ ಖರೀದಿಗಾಗಿ ಹಣ ವೆಚ್ಚ ಮಾಡುತ್ತಿದ್ದರು. –ಪ್ರೊ. ಆನಂದ್

ಅಂಬೇಡ್ಕರ್ ಅವರು ಮನೆ ನಿರ್ಮಾಣ ಮಾಡಿದಾಗ ಪ್ರತ್ಯೇಕ ಗ್ರಂಥಾಲಯ ನಿರ್ಮಾಣ ಮಾಡಿದ್ದರು. ಕೊಲಂಬಿಯಾ ವಿಶ್ವವಿದ್ಯಾನಿಲಯ ಹಾಗೂ ಲಂಡನ್ ಸ್ಕೂಲ್ ಆಫ್ ಎಕಾಮಿಕ್ಸ್ ನಂತೆ ಗ್ರಂಥಾಲಯ ಇರಬೇಕೆಂದು ಮನೆ ನಿರ್ಮಾಣಕಾರನಿಗೆ ತಾಕೀತು ಮಾಡಿದ್ದರು. ಈ ಮೂಲಕ ಅಂಬೇಡ್ಕರ್ ಅವರು ಬರೋಬ್ಬರಿ 50 ಸಾವಿರ ಪುಸ್ತಕಗಳನ್ನು ಸಂಪಾದಿಸಿ ಗ್ರಂಥಾಲಯದಲ್ಲಿಟ್ಟಿದ್ದರು ಎಂದು ತಿಳಿಸಿದರು.

ಅಂಬೇಡ್ಕರ್ ಅವರಂತೆ ಕುತೂಹಲ, ಪ್ರಶ್ನೆ ಮಾಡುವ ಮನೋಭಾವ ಹೊಂದಬೇಕು. ಜೀವನದಲ್ಲಿ ಆಗುವ ಬದಲಾವಣೆಗಳಿಗೆ ಹಣೇಬರಹದ ಮೇಲೆ ಹೊಣೆ ಹಾಕದೆ ತಮ್ಮ ಪರಿಶ್ರಮ, ಜ್ಞಾನದಿಂದ ಬದಲಾವಣೆಯನ್ನೆ ನಾನೇ ತಂದುಕೊಂಡೆ ಎಂಬ ಮನಸ್ಥಿತಿ ಹೊಂದಬೇಕು. ಇಂತಹ ಮಹಾನ್ ಚೇತನ ಅಂಬೇಡ್ಕರ್ ಅವರ ವಿಚಾರಧಾರೆ, ಆಶಯಗಳನ್ನು ಅರಿತು ಬದುಕಿನಲ್ಲಿ ಸಾಧನೆ ಮಾಡಬೇಕು ಎಂದು ಪ್ರೊ.ಆನಂದ್ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಮೈಸೂರು ವಿವಿ ಕುಲ ಸಚಿವೆ ಎಂ.ಕೆ. ಸವಿತಾ, ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಮಹದೇವಮೂರ್ತಿ, ಆಡಳಿತಾಧಿಕಾರಿ ಪ್ರೊ.ಹೆಚ್.ಎಸ್.ಜಯಂತ್, ಜ್ಞಾನವಾಹಿನಿ ಸಂಚಾಲಕ ಡಾ.ಸಿ.ಡಿ.ಪರಶುರಾಮ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಾಹುಕಾರಹುಂಡಿ ಡೇರಿಗೆ ರಮೇಶ್ ಅಧ್ಯಕ್ಷರಾಗಿ ಆಯ್ಕೆ



ಮೈಸೂರು ತಾಲೂಕಿನ ಸಾಹುಕಾರಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಆಯ್ಕೆಯಾದ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಏ.16 (ಎಂಟಿವೈ)– ಮೈಸೂರು ತಾಲೂಕಿನ ಸಾಹುಕಾರ ಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿ.ರಮೇಶ್, ಉಪಾಧ್ಯಕ್ಷರಾಗಿ ದೊಡ್ಡಸ್ವಾಮಿನಾಯಕ ಅವಿರೋಧವಾಗಿ ಆಯ್ಕೆಯಾದರು.

ಸಂಘದಲ್ಲಿ 10 ಮಂದಿ ನಿರ್ದೇಶಕರಿದ್ದು, ಬಿ.ರಮೇಶ್, ದೊಡ್ಡಸ್ವಾಮಿನಾಯಕ, ವೆಂಕಟೇಶ, ಸಿದ್ದೇಗೌಡ, ಪ್ರಭಾವತಿ, ಶಿವಣ್ಣ, ಸಿದ್ದೇಗೌಡ, ಮಹಾಲಕ್ಷ್ಮಿ, ಶಿವಮ್ಮ, ನಾಗಮ್ಮ ಸೇರಿದಂತೆ ಎಲ್ಲರೂ ಸಭೆಯಲ್ಲಿ ಹಾಜರಿದ್ದರು. ಚುನಾವಣಾಧಿಕಾರಿಯಾಗಿ ರಮೇಶ್.ಜೆ ಕಾರ್ಯನಿರ್ವಹಿಸಿದರು. ಕಾರ್ಯದರ್ಶಿ ನಾರಾಯಣ್ ಟೆಸ್ಟರ್ ಸರಸ್ವತಿ ಉಪಸ್ಥಿತರಿದ್ದರು.

ಆಯ್ಕೆಯಾದ ನೂತನ ಪದಾಧಿಕಾರಿಗಳನ್ನು ಜಿಲ್ಲಾ ಗ್ಯಾರಂಟಿ ಯೋಜನಾ ಸಮಿತಿ ಅಧ್ಯಕ್ಷ ಅರುಣ್‌ಕುಮಾರ್, ಡಾ. ಪ್ರಕಾಶ್, ಮೈಮುಲ್ ನಿರ್ದೇಶಕ ಉಮಾಶಂಕರ್, ಶ್ರೀರಾಂ, ಬೆಳವಾಡಿ ಶ್ರೀನಿವಾಸ್, ವಕೀಲರಾದ ಧನರಾಜ್, ಶಿವಣ್ಣ ಬೋಗಾದಿ ಸ್ವಾಮಿ, ಪುಟ್ಟೇಗೌಡ, ಪುಟ್ಟಸ್ವಾಮಿ, ಪುರುಷೋತ್ತಮ್ ಅಭಿನಂದಿಸಿದರು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಎನ್.ಯೋಗಾನಂದ, ಜಿ.ನಿರಂಜನ್, ಹೆಚ್.ಹರೀಶ್‌ಕುಮಾರ್, ಆರ್.ರವಿಕುಮಾರ್, ಆರ್.ಸೋಮಣ್ಣ, ಕೆ.ಗಿರೀಶ್, ಎಂ.ರಾಮಕೃಷ್ಣ, ಸಿ.ಚಂದ್ರಶೇಖರ, ಪಿ.ರಾಜೇಶ್ವರಿ, ಎಂ.ಪ್ರಮೀಳಾ, ವೃತ್ತಿಪರ ನಿರ್ದೇಶಕರಾದ ರಾಮಕೃಷ್ಣಯ್ಯ, ಮುಖ್ಯ ಕಾರ್ಯನಿರ್ವಾಹಕ ಹರ್ಷಿತ್‌ಗೌಡ, ಬ್ಯಾಂಕಿನ ಸದಸ್ಯರು, ಸಿಬ್ಬಂದಿ ಚಿತ್ರದಲ್ಲಿದ್ದಾರೆ.

ರೇಡಿಯಂಟ್ ಆಸ್ಪತ್ರೆಯಲ್ಲಿ ಮಹಿಳೆಯರ ಕ್ಯಾನ್ಸರ್ ಆರೈಕೆ ಕೇಂದ್ರ ಪ್ರಾರಂಭ

ಟಿ–20 ಬ್ಲೈಂಡ್ ವರ್ಲ್ಡ್ ಕಪ್ ವಿಜೇತ ನಾಯಕಿ ಟಿ.ಸಿ.ದೀಪಿಕಾ ಉದ್ಘಾಟನೆ



ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಯಲ್ಲಿ 'ಮಹಿಳೆಯರ ಕ್ಯಾನ್ಸರ್ ಆರೈಕೆ ಕೇಂದ್ರ'ವನ್ನು ಟಿ–20 ಬ್ಲೈಂಡ್ ವರ್ಲ್ಡ್ ಕಪ್ ವಿಜೇತ ನಾಯಕಿ ಟಿ.ಸಿ.ದೀಪಿಕಾ ಉದ್ಘಾಟಿಸಿದರು.

ಮೈಸೂರು, ಏ.16(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಯಲ್ಲಿ ನೂತನವಾಗಿ ಆರಂಭಿಸಿರುವ 'ಮಹಿಳೆಯರ ಕ್ಯಾನ್ಸರ್ ಆರೈಕೆ ಕೇಂದ್ರ'ವನ್ನು ಟಿ–20 ಬ್ಲೈಂಡ್ ವರ್ಲ್ಡ್ ಕಪ್ ವಿಜೇತ ನಾಯಕಿ ಟಿ.ಸಿ. ದೀಪಿಕಾ ಗುರುವಾರ ಉದ್ಘಾಟಿಸಿದರು.

ಬಳಿಕ ಕ್ಯಾನ್ಸರ್ ತಪಾಸಣಾ ಪ್ಯಾಕೇಜ್ ಅನಾವರಣಗೊಳಿಸಿ ಮಾತನಾಡಿದ ಅವರು, ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವ ಕ್ಯಾನ್ಸರ್ ನಿಯಂತ್ರಣಕ್ಕೆ ಚಿಕಿತ್ಸೆ ಅವಶ್ಯವಾಗಿದ್ದು, ಒಂದೇ ಸ್ಥಳದಲ್ಲಿ ಸಮಾಲೋಚನೆ, ತಪಾಸಣೆ ಮತ್ತು ಚಿಕಿತ್ಸೆ ಸೌಲಭ್ಯ ಕಲ್ಪಿಸಿರುವುದು ಶ್ಲಾಘನೀಯ. ಮಹಿಳೆಯರ ಸುರಕ್ಷಿತ ಮತ್ತು ಅವರಲ್ಲಿ ಆತ್ಮವಿಶ್ವಾಸ ತುಂಬುವ ವಾತಾವರಣವನ್ನು ಒದಗಿಸಲಾಗಿದ್ದು, ಆರೋಗ್ಯದತ್ತ ಹೆಚ್ಚಿನ ಗಮನಹರಿಸಲು ಪ್ರೇರೇಪಿಸುತ್ತದೆ ಎಂದರು.

ಕ್ಲಿಯರ್ ಮೆಡಿ ಹೆಲ್ತ್‌ಕೇರ್ ನಿರ್ದೇಶಕ ಡಾ. ಶ್ರೀನಿವಾಸ್ ಮಾತನಾಡಿ, ಪೂರ್ಣ ಪ್ರಮಾಣದಲ್ಲಿ ಕ್ಯಾನ್ಸರ್ ಚಿಕಿತ್ಸೆ ನೀಡುವ ಬದ್ಧತೆ ಹೊಂದಿದ್ದು, ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆಯಾದರೆ ಬದುಕುಳಿಯುವ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬಹುದು ಎಂದರೆ, ಹಿರಿಯ ಕ್ಯಾನ್ಸರ್ ತಜ್ಞೆ ಡಾ.ರಕ್ಷಿತ್ ಶೃಂಗೇರಿ ಮಾತನಾಡಿ, ಕ್ಯಾನ್ಸರ್ ಆರೈಕೆ ಕೇಂದ್ರ'ವು ಆರಂಭಿಕ ತಪಾಸಣೆ ಪ್ರಮಾಣವನ್ನು ಹೆಚ್ಚಿಸಿ, ತಜ್ಞರ ಮೌಲ್ಯಮಾಪನ, ಚಿಕಿತ್ಸೆ ಹಾಗೂ ಎರಡನೇ ಅಭಿಪ್ರಾಯವನ್ನು ಒಂದೇ ಸ್ಥಳದಲ್ಲಿ ಒದಗಿಸಲು ಸಹಕಾರಿ ಎಂದರು. ರೇಡಿಯೇಷನ್ ಅಂಕಾಲಜಿಸ್ಟ್ ಡಾ.ಮೇಖಲಾ, ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಪ್ರಿಯಾಂಕ ಸತೀಶ್, ವೆಲ್ಲುಲ ಚಲಂ, ರವಿಕುಮಾರ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.4.2026 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್, ಕೊಲೆಸ್ಟ್ರಾಲ್, ಮಹಿಳೆಯರಲ್ಲಿ ಯೋನಿ ಸೋಂಕು, ಸಯಾಟಿಕ, ಗೃದ್ರಸಿ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಮೈಸೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್** : ಮೈಸಿರಿ–2026 ವಾರ್ಷಿಕೋತ್ಸವ, ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ವಿಭಾಗದ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಮಹಾರಾಜ ಕಾಲೇಜು** : ವಿಶ್ವಜ್ಞಾನಿ ಭಾರತರತ್ನ ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರ 135ನೇ ಜನ್ಮ ದಿನಾಚರಣೆ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಡಿ. ಆನಂದ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಕೆ.ಎಸ್. ಗೋವಿಂದರಾಜು, ಪ್ರೊ. ರಾಚಯ್ಯ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು**: ರಾಸಾಯನಿಕ ವಿಜ್ಞಾನದಲ್ಲಿ ಪ್ರಸ್ತುತ ಸಂಶೋಧನೆ ಮತ್ತು ನಾವೀನ್ಯತೆಗಳು ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಅಧ್ಯಕ್ಷತೆ: ಜೆಎಸ್‌ಎಸ್ ಅಕಾಡೆಮಿ ಡೀನ್ ಡಾ.ಪ್ರಶಾಂತ್ ಎಂ.ವಿಶ್ವನಾಥ್, ಗೌರವ ಅತಿಥಿಗಳು: ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಮಂಟೇಲಿಂಗು, ಪ್ರಿನ್ಸಿಪಾಲ್ ಡಾ.ರೇಚಣ್ಣ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10.15ಕ್ಕೆ.

■ **ಶ್ರೀ ಹೊಸ ಮಠ**: ಸಂಜೆ 5ರಿಂದ ವಿದ್ವಾನ್ ಶ್ರೀ ಗುರುಶಾಂತ ಮಹಾಸ್ವಾಮಿಗಳವರ 31ನೇ ಪುಣ್ಯಾರಾಧನೆ ಹಾಗೂ ಅಕ್ಕಮಹಾದೇವಿ ಮತ್ತು ಬಸವ ಜಯಂತ್ಯೋತ್ಸವ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಪೀಠದ ನಿರ್ದೇಶಕರಾದ ಪ್ರೊ. ಕವಿತಾ ರೈ ಅವರಿಂದ ಅಕ್ಕನ ವಚನಗಳ ವಿಶ್ಲೇಷಣೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸಂಜೆ 7ಕ್ಕೆ ವಾತ್ಸಲ್ಯ ಬಿ.ಇಡಿ. ಕಾಲೇಜಿನ ವಿದ್ಯಾರ್ಥಿಗಳಿಂದ ಶಿವಶರಣ ಹರಳಯ್ಯ ನಾಟಕ ಪ್ರದರ್ಶನ, ರಚನೆ : ವಿ. ಸಿದ್ದರಾಮಣ್ಣ ಶರಣರು, ನಿರ್ದೇಶನ : ಕೆ.ವಿ. ರಾಜಶೇಖರಮೂರ್ತಿ, ಸ್ಥಳ: ಶ್ರೀ ಹೊಸ ಮಠದ ಆವರಣ.

■ **ಶ್ರೀಪ್ರಸನ್ನ ಸುಂದರ ರಾಮ ಮಂದಿರ ಸೇವಾ ಸಮಿತಿ ಟ್ರಸ್ಟ್** : ಶ್ರೀ ಪರಾಭವ ನಾಮ ಸಂವತ್ಸರ 90ನೇ ವರ್ಷದ ಶ್ರೀರಾಮೋತ್ಸವ, ಶಯನೋತ್ಸವ, ಸಂಜೆ ದೇವರಿಗೆ ವಿವಿಧ ಭಕ್ಷ್ಯಗಳ ಸಮರ್ಪಣೆ, ವಂದನಾರ್ಪಣೆ, ಸಂಜೆ 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಗೋಷ್ಠಿ ಗಾಯನ, ಮೈಸೂರಿನ ಹಿರಿಯ ಮತ್ತು ಕಿರಿಯ ಕಲಾವಿದರಿಂದ ತ್ಯಾಗರಾಜರ ಪಂಚರತ್ನ ಕೀರ್ತನೆಗಳು, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ :ಬಿ.ಕೆ. ಮೀನಾಕ್ಷಿ, 6.40 ಭಾವಗೀತೆ, 6.45 ಪ್ರಾಯೋಜಿತ ಕಾರ್ಯಕ್ರಮ–ಕೃಷಿ ಕ್ಷೇತ್ರದಲ್ಲಿ ಕೋರಮಂಡಲ್ ಅಂತಾರಾಷ್ಟ್ರೀಯ ನಿಗಮದ ಪಾತ್ರ, ಪ್ರಾಯೋಜಕರು–ಕೋರಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶು ಗೀತೆಗಳ ಕಾರ್ಯಕ್ರಮ, 9.00 ನಮ್ಮ ಅರೋಗ್ಯ–ವಿಶ್ವ ಹಿಮೋಫೀಲಿಯಾ ದಿನದ ಸಂದರ್ಭದಲ್ಲಿ ಹಿಮೋಫಿಲಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಹೆಮಟೋ ಅಂಕಾಲಜಿಸ್ಟ್ ಡಾ. ತರಂಗಿಣಿ ದುರ್ಗಪ್ಪ ಅವ ರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ –ತೇಜಸ್ವಿನಿ ಗಿರೀಶ್, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಮತಿ ಮುರಾರಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಜಿ. ಗುರುಪ್ರಸಾದ್–ಸ್ಯಾಕ್ಸೋಫೋನ್ ವಾದನ, 4.00 ಮಹಿಳಾರಂಗ–ಸಖೀ ಸಾಹಿತ್ಯ, ಭಾಗವಹಿಸುತ್ತಾರೆ–ಮೈಸೂರಿನ ಲೇಖಿಕಿ ಪದ್ಮ ಆನಂದ್, ಪ್ರಸ್ತುತಿ–ನೇತ್ರಾ. ಕೆ., 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ ಜಲಕೃಷಿಯಲ್ಲಿ ಮೇವು ಉತ್ಪಾದನೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ, ವಲಯ ಕೃಷಿ ಸಂಶೋಧನಾ ಕೇಂದ್ರದ ತಾಂತ್ರಿಕ ಸಹಾಯಕರಾದ ಡಾ.ಎನ್.ರಾಣಿ ಅವರೊಂದಿಗೆ ಸಂದರ್ಶನ, ಪ್ರಸ್ತುತಿ –ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಚೆಂಬೈ ವೈದ್ಯನಾಥ ಭಾಗವತರ್ – ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

■ **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್** : ಒತ್ತಡದಿಂದ ಉಂಟಾಗುವ ದೈಹಿಕ ಆರೋಗ್ಯ ಸಮಸ್ಯೆಗಳು ಮತ್ತು ಅವುಗಳ ನಿರ್ವಹಣೆ ಕುರಿತು ವಿಚಾರ ಸಂಕಿರಣ, ಭಾಷಣಕಾರರು : ಡಾ. ಟಿ.ಎಸ್. ಪ್ರಸನ್ನ ವೆಂಕಟೇಶ್, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್‌ಬಾಬು, ಸ್ಥಳ: ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಎಸ್.ಪಿ. ಭಟ್ ಹಾಲ್, ಸಂಜೆ 6ಕ್ಕೆ.

■ **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್** : ಅಮೃತ ಮಹೋತ್ಸವ 'ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ', ಬೆಳಗ್ಗೆ 10 ರಿಂದ ರಾಜೇಶ್ವರಿ ವಸ್ತ್ರಾಲಂಕಾರದ ಬಿ.ಎಂ. ರಾಮಚಂದ್ರ ಅವರಿಂದ ಮೇಕಪ್ ಕಾರ್ಯಾಗಾರ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಹಿಂದೂಸ್ಥಾನಿ ಗಾಯಕ ಡಾ. ಮಾನಿಕ್ ವಿ. ಬೆಂಗೇರಿ, ನೃತ್ಯ ಪ್ರದರ್ಶನಗಳು : ಸೌಮ್ಯ ನೃತ್ಯಶಾಲೆ ನಿರ್ದೇಶಕರಾದ ವಿದುಷಿ ಸೌಮ್ಯರಾಣಿ ಮತ್ತು ಶಿಷ್ಯ ವೃಂದದವರಿಂದ ದಾಸ ನಮನ, ಭರತ ನೃತ್ಯ ಸಂಗೀತ ಅಕಾಡೆಮಿ ಕಲಾತ್ಮಕ ನಿರ್ದೇಶಕ ಡಾ. ಶುಭರಾಣಿ ಬೋಳಾರ್ ಶಿಷ್ಯ ವೃಂದದಿಂದ ನೃತ್ಯ ಪ್ರದರ್ಶನ, ಗುರು ವಿದ್ವಾನ್ ಮೈಸೂರು ಬಿ. ನಾಗರಾಜ್ ಮತ್ತು ಶಿಷ್ಯರಿಂದ ಕಥಕ್ ಪ್ರದರ್ಶನ, ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರದ ವಿದುಷಿ ಶ್ರೀ ಲಕ್ಷ್ಮೀಕುಮಾರ್ ಮತ್ತು ವಿದುಷಿ ಶಾರಿಕ ಕೌಶಿಕ್‌ರವರ ಶಿಷ್ಯರಿಂದ ಗುರುವಂದನ, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ.

■ **ಪರಿವರ್ತನ ರಂಗ ಸಮಾಜ** : ಡಾ. ಯು.ಆರ್. ಅನಂತಮೂರ್ತಿ ಅವರ ಕಥೆ ಆಧಾರಿತ ಕನ್ನಡ ನಾಟಕ, ರಂಗ ಪಠ್ಯ : ಸತ್ಯನಾರಾಯಣರಾವ್ ಅಣತಿ, ಸೂರ್ಯನ ಕುದುರೆ ನಾಟಕ ಪ್ರದರ್ಶನ, ನಿರ್ದೇಶನ : ರವಿಕುಮಾರ್ (ಕಲಾಬ್ರಹ್ಮ), ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

ಉದ್ಬೂರು ಹಾಡಿ, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** : ಸಮಾಜ ಕಾರ್ಯ ಶಿಬಿರ, ವಲಯ ಅರಣ್ಯಾಧಿಕಾರಿ ಎಸ್. ಹನುಮಂತರಾಜು ಅವರಿಂದ ಅರಣ್ಯ ಹಕ್ಕು ಕಾಯ್ದೆ 2006–ಹಕ್ಕುಗಳು, ಅರ್ಹತೆಗಳು ಮತ್ತು ಸವಾಲುಗಳು ಕುರಿತು ವಿಶೇಷ ಉಪನ್ಯಾಸ, ಮಧ್ಯಾಹ್ನ 2 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 17 ಶುಕ್ರವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 2 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಯೋಗೇಶ್ ಗೌಡ ಹತ್ಯೆ ಪ್ರಕರಣ

ಇಂದು ವಿನಯ್ ಕುಲಕರ್ಣಿ ಸೇರಿ 17 ಅಪರಾಧಿಗಳಿಗೆ ಶಿಕ್ಷೆ ಪ್ರಕಟ

ಬೆಂಗಳೂರು, ಏ.16– 2016ರಲ್ಲಿ ನಡೆದ ಬಿಜೆಪಿ ನಾಯಕ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಮತ್ತು ಇತರ 16 ಮಂದಿ ಅಪರಾಧಿಗಳು ಎಂದು ಘೋಷಿಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ನಾಳೆ ಶಿಕ್ಷೆಯ ಪ್ರಮಾಣವನ್ನು ಘೋಷಿಸಲಿದೆ.



ವಿನಯ್ ಕುಲಕರ್ಣಿ

ಇಂದು ನ್ಯಾಯಾಲಯವು ಶಿಕ್ಷೆಯ ಪ್ರಮಾಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ಮತ್ತು ಪ್ರತಿವಾದಿಯ ವಾದಗಳನ್ನು ಆಲಿಸಿತು. ನ್ಯಾಯಾಧೀಶ ಸಂತೋಷ್ ಗಜಾನನ್ ಭಟ್ ಅವರು ಯೋಗೇಶ್ ಗೌಡರ ಹತ್ಯೆಗೆ ಕ್ರಿಮಿನಲ್ ಪಿತೂರಿಯಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಗಳನ್ನು ದೋಷಿಗಳೆಂದು ಘೋಷಿಸಿದರು. ಆರೋಪಿಗಳನ್ನು ಕಾನೂನುಬಾಹಿರ ಸಭೆ, ಗಲಭೆ ಮತ್ತು ಕೊಲೆಗೆ ಸಂಬಂಧಿಸಿದ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿಯೂ ದೋಷಿಗಳೆಂದು ಘೋಷಿಸಲಾಗಿದೆ ಎಂದು ನ್ಯಾಯಾಲಯ ಹೇಳಿದೆ. ಇದರಲ್ಲಿ ಐಪಿಸಿ ಸೆಕ್ಷನ್ 302 ಜೊತೆಗೆ ಸೆಕ್ಷನ್ 120(ಬಿ) ಸೇರಿದೆ. ■10ನೇ ಪುಟಕ್ಕೆ

ನಟೇಶ್, ದಿನೇಶ್‌ಗೆ ನೋಟಿಸ್; ಮುಡಾ ಅಕ್ರಮಕ್ಕೆ ಕನ್ನಡಿ

ಮೈಸೂರು, ಏ.16– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಮಾಜಿ ಆಯುಕ್ತರುಗಳಾದ ಡಿ.ಬಿ.ನಟೇಶ್ ಹಾಗೂ ಜಿ.ಟಿ. ದಿನೇಶ್‌ಕುಮಾರ್ ಅಧಿಕಾರಾವಧಿಯಲ್ಲಿ ಅಕ್ರಮ ಹಾಗೂ ನಿಯಮ ಉಲ್ಲಂಘನೆ ನಡೆದಿದೆ ಎಂಬ ನಿವೃತ್ತ ನ್ಯಾಯಾಧೀಶರಾದ ಪಿ.ಎನ್.ದೇಸಾಯಿ ಅವರ ಅಧ್ಯಕ್ಷತೆಯ ಏಕ ಸದಸ್ಯ ವಿಚಾರಣಾ ಆಯೋಗದ ವರದಿ ಆಧರಿಸಿ, ರಾಜ್ಯ ಸರ್ಕಾರವೇ ಈ ಇಬ್ಬರಿಗೂ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದು ತಡವಾಗಿ ಬೆಳಕಿಗೆ ಬಂದಿದೆ.



ನಟೇಶ್



ದಿನೇಶ್‌ಕುಮಾರ್

ಮುಡಾದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುಟುಂಬಕ್ಕೆ ಪರಿಹಾರ ರೂಪದಲ್ಲಿ ನಿವೇಶನ ಹಂಚಿಕೆ ಮಾಡಿದ್ದ ಪ್ರಕರಣ ಬೆಳಕಿಗೆ ಬಂದ ನಂತರದಲ್ಲಿ ಸಾಕಷ್ಟು ಬೆಳವಣಿಗೆ ನಡೆಯಿತು. ಈ ಪ್ರಕರಣದಲ್ಲಿ ಅಕ್ರಮ ನಡೆದಿದೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ವಾದಿಸಿದರೆ, ಅಧಿಕಾರಿಗಳು ಮಾತ್ರ ಈ ಆರೋಪ ನಿರಾಕರಿಸಿದರು. ನಿಯಮಬದ್ಧವಾಗಿಯೇ ಕ್ರಮ ವಹಿಸಲಾಗಿದೆ ಎಂದು ಸಿದ್ದರಾಮಯ್ಯ ಕುಟುಂಬಕ್ಕೆ ನಿವೇಶನ ■10ನೇ ಪುಟಕ್ಕೆ

ಮಹಿಳಾ ಮೀಸಲಾತಿ ವಿರೋಧಿಗಳಿಗೆ ಮೋದಿ ವಾರ್ನ್!

ಭಾರೀ ಬೆಲೆ ತೆರಬೇಕಾಗುತ್ತೆ

ನವದೆಹಲಿ, ಏ.16– ಮಹಿಳಾ ಮಸೂದೆ ಅಂಗೀಕಾರಕ್ಕಾಗಿ ಗುರುವಾರ ಸಂಸತ್ತಿನ ವಿಶೇಷ ಅಧಿವೇಶನ ಆರಂಭವಾಗಿದೆ. ಲೋಕಸಭೆಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಮಹಿಳಾ ಮೀಸಲಾತಿಯನ್ನು ವಿರೋಧಿಸುವವರನ್ನು ದೇಶಾದ್ಯಂತ ಮಹಿಳೆಯರು ಕ್ಷಮಿಸುವುದಿಲ್ಲ ಅವರು ದೀರ್ಘಕಾಲದವರೆಗೆ ಬೆಲೆ ತೆರಬೇಕಾಗುತ್ತದೆ ಎಂದು ಪ್ರತಿಪಕ್ಷಗಳಿಗೆ ಎಚ್ಚರಿಕೆ ನೀಡಿದರು.



ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗಳ ಕುರಿತು ಮಾತನಾಡಿದ ಪ್ರಧಾನಿ ಮೋದಿ, ಮಹತ್ವದ ಮಸೂದೆಗಳ ಕುರಿತು ಬೆಳಗ್ಗೆಯಿಂದ ಚರ್ಚೆ ನಡೆದಿದೆ. ಹಲವು ಸದಸ್ಯರು ಬೇರೆ ಬೇರೆ ವಿಷಯ ಎತ್ತಿದ್ದಾರೆ. ಸದನಕ್ಕೆ ನಿಖರವಾದ ಮಾಹಿತಿ ಒದಗಿಸುತ್ತೇವೆ ಎಂದು ತಿಳಿಸಿದರು. 25–30 ವರ್ಷಗಳ ಹಿಂದೆಯೇ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕಾಗಿತ್ತು. ಈಗ ಅದನ್ನು ಹೆಚ್ಚು ಪ್ರಬುದ್ಧ ಹಂತಕ್ಕೆ ತರಲಾಗಿದೆ. ಅಗತ್ಯಗಳಿಗೆ ಅನುಗುಣವಾಗಿ ಕಾಲಾನಂತರದಲ್ಲಿ ಇದನ್ನು ಪರಿಷ್ಕರಿಸಲಾಗುವುದು ಎಂದು ಹೇಳಿದರು.

ಅಗತ್ಯಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ಇದನ್ನು ಪರಿಷ್ಕರಿಸಲಾಗುತ್ತದೆ. ಇದು ಪ್ರಜಾಪ್ರಭುತ್ವದ ಸೌಂದರ್ಯ. ನಮ್ಮದು ಪ್ರಜಾಪ್ರಭುತ್ವದ ತಾಯಿ. ನಮ್ಮ ಪ್ರಜಾಪ್ರಭುತ್ವ ಸಾವಿರಾರು ವರ್ಷಗಳಿಂದ ಅಭಿವೃದ್ಧಿ ಪ್ರಯಾಣವಾಗಿದೆ. ಈ ಸದನದಲ್ಲಿರುವ ನಾವೆಲ್ಲರೂ ಈ ಅಭಿವೃದ್ಧಿ ಪ್ರಯಾಣಕ್ಕೆ ಹೊಸ ಆಯಾಮವನ್ನು ಸೇರಿಸುವ ಶುಭ ಅವಕಾಶವಿದೆ ಎಂದರು.

ನಾನು ಅತ್ಯಂತ ಹಿಂದುಳಿದ ಸಮುದಾಯದಿಂದ ಬಂದಿದ್ದೇನೆ. ಆದರೆ ಎಲ್ಲರನ್ನೂ ಜೊತೆಗೆ ಕರೆದೊಯ್ಯುವುದು ನನ್ನ ಜವಾಬ್ದಾರಿಯಾಗಿದೆ. ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುವವರು ದೀರ್ಘಕಾಲದವರೆಗೆ ಬೆಲೆ ತೆರಬೇಕಾಗುತ್ತದೆ. ಮಹಿಳೆಯರಿಗೆ ಮೀಸಲಾತಿ ನೀಡುವ ಈ ಮಹತ್ವದ ಅವಕಾಶವನ್ನು ನಾವೆಲ್ಲರೂ ಕಳೆದುಕೊಳ್ಳಬಾರದು ಎಂದು ಹೇಳಿದರು.

ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ನಾವು ಅವರ ಹಕ್ಕುಗಳನ್ನು ನೀಡುತ್ತಿದ್ದೇವೆ. ನಮಗೆ ಯಾವುದೇ ಕ್ರೆಡಿಟ್ ಬೇಕಾಗಿಲ್ಲ, ಬೇಕಾದ್ರೆ ನೀವೆ ತಗೊಳ್ಳಿ, ಈ ವಿಚಾರದಲ್ಲಿ ರಾಜಕೀಯ ಮಾಡಬಾರದು. ಮಸೂದೆ ಬೆಂಬಲಿಸುವ ಮೂಲಕ ನಾವೆಲ್ಲರೂ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಬೇಕಾಗಿದೆ ಎಂದು ಪ್ರತಿಪಕ್ಷಗಳಿಗೆ ಪ್ರಧಾನಿ ಮನವಿ ಮಾಡಿದರು.

ಕ್ಷೇತ್ರ ಪುನರ್ ವಿಂಗಡಣೆ: ಉತ್ತರದಿಂದ ದಕ್ಷಿಣದವರೆಗೆ ಯಾವ ಅನ್ಯಾಯವೂ ಆಗಲ್ಲ

ಪ್ರಕ್ರಿಯೆ ಬಗ್ಗೆ ಪ್ರಧಾನಿ ಮೋದಿ ಗ್ಯಾರಂಟಿ!

ನವದೆಹಲಿ, ಏ.16– ಆಡಳಿತಾರೂಢ ಎನ್‌ಡಿಎ ಮತ್ತು ವಿಪಕ್ಷಗಳ ನಡುವೆ ಹಲವು ದಿನಗಳಿಂದ ಕಿತ್ತಾಟಕ್ಕೆ ಕಾರಣವಾಗಿರುವ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಯು ಯಾವುದೇ ಪಕ್ಷಪಾತ ಅಥವಾ ಅನ್ಯಾಯಯುತವಾಗಿ ಕೂಡಿರುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಭರವಸೆ ನೀಡಿದ್ದಾರೆ.

ಪೂರ್ವದಿಂದ ಪಶ್ಚಿಮದವರೆಗೆ, ಉತ್ತರದಿಂದ ದಕ್ಷಿಣದವರೆಗೆ ಯಾವುದೇ ರಾಜ್ಯಕ್ಕೆ ಯಾವುದೇ ಅನ್ಯಾಯವಾಗುವುದಿಲ್ಲ ಎಂದು ಗ್ಯಾರಂಟಿ ಕೊಡುತ್ತೇನೆ ಎಂದು ಪ್ರಧಾನಿ ಮೋದಿ ಲೋಕಸಭೆಯಲ್ಲಿ ಹೇಳಿದ್ದಾರೆ. ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆ, ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಕಾನೂನು ತಿದ್ದುಪಡಿ ಮಸೂದೆ ಕುರಿತು ಆಡಳಿತರೂಢ ಎನ್‌ಡಿಎ ಹಾಗೂ ವಿರೋಧ ಪಕ್ಷಗಳ ಸದಸ್ಯರು ಬೆಳಗ್ಗೆಯಿಂದ ಚರ್ಚೆ ನಡೆಸಿದ್ದು, ರಾಜಕೀಯ ಲಾಭಕ್ಕಾಗಿ ಕ್ಷೇತ್ರ ಪುನರ್ ವಿಂಗಡಣೆ ಮಾಡಲಾಗುತ್ತಿದೆ ಎಂಬುದು ವಿರೋಧ ಪಕ್ಷಗಳ ಟೀಕೆಗೆ ಕಾರಣವಾಯಿತು.

ಈ ಟೀಕೆ ಕುರಿತು ಪ್ರತಿಕ್ರಿಯಿಸಿದ ಪ್ರಧಾನಿ ನರೇಂದ್ರ ಮೋದಿ, ಉತ್ತರ ಅಥವಾ ದಕ್ಷಿಣವಾಗಲಿ, ಈ ಪ್ರಕ್ರಿಯೆಯಿಂದ ಯಾವುದೇ ತಾರತಮ್ಯ, ಅನ್ಯಾಯ ಆಗಲ್ಲ ಎಂದು ಭರವಸೆ ನೀಡಲು ಬಯಸುತ್ತೇನೆ. ನೀವು ಗ್ಯಾರಂಟಿ ಎಂಬ ಪದ ಬಳಸಬೇಕೆಂದು ಬಯಸಿದರೆ, ನಾನು ಅದನ್ನು ಬಳಸುತ್ತೇನೆ, ■10ನೇ ಪುಟಕ್ಕೆ

ಮೈಸೂರಲ್ಲಿ ಮನೆ ಗಣತಿ ಆರಂಭ

ಮೇ 15ರವರೆಗೆ ಮನೆ–ಮನೆಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಲಿರುವ ಗಣತಿದಾರರು



ಗಣತಿದಾರರು ಹಾಗೂ ಮೇಲ್ವಿಚಾರಕರಿಂದ ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್ ಜಿಗಣಿ ಮಾಹಿತಿ ಪಡೆಯುತ್ತಿರುವುದು.

ಮೈಸೂರು, ಏ.16(ಎಂಟಿವೈ)– ಜಾತಿ ಜನಗಣತಿಗೆ ಪೂರಕವಾಗಿ ಇಂದಿನಿಂದ ಮನೆ ಬಾಗಿಲಿಗೆ ಗಣತಿದಾರರು ಹೋಗಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿ ಕಲೆ ಹಾಕಲು ಆರಂಭಿಸಿದ್ದು, ಹೀಗೆ ಸಂಗ್ರಹಿಸಲಾದ ಮಾಹಿತಿಯನ್ನು ಡಿಜಿಟಲೀಕರಣಗೊಳಿಸುತ್ತಿದ್ದಾರೆ.

2027ರಲ್ಲಿ ದೇಶದಾದ್ಯಂತ ಜಾತಿ ಜನಗಣತಿ ನಡೆಯಲಿದ್ದು, ಅದಕ್ಕೆ ಪೂರಕವಾಗಿ ಮನೆ ಪಟ್ಟಿ ಮತ್ತು ಮನೆಗಣತಿ ಮಾಡಲಾಗುತ್ತಿದೆ. ಏ.1ರಿಂದ 15ರ ವರೆಗೆ ಸಾರ್ವಜನಿಕರು ಆನ್‌ಲೈನ್ ಪೋರ್ಟಲ್ ಮೂಲಕ ಸ್ವಯಂಗಣತಿಗೆ ಅವಕಾಶ ನೀಡಲಾಗಿತ್ತು. ಆದರೆ, ಗಣತಿ ಪ್ರಕ್ರಿಯೆಯಲ್ಲಿ ಒಟ್ಟು 33 ಪ್ರಶ್ನೆಗೆ ಉತ್ತರಿಸಬೇಕಾಗಿರುವುದರಿಂದ ಹಾಗೂ ಲೊಕೇಷನ್ ದಾಖಲಿಸಲು ತಾಂತ್ರಿಕ ದೋಷ ಕಂಡು ಬಂದಿದ್ದರಿಂದ ಸ್ವಯಂ ಗಣತಿ ಪ್ರಕ್ರಿಯೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೇವಲ ಶೇ.1.8ರಷ್ಟು ಮಂದಿ ಮಾತ್ರ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾರೆ. ■10ನೇ ಪುಟಕ್ಕೆ

> ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮನೆ ಗಣತಿ ಪ್ರಕ್ರಿಯೆಗೆ ನಿಯೋಜಿತ ಸಿಬ್ಬಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಸ್ವಯಂ ಗಣತಿ ಪ್ರಕ್ರಿಯೆ ಅವಧಿ ಮುಗಿದ ಹಿನ್ನೆಲೆಯಲ್ಲಿ ಇಂದಿನಿಂದ ಮನೆ–ಮನೆ ಬಾಗಿಲಿಗೆ ಗಣತಿದಾರರು ಹೋಗಿ ಮಾಹಿತಿ ಕಲೆ ಹಾಕುತ್ತಿದ್ದಾರೆ. ನಿಗದಿತ ಅವಧಿಯೊಳಗೆ ಮನೆ ಗಣತಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಮೇಲ್ವಿಚಾರಕರು ಹಾಗೂ ಗಣತಿದಾರರಿಂದ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಏನಾದರು ಸಮಸ್ಯೆ ಎದುರಾದರೆ, ಅವುಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ.
>
> – ಸೋಮಶೇಖರ್ ಜಿಗಣಿ, ಉಪ ಆಯುಕ್ತ ಕಂದಾಯ ವಿಭಾಗ, ಮೈಸೂರು ಮಹಾನಗರ ಪಾಲಿಕೆ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ದಿನ ಹೋಟೆಲ್‌ನಲ್ಲಿ ಊಟ ಮಾಡಿದ್ದರಿಂದ ನಿಮಗೆ ಅಲ್ಸರ್ ಆಗಿದೆ.

ರೋಗಿ : ಹಾಗಾದ್ರೆ ಇವತ್ತಿನಿಂದ ಮನೆಗೆ ಪಾರ್ಸೆಲ್ ತಗೊಂಡು ಬಂದು ತಿಂತೀನಿ ಡಾಕ್ಟ್ರೆ.

ಮೈಸೂರು ಮಿತ್ರ

ಶುಕ್ರವಾರ, ಏಪ್ರಿಲ್ 17, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕಿರಿಯರಿದ್ದಾಗ ಹಿರಿಯರನ್ನು ಗೌರವಿಸಿ, ಸಬಲರಿದ್ದಾಗ ದುರ್ಬಲರಿಗೆ ಸಹಾಯ ಮಾಡಿ. ಯಾಕೆಂದರೆ ಬದುಕಿನಲ್ಲಿ ನೀವು ಒಂದು ದಿನ ಹಿರಿಯರಾಗುತ್ತೀರಿ. ದುರ್ಬಲರಾಗುತ್ತೀರಿ. – ಅಬ್ದುಲ್ ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಿನಯದಿಂದ ವಿಶ್ವವನ್ನು ಗೆಲ್ಲು, ಪರನಿಂದೆ ಮಹಾಪಾಪ

ನಿಮ್ಮ ಪತ್ರಗಳು

46 ವರ್ಷ ಪೂರೈಸಿದ ನಮ್ಮ ಹೆಮ್ಮೆಯ 'ಮೈಸೂರು ಮಿತ್ರ'

ಮಾನ್ಯರೇ,

ನಮ್ಮ ಹೆಮ್ಮೆಯ 'ಮೈಸೂರು ಮಿತ್ರ' 46 ವರ್ಷ ಪೂರೈಸಿದ ಸಂದರ್ಭದಲ್ಲಿ ದಿ. ಶ್ರೀ ಕೆ. ಬಿ. ಗಣಪತಿ ಅವರನ್ನು ಸ್ಮರಿಸುತ್ತಾ ವ್ಯವಸ್ಥಾಪಕ ಸಂಪಾದಕರಾದ ಶ್ರೀ ವಿಕ್ರಂ ಮುತ್ತಣ್ಣ ಹಾಗೂ ಸಂಪೂರ್ಣ ಪತ್ರಿಕಾ ಬಳಗಕ್ಕೆ ಅಭಿನಂದನೆಗಳು.

ಮೈಸೂರು ಮಿತ್ರ ಸ್ಥಾಪನೆ: 1980 47 ಅತ್ಯುತ್ತಮ ಪತ್ರಿಕೋದ್ಯಮ

'ಮೈಸೂರು ಮಿತ್ರ' ಆರಂಭವಾದ ದಿನದಿಂದ ತೀರಾ ಇತ್ತೀಚಿನವರೆಗೂ ಬಹುಷಃ ಆರೇಳು ವರ್ಷದ ಹಿಂದಿನವರೆಗೂ ದಿನನಿತ್ಯ ಪತ್ರಿಕೆ ಪ್ರಕಟಣೆ ಮಾಡುವಲ್ಲಿ ಪಡುತ್ತಿದ್ದ ಅಸಾಧಾರಣ ಕರ್ತವ್ಯ ನಿಷ್ಠೆ ಶ್ಲಾಘನೀಯ. ಇದು ಏಕೆ ಹೇಳಬೇಕೆಂದರೆ ನನ್ನ ಶಿವಮೊಗ್ಗ ಪತ್ರಿಕಾ ಸಂಪಾದಕ ಮಿತ್ರರೊಬ್ಬರು ಹೇಳುವಂತೆ ಪ್ರತಿದಿನ ಪತ್ರಿಕೆ ಹೊರಬರುವುದೆಂದರೆ ಅದು ಹೆರಿಗೆಯಾದಂತೆ ಎಂದು. ತಾಯಂದಿರು ತಮ್ಮ ಜೀವಿತಾವಧಿಯಲ್ಲಿ ಮೂರು–ನಾಲ್ಕು ಬಾರಿ ಈಗಂತೂ ಒಂದು–ಎರಡು ಬಾರಿ ಹೆರಿಗೆನೋವು ಅನುಭವಿಸುತ್ತಾರೆ. ಆದರೆ ಸಂಪಾದಕರು, ಪತ್ರಿಕಾ ಬಳಗ ಪ್ರತಿನಿತ್ಯ ಸುದ್ದಿಗಾಗಿ, ವರದಿಗಾಗಿ, ಜಾಹೀರಾತಿಗಾಗಿ, ಲೇಖನಗಳಿಗಾಗಿ ನಂತರ ಅದನ್ನೆಲ್ಲಾ ಸೇರಿಸಿ ಪತ್ರಿಕೆ ಪ್ರಕಟಣೆಗೆ ತಯಾರು ಮಾಡುವುದೂ ಮತ್ತು ಅದರಲ್ಲೂ ತಾವು ಪಾಲಿಸಿಕೊಂಡು ಬಂದ ಪತ್ರಿಕಾಧರ್ಮಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ದುಸ್ತರವಾದ ಹೆರಿಗೆಯೇ ಸರಿ ಅಲ್ಲವೇ...

ಈಗ ಬಿಡಿ cut and paste ಕಾಲ. ಇಂತಹ ಕಾಲದಲ್ಲೂ ನಿಖರತೆಗೆ ಮಹತ್ವ, ಪತ್ರಿಕಾ ಧರ್ಮಕ್ಕೆ ಚ್ಯುತಿ ಬಾರದಂತೆ ವೃತ್ತಿ ಸಂಹಿತೆಯನ್ನು ಕಾಯುತ್ತಲೇ ಪತ್ರಿಕೆಯೊಂದನ್ನು ನಡೆಸಿಕೊಂಡು ಹೋಗುವುದು ಸವಾಲೇ ಸರಿ. ಆ ಸವಾಲನ್ನು ಎದುರಿಸುತ್ತಾ ಈ ಪತ್ರಿಕೆ ಮುನ್ನಡೆಯುತ್ತಿದೆ ಎಂದರೆ ಅದು ಪತ್ರಿಕೆಯ ಸಾಮರ್ಥ್ಯವನ್ನು ಅದರಲ್ಲಿ ಓದುಗರು ಇಟ್ಟಿರುವ ವಿಶ್ವಾಸವನ್ನು ತೋರಿಸುತ್ತದೆ. ಇಂದಿನ ಕಾಲಮಾನಕ್ಕೆ ತಕ್ಕಂತೆ ಪತ್ರಿಕೆಯ ವಿನ್ಯಾಸ, ಅಂಕಣಗಳನ್ನು ಹೆಚ್ಚು ಆಕರ್ಷಣೀಯಗೊಳಿಸಿ ಹೊಸ ಓದುಗರನ್ನೂ ತನ್ನತ್ತ ಸೆಳೆಯಬಲ್ಲ ವೃತ್ತಿಪರ ಕಾರ್ಯಕ್ಷಮತೆಗಳನ್ನು ತೋರಿದರೆ ಪತ್ರಿಕೆ ಇನ್ನಷ್ಟು ಬೆಳೆದು ಹೆಸರು ಮಾಡುವುದರಲ್ಲಿ ಸಂಶಯವಿಲ್ಲ.

ಇನ್ನೊಂದು ವಿಷಯ ಸಂಪಾದಕರು ಹೇಳಿದಂತೆ ಪತ್ರಿಕೆಗೆ ಸರ್ಕಾರಿ ಜಾಹೀರಾತು ಈಗ್ಗೆ ಮೂರು ವರ್ಷಗಳಿಂದ, ಅಂದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ 'ಮೈಸೂರು ಮಿತ್ರ'ನಿಗೆ ದೊರಕುತ್ತಿಲ್ಲ ಎಂಬುದು ವಿಷಾದಕರ ಸಂಗತಿ. ಇದರ ಹಿಂದಿರುವ ಕುತಂತ್ರವಾದರೂ ಏನು?. ಅಧಿಕಾರದಲ್ಲಿರುವವರು ಅದಕ್ಕಿಂತ ಹೆಚ್ಚಾಗಿ ಅವರಿಗೆ ಬಕೆಟ್ ಹಿಡಿದು ಬದುಕುವವರು ಇಂತಹ ಕ್ಷುಲ್ಲಕ ಕೀಟಲೆಗಳನ್ನು ಮಾಡುತ್ತಾ ತಮ್ಮ ಒಡೆಯನನ್ನು ಮೆಚ್ಚಿಸಬಹುದು ಎಂಬ ಮಾನಸಿಕತೆ ಹೊಂದಿರುತ್ತಾರೆ. ಅದರ ಫಲವೇ ಈ ರೀತಿಯ ಕಿರುಕುಳ, ಕಾಟ ಇತ್ಯಾದಿ. ಅಂತಹ ತೊಂದರೆಗಳ ನಡುವೆಯೂ ಪತ್ರಿಕಾ ಧರ್ಮವನ್ನು ಬಿಡದೆ ಸ್ವಂತಿಕೆಯನ್ನು ಕಾಯ್ದುಕೊಳ್ಳುವುದು ಶ್ಲಾಘನೀಯ..

ಮೈಸೂರು ಜನಪ್ರತಿನಿಧಿಗಳು ಅದರಲ್ಲೂ ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದಕ್ಕೆ ಉತ್ತರಿಸಬೇಕು. ಅಧಿಕಾರದ ಪ್ರಮಾಣ ವಚನ ಸ್ವೀಕರಿಸುವಾಗ ಯಾವುದೇ ರಾಗ, ದ್ವೇಷ ಅಥವಾ ಪಕ್ಷಪಾತ ಮಾಡುವುದಿಲ್ಲವೆಂಬುದು, ನಂತರ ಹೀಗೆ ತಾರತಮ್ಯ ಮಾಡುವುದು ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೆ ಮಾಡುವ ಅಪಚಾರವಲ್ಲವೇ.. ಈ ಬಗ್ಗೆ ಸರ್ಕಾರದ ಸ್ಪಷ್ಟೀಕರಣ ಬೇಕಾಗಿದೆ. ಅದು ಇಂದಿನ ಯುವಪೀಳಿಗೆ ದೈನಂದಿನ ಪತ್ರಿಕೆಗಳನ್ನು ಕೊಂಡು ಓದುವುದು, ಗ್ರಂಥಾಲಯಕ್ಕೆ ಹೋಗುವುದು ವಿರಳವೇ. ಅದಕ್ಕೆ ಈ ಮೊಬೈಲ್ ರಾಕ್ಷಸನ ಹಾವಳಿಯು ಇರಬಹುದು. ಇಷ್ಟೆಲ್ಲಾ ಕಷ್ಟ ಕಾರ್ಪಣ್ಯದ ನಡುವೆಯೂ 'ಮೈಸೂರು ಮಿತ್ರ' ಯಶಸ್ವೀ ಪತ್ರಿಕೆಯಾಗಿ ಮೈಸೂರಿನಲ್ಲಿ ಮುಂದುವರಿಯುತ್ತಿರುವುದು ಸಂತಸದ ಸಮಾಚಾರ. ವಸ್ತುನಿಷ್ಠ ವರದಿ, ಹೇಳಬೇಕೆನ್ನುವ ವಿಚಾರದಲ್ಲಿ ನಿಖರತೆ ಇದಕ್ಕೆ ಕಾರಣವಿರಬಹುದು.

ಸರಿ ಸುಮಾರು 17 ವರ್ಷದಿಂದ ನಾನು 'ಮೈಸೂರು ಮಿತ್ರ' ಓದುಗನಾಗಿದ್ದು, ಮಧ್ಯೆ ಸ್ವಲ್ಪ ಬೇರೆ ಊರಿನಲ್ಲಿದ್ದುದರಿಂದ ಸಂಪರ್ಕ ತಪ್ಪಿತ್ತು.

ಎಲ್ಲಾ ಸಮಸ್ಯೆಗಳ ನಡುವೆ ಪತ್ರಿಕೋದ್ಯಮಕ್ಕೆ 'ಮೈಸೂರು ಮಿತ್ರ'ನ ಕೊಡುಗೆ ಅವಿಸ್ಮರಣೀಯ ಹಾಗೂ ಅದೊಂದು ನಮ್ಮ ಜೀವನದ ಅವಿಭಾಜ್ಯ ಅಂಗವೆನಿಸಿರುವುದು ನನಗಂತೂ ಹೆಮ್ಮೆ. ನಮ್ಮ ಬೆಳಿಗ್ಗೆಯ ಕಾರ್ಯಕ್ರಮ ಬಿಸಿ–ಬಿಸಿ ಕಾಫಿಯೊಡನೆ 'ಮಿತ್ರ'ನನ್ನು ಓದುವುದರೊಂದಿಗೆ ಆರಂಭವಾಗಿರುವುದು ನಮಗಂತೂ ಚೈತನ್ಯದಾಯಕ ಕೆಲಸವೇ ಸರಿ.

'ಮಿತ್ರ' ನಿನ್ನ ಪಯಣ 50–75–100 ಆಗಲಿ. ಅದರ ಹೆಜ್ಜೆಯ ನಿಖರತೆ ಹಾಗೂ ನೋಟದ ಪ್ರಖರತೆ ಇನ್ನೂ ಹೆಚ್ಚು ಹೆಚ್ಚಾಗಲಿ.. ಶುಭವಾಗಲಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು.


ದಿಕ್ಕು ತಪ್ಪುತ್ತಿರುವ ಕೊಲ್ಲಿ ಸಮರ

ಮಾನ್ಯರೆ,

ಕೊಲ್ಲಿಯಲ್ಲಿ ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸುತ್ತಿದ್ದ ಯುದ್ಧದ ನಿಲುಗಡೆಗಾಗಿ ಕರೆಯಲಾಗಿದ್ದ ಪಾಕಿಸ್ತಾನ ನೇತೃತ್ವದ ಸಭೆ ವಿಫಲವಾಗುವುದರೊಂದಿಗೆ ಕೊಲ್ಲಿಯಲ್ಲಿ ಅನಿಶ್ಚಿತ ಪರಿಸ್ಥಿತಿ ಮುಂದುವರೆದಿದೆ. ಈಗಾಗಲೇ ಹಾರ್ಮುಜ್ ಜಲಸಂಧಿಯನ್ನು ತನ್ನ ವಶಕ್ಕೆ ಪಡೆದಿರುವ ಅಮೆರಿಕ ಈ ಜಲಸಂಧಿಯನ್ನು ದಾಟುವ ಎಲ್ಲಾ ಹಡಗುಗಳನ್ನು ಹೊಡೆದುರುಳಿಸುವುದಾಗಿ ದಮಕಿ ಹಾಕಿದೆ. ಈ ಬೆದರಿಕೆಗೆ ಮಣಿಯದ ಚೈನಾ ದೇಶದ ಹಡಗುಗಳು ಜಲಸಂಧಿಯನ್ನು ದಾಟಿ ತಮ್ಮ ದೇಶದತ್ತ ಹೊರಟಿವೆ.

ಅಂತರಾಷ್ಟ್ರೀಯ ಪೊಲೀಸ್ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹುಚ್ಚಾಟಗಳಿಗೆ ಕೊನೆ ಮೊದಲೇ ಇಲ್ಲವಾಗಿವೆ. ಇದೀಗ ತಾನು ಏಸುಕ್ರಿಸ್ತನ ಅವತಾರವೆಂದು ಬಿಂಬಿಸಿಕೊಂಡು, ಮತ್ತೊಂದು ಕಪಿಚೇಷ್ಟೆ ಪ್ರಾರಂಬಿಸಿರುವ ಟ್ರಂಪ್, ಇಡೀ ಇರಾನ್ ದೇಶವನ್ನು ವಿಶ್ವ ಭೂಪಟದಿಂದ ಅಳಿಸಿಹಾಕುವುದಾಗಿ ಮತ್ತೊಮ್ಮೆ ಗುಟುರು ಗರೆದಿದ್ದಾರೆ. ಇವರ ಈ ಹುಚ್ಚಾಟಗಳಿಂದ ಇಡೀ ವಿಶ್ವವೇ ಆತಂಕದ ಅಂಚಿಗೆ ಸಿಲುಕಿದ್ದು, ಚೈನಾ, ರಷ್ಯಾ ಸೇರಿದಂತೆ ವಿಶ್ವದ ಪ್ರಮುಖ ರಾಷ್ಟ್ರಗಳು ಇನ್ನಾದರೂ ಗಾಢ ನಿದ್ರೆಯಿಂದ ಎದ್ದು, ಅಮೆರಿಕದ ಅಧ್ಯಕ್ಷರಿಗೆ ಸರಿಯಾದ ಪಾಠವನ್ನು ಕಲಿಸುವುದು ಅಗತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಸದ್ಗುರು

ಸಂಸ್ಥಾಪಕರು, ಇಶಾ ಫೌಂಡೇಶನ್

ಅನುಭಾವದ ಚಿಂತನೆಗಳು

ಸಂಬಂಧಗಳು ಸಂತೋಷದ ಅಭಿವ್ಯಕ್ತಿಯಾಗಿರಬೇಕು...

ಬಹಳ ಜನರಿಗೆ, ಅವರು ಹೊಂದಿರುವ ಸಂಬಂಧಗಳ ಗುಣಮಟ್ಟವು, ಅವರ ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಈ ಸಂಬಂಧಗಳ ಪ್ರಭಾವ ನಿಮ್ಮ ಮೇಲೆ ಅಷ್ಟಿರಬೇಕಾದರೆ, ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಈ ಸಂಬಂಧಗಳ ತಳಹದಿ ಏನು? ಮಾನವನಿಗೆ ಸಂಬಂಧಗಳು ಏಕೆ ಬೇಕು? ವಿಧವಿಧವಾದ ಮಟ್ಟದಲ್ಲಿ ಸಂಬಂಧಗಳ ಬೆಸುಗೆಯಾಗುತ್ತದೆ; ತರತರಹದ ಅಗತ್ಯಗಳನ್ನು ಪೂರೈಸಲು ಸಂಬಂಧಗಳು ಹುಟ್ಟಿಕೊಳ್ಳುತ್ತವೆ. ದೈಹಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ, ಆರ್ಥಿಕ, ಅಥವಾ ರಾಜಕೀಯ ಕಾರಣಗಳಿಗಾಗಿ ಸಂಬಂಧಗಳು ಹುಟ್ಟುತ್ತವೆ.

ಯಾವುದೇ ರೀತಿಯ ಸಂಬಂಧವಿರಲಿ, ಯಾವುದೇ ಗುಣವುಳ್ಳದ್ದಾಗಿರಲಿ, ಯಾವುದೋ ಒಂದು ಅಗತ್ಯವನ್ನು ನೆರವೇರಿಸಲು ಹುಟ್ಟುತ್ತದೆ. ನೀವು ಹೇಳಬಹುದು, 'ಇಲ್ಲ, ನನಗೆ ತೆಗೆದುಕೊಳ್ಳುವ ಅಗತ್ಯವಿಲ್ಲ. ನಾನು ಬರೀ ಕೊಡುತ್ತೇನೆ.' ಆದರೆ ಕೊಡುವುದು ಕೂಡ ಒಂದು ಅಗತ್ಯವಲ್ಲವೇ? 'ನಾನು ಯಾರಿಗಾದರೂ ಕೊಡಬೇಕು' ಎಂಬುದು 'ನಾನು ಯಾರಿಂದಾದರೂ ಪಡೆಯಬೇಕು' ಎಂಬ ಅಗತ್ಯಕ್ಕೆ ಸಮ. ವಿಧವಿಧವಾದ ಅಗತ್ಯಗಳು ಇರುತ್ತವೆ; ಹಾಗೆ ಸಂಬಂಧಗಳಲ್ಲಿ ಕೂಡ ವೈವಿಧ್ಯತೆ ಇರುತ್ತದೆ.

ಮಾನವರ ಅಗತ್ಯಗಳು ಏಕೆ ಹೆಚ್ಚಾಗುತ್ತಿವೆಯೆಂದರೆ, ಅವರು ತಮ್ಮಲ್ಲಿನ ಅಪೂರ್ಣತೆಯನ್ನು ಹೋಗಲಾಡಿಸಲು, ಸಂಬಂಧಗಳ ಮೊರೆ ಹೋಗುತ್ತಿದ್ದಾರೆ. ಸಂಬಂಧಗಳಿಂದ ತಾವು ಪೂರ್ಣತೆಯನ್ನು ಅನುಭವಿಸಬಹುದು ಎಂದು ಸಂಬಂಧಗಳ ಮೊರೆ ಹೋಗುತ್ತಿದ್ದಾರೆ. ನಿಮಗೆ ಪ್ರಿಯರಾದವರೊಂದಿಗೆ ಸಂಬಂಧವನ್ನು ಹೊಂದಿದಾಗ, ನಿಮ್ಮಲ್ಲಿ ಸಂಪೂರ್ಣತೆಯ ಭಾವ ಹುಟ್ಟುತ್ತದೆ. ಅದು ಇಲ್ಲವಾದಲ್ಲಿ, ಅಪೂರ್ಣತೆ ಕಾಡುತ್ತದೆ. ಯಾಕೆ ಹೀಗೆ? ಈ ಜೀವ ಆಗಲೇ ಪೂರ್ಣತೆಯನ್ನು ಹೊಂದಿದೆ. ಆದರೂ ಕೂಡ, ಸಂಬಂಧದಿಂದ 'ನಾನು ಪೂರ್ಣಗೊಳ್ಳುವೆ' ಎಂದೇಕೆ ಭಾವಿಸುತ್ತದೆ? ಇದು ಏಕೆಂದರೆ ನಾವು ಇನ್ನೂ ನಮ್ಮ 'ಈ ಜೀವ'ವನ್ನು ಪೂರ್ತಿಯಾಗಿ ಅನ್ವೇಷಿಸಿಲ್ಲ. ಅದರ ಆಳವನ್ನು ಇನ್ನೂ ಅಳೆದಿಲ್ಲ. ಇದು ಮೂಲ ಸಂಗತಿಯಾದರೂ, ಸಂಬಂಧಗಳಿಗೆ ಸಂಕೀರ್ಣವಾದ ಪ್ರಕ್ರಿಯೆ ಇದೆ. ಅವುಗಳಲ್ಲಿ ವಿಧವಿಧವಾದ ನೀರಿಕ್ಷೆಗಳು ಇವೆ.

ಈ ನಿರೀಕ್ಷೆಗಳು ಎಷ್ಟಿವೆ ಎಂದರೆ, ಅವುಗಳನ್ನು ಪೂರೈಸಲು ಯಾವ ಮನುಷ್ಯನಿಗೂ ಸಾಧ್ಯವಿಲ್ಲ. ಅದರಲ್ಲೂ ಗಂಡು–ಹೆಣ್ಣು ಸಂಬಂಧದಲ್ಲಿ ಹೇಗಿವೆ ಎಂದರೆ ನೀವು ದೇವತೆಯನ್ನು ಮದುವೆಯಾದರೂ, ನಿಮಗೆ ತೃಪ್ತಿ ಆಗುವುದಿಲ್ಲ. ಈ ನಿರೀಕ್ಷೆಗಳು ಮತ್ತು ಅವುಗಳ ಮೂಲ ಅರ್ಥವಾಗದಿದ್ದರೆ, ಅವುಗಳನ್ನು ಪೂರೈಸಲು ಆಗುವುದಿಲ್ಲ. ಇವುಗಳ ಮೂಲ ನಿಮಗೆ ಅರ್ಥವಾದಲ್ಲಿ, ಒಂದು ಸುಂದರ ಪಾಲುದಾರಿಕೆ ರೂಪಗೊಳ್ಳುವುದು.

ಮೂಲಭೂತವಾಗಿ, ನೀವು ಸಂಬಂಧವನ್ನು ಏಕೆ ಅರಸುತ್ತೀರಿ? ನಿಮ್ಮ ಬದುಕಿನಲ್ಲಿ ಯಾವ ಸಂಬಂಧವೂ ಇಲ್ಲವಾದಲ್ಲಿ, ನೀವು ಖಿನ್ನರಾಗುವಿರಿ. ಹಾಗಾಗಿ ನೀವು ಸಂತೋಷವಾಗಿರಲು, ಸಂಬಂಧಗಳ ಮೊರೆ ಹೋಗುವಿರಿ. ಇನ್ನೊಬ್ಬರನ್ನು ನಿಮ್ಮ ಸಂತೋಷಕ್ಕಾಗಿ ಬಳಸಿಕೊಳ್ಳುವಿರಿ. ಅದೇ ಒಂದು ವೇಳೆ ನಿಮ್ಮ ಸಹಜ ಪ್ರಕೃತಿಯಿಂದ ನೀವು ಸಂತೋಷದಿಂದ ಇದ್ದರೆ, ಸಂಬಂಧಗಳು ಸಂತೋಷವನ್ನು ಅರಸುವ ಸಾಧನವಲ್ಲ, ವ್ಯಕ್ತಪಡಿಸುವ ಸಾಧನವಾಗುತ್ತದೆ. ಒಬ್ಬರನ್ನೊಬ್ಬರನ್ನು ಹಿಂಡಿ ನಾವು ಸಂತೋಷವನ್ನು ಕಂಡುಕೊಳ್ಳುವ ವಿಧಾನ ಬಹಳ ನೋವು ತರುವುದು.



> “ ಯಾವುದೇ ದೈಹಿಕ, ಮಾನಸಿಕ, ಭಾವನಾತ್ಮಕ ಅಗತ್ಯವನ್ನು ಪೂರೈಸುವ ಸಲುವಾಗಿರಲಿ, ನೀವು ಕೇವಲ ಹಂಬಲಿಸುತ್ತಿರುವಿರಿ, ಒಂದಾಗಲು ಎಂದೂ ಸಾಧ್ಯವಿಲ್ಲ. ಒಂದಾಗುವಿಕೆ ಕ್ಷಣಗಳು ಅಲ್ಲಿ ಇಲ್ಲಿ ಸಿಗಬಹುದು. ಆದರೆ ಅದು ಪೂರ್ಣವಾಗಿ ನಿಮಗೆ ದೊರೆಯುವುದಿಲ್ಲ. ಯೋಗ ನಿಮಗೆ ಈ ಜೀವನದ ಪರಿಪೂರ್ಣತೆಯ ಅರಿವು ಮತ್ತು ಅನುಭವವನ್ನು ಕೊಡುತ್ತದೆ. ಯೋಗದಿಂದ, ಸಂಬಂಧದಲ್ಲಿ ನಮ್ಮ ಅಗತ್ಯಗಳು ಗಣ್ಯವಾಗಿ, ಇನ್ನೊಬ್ಬರ ಅಗತ್ಯವನ್ನು ಗಮನಿಸುವ ಅವಕಾಶ ದೊರಕುತ್ತದೆ. ನಮ್ಮಲ್ಲಿ ಯಾವಾಗ ಕಡ್ಡಾಯ ಪ್ರವೃತ್ತಿ ಇಲ್ಲದೆ ಹೋಗುತ್ತದೆಯೋ, ಆಗ ಸಂಬಂಧವು ಹೋರಾಟ, ಹಂಬಲ ಆಗುವುದಿಲ್ಲ. ಬದಲಿಗೆ ಅದು ಒಂದು ವರವಾಗುತ್ತದೆ.

ಮೊದಮೊದಲಿಗೆ, ನೀವು ಖುಷಿಯನ್ನು ಅನುಭವಿಸಬಹುದು. ಆದರೆ ಖುಷಿಯನ್ನು ವ್ಯಕ್ತಪಡಿಸಲು ಸಂಬಂಧಗಳನ್ನು ಬಳಸಿಕೊಂಡರೆ, ನಿಮ್ಮ ಬಗ್ಗೆ ಯಾರಿಗೂ ದೂರು ಇರುವುದಿಲ್ಲ. ಏಕೆಂದರೆ, ನೀವು ಇನ್ನೊಬ್ಬರಲ್ಲಿ ಸಂತೋಷವನ್ನು ಹುಡುಕುತ್ತಾ ಇಲ್ಲ.

ನಿಮ್ಮ ಜೀವನ ಸಂತೋಷವನ್ನು ಅರಸುವ ಕ್ರಿಯೆ ಆಗದೆ, ಸಂತೋಷವನ್ನು ವ್ಯಕ್ತಪಡಿಸುವ ಸಾಧನವಾದರೆ, ಸಂಬಂಧಗಳು ಸಹಜವಾಗಿ ಸುಂದರವಾಗಿರುತ್ತವೆ. ನಿಮ್ಮ ಜೀವನದಲ್ಲಿ ಎಷ್ಟೇ ಸಂಬಂಧಗಳಿದ್ದರೂ ಕೂಡ, ಅವುಗಳೆಲ್ಲ ಸುಂದರವಾಗಿರುತ್ತವೆ. ಇನ್ನೊಬ್ಬರ ನೀರಿಕ್ಷೆಯನ್ನು ಪೂರೈಸುವ ಸರ್ಕಸ್ ಮಾಡಬೇಕಾಗಿಲ್ಲ. ನೀವು ಸಂತೋಷದ ಬುಗ್ಗೆಯಾದಲ್ಲಿ, ಎಲ್ಲರೂ ನಿಮ್ಮೊಂದಿಗೆ ಇರಲು ಬಯಸುತ್ತಾರೆ. ಸಂತೋಷವನ್ನು ಅರಸುವ ಬದಲು ವ್ಯಕ್ತಪಡಿಸುವ ಬದುಕು ನಿಮ್ಮದಾದರೆ, ಸಂಬಂಧಗಳು ಎಲ್ಲ ಹಂತಗಳಲ್ಲಿ ಒಳ್ಳೆಯ ರೀತಿಯಲ್ಲಿ ಇರುತ್ತವೆ.

ಸದ್ಯಕ್ಕೆ ನಿಮ್ಮ ದೇಹ ಹೇಗೆ ರಚನೆಯಾಗಿದೆಯೆಂದರೆ, ಅಗತ್ಯವನ್ನು ಪೂರೈಸಲು ಸಂಬಂಧ ಬೇಕಾಗುತ್ತದೆ. ಹಾಗೆ ಮನಸ್ಸು ಮತ್ತು ಭಾವನೆಗಳು ಕೂಡ. ಆಳವಾಗಿ ನೋಡಿದರೆ, ನಿಮ್ಮ ಜೀವಶಕ್ತಿ ಹೇಗಿದೆ ಎಂದರೆ, ಅದರ ಅಗತ್ಯವನ್ನು ಪೂರೈಸಲು ಕೂಡ, ಸಂಬಂಧದ ಅನಿವಾರ್ಯತೆ ಇದೆ. ದೈಹಿಕ ಅಗತ್ಯವನ್ನು ಪೂರೈಸಲು ಸಂಬಂಧ ಹುಟ್ಟಿದಾಗ, ಅದಕ್ಕೆ ಲೈಂಗಿಕತೆ ಎನ್ನುತ್ತೇವೆ. ಮಾನಸಿಕ ಅಗತ್ಯವನ್ನು ಪೂರೈಸುವ ಸಂಬಂಧಕ್ಕೆ ಒಡನಾಟವೆನ್ನುತ್ತೇವೆ. ಭಾವನೆಗಳ ಸಂಬಂಧಕ್ಕೆ ಪ್ರೀತಿ ಎನ್ನುತ್ತೇವೆ. ಹಾಗೆ, ಜೀವಶಕ್ತಿಯ ಸಂಬಂಧಕ್ಕೆ ಯೋಗ ಎಂದು ಕರೆಯುತ್ತೇವೆ.

ಈ ಎಲ್ಲ ಪ್ರಯತ್ನಗಳಿಂದ–ಅದು ಲೈಂಗಿಕತೆ, ಒಡನಾಟ, ಪ್ರೀತಿ ಅಥವಾ ಯೋಗವಾಗಿದ್ದರೂ–ನೀವು ಬೇರೆಯದರೊಂದಿಗೆ ಒಂದಾಗಲು ಏಕೆ ಪ್ರಯತ್ನಿಸುತ್ತಿದ್ದೀರಿ ಎಂದರೆ, ಹೇಗಾದರೂ ಈಗ 'ನೀವು ಯಾರು' ಎಂಬುದು ಸಾಕಾಗುವುದಿಲ್ಲ. ನೀವು ಬೇರೆಯವರೊಂದಿಗೆ ಹೇಗೆ ಒಂದಾಗಬಹುದು? ದೈಹಿಕವಾಗಿ ನೀವು ಪ್ರಯತ್ನಿಸಿದ್ದೀರಿ. ನೀವು ಅದನ್ನು ಮಾಡಲು ಹೊರಟಿರುವಂತೆ ತೋರುತ್ತಿದೆ, ಆದರೆ ಅದು ಸಾಧ್ಯವಾಗಿಲ್ಲ ಎಂದು ನಿಮಗೆ ತಿಳಿದಿದೆ. ಮಾನಸಿಕವಾಗಿ ನೀವು ಪ್ರಯತ್ನಿಸಿದ್ದೀರಿ, ನೀವು ನಿಜವಾಗಿಯೂ 'ಅಲ್ಲಿದ್ದೀರಿ' ಎಂದು ನೀವು ಅನೇಕ ಬಾರಿ ಭಾವಿಸಿದ್ದೀರಿ ಆದರೆ ಎರಡು ಮನಸ್ಸುಗಳು ಎಂದಿಗೂ ಒಂದಲ್ಲ ಎಂದು ನಿಮಗೆ ತಿಳಿದಿದೆ. ಭಾವನಾತ್ಮಕವಾಗಿ ನೀವು ಅದನ್ನು ನಿಜವಾಗಿಯೂ ಮಾಡಿದ್ದೀರಿ ಎಂದು ಭಾವಿಸಿದ್ದೀರಿ. ಆದರೆ ವ್ಯತ್ಯಾಸಗಳು ಬಹಳ ಸುಲಭವಾಗಿ ಬರುತ್ತವೆ.

ಹಾಗಾದರೆ ಈ ಒಂದಾಗುವ ಹಂಬಲವನ್ನು ಹೇಗೆ ಪೂರೈಸಬೇಕು? ನೀವು ಗಮನಿಸಿರಬಹುದು–ನೀವು ಬಹಳ ಸಂತೋಷದಲ್ಲಿದ್ದಾಗ, ಬಹಳ ಉತ್ಸುಕರಾಗಿದ್ದಾಗ, ನಿಮ್ಮನ್ನು ಮೀರಿ ನೀವು ಹೋದಂತೆ ಅನ್ನಿಸುತ್ತದೆ. ಒಂದು ರೀತಿಯಿಂದ ನೀವು ವಿಸ್ತಾರವಾದಂತೆ ಅನ್ನಿಸುತ್ತದೆ. ಇದು ಏನು? ನಾನು ಎಂದರೇನು? ಹೇಗೆ ನಾವು 'ಇದು ನೀನು, ಇದು ನಾನು' ಎಂದು ನಿರ್ಧರಿಸುತ್ತೇವೆ? ನಮ್ಮ ಸಂವೇದನೆ ಎಲ್ಲಿಯವರೆಗೆ ಇದೆಯೋ, ಅಲ್ಲಿ ಗಡಿ ಹಾಕಿ, ಅಲ್ಲಿಯವರೆಗೆ ನಾವು ನಮ್ಮನ್ನು ಗುರುತಿಸುತ್ತೇವೆ. ಆ ಗಡಿಯಿಂದ ಹೊರಗಿರುವುದು ಇತರರು ಎಂದು ಗುರುತಿಸುತ್ತೇವೆ. ಆದರೆ ಈ ಗಡಿಗಳಿಂದ ನಾವು ನರಕಯಾತನೆ ಅನುಭವಿಸುತ್ತೇವೆ. ಆ ಗಡಿಯನ್ನು ಮೀರಿ ಮಾನವೀಯತೆಯನ್ನು ನಮ್ಮ ಒಂದು ಭಾಗವನ್ನಾಗಿಸಿಕೊಳ್ಳಲು ಬಯಸುತ್ತೇವೆ. ಹೀಗೆ ಇನ್ನೊಬ್ಬರನ್ನು ಅಥವಾ ಇನ್ನೊಂದನ್ನು ನಮ್ಮ ಜೀವನದ ಭಾಗವನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲಕ್ಕೆ ಸಂಬಂಧವೆನ್ನುತ್ತಾರೆ. ಇನ್ನೊಬ್ಬರನ್ನು ಅಥವಾ ಇನ್ನೊಂದನ್ನು ನಾವು ನಮ್ಮ ಜೀವನದಲ್ಲಿ ಸೇರಿಸಿಕೊಂಡಾಗ, ಸ್ವರ್ಗವೇ ನಮ್ಮ ಕೈಗೆ ಎಟುಕಿದ ಹಾಗೆ. ಆ ಸ್ವರ್ಗವನ್ನು ಬಾಚಿಕೊಳ್ಳುವ ಹತಾಶೆಯೇ, ಸಂಬಂಧಕ್ಕೆ ಎಡೆ ಮಾಡಿಕೊಡುತ್ತದೆ.

ಆ ಸಂಬಂಧದ ಹಂಬಲ ಏನೇ ಇರಲಿ, ಅದು ಯಾವುದೇ ದೈಹಿಕ, ಮಾನಸಿಕ, ಭಾವನಾತ್ಮಕ ಅಗತ್ಯವನ್ನು ಪೂರೈಸುವ ಸಲುವಾಗಿರಲಿ, ನೀವು ಕೇವಲ ಹಂಬಲಿಸುತ್ತಿರುವಿರಿ, ಒಂದಾಗಲು ಎಂದೂ ಸಾಧ್ಯವಿಲ್ಲ. ಒಂದಾಗುವಿಕೆಯ ಕ್ಷಣಗಳು ಅಲ್ಲಿ ಇಲ್ಲಿ ಸಿಗಬಹುದು. ಆದರೆ ಅದು ಸಂಪೂರ್ಣವಾಗಿ ನಿಮಗೆ ದೊರೆಯುವುದಿಲ್ಲ. ಯೋಗ ನಿಮಗೆ ಈ ಜೀವನದ ಪರಿಪೂರ್ಣತೆಯ ಅರಿವು ಮತ್ತು ಅನುಭವವನ್ನು ಕೊಡುತ್ತದೆ. ಯೋಗದಿಂದ, ಸಂಬಂಧದಲ್ಲಿ ನಮ್ಮ ಅಗತ್ಯಗಳು ಗಣ್ಯವಾಗಿ, ಇನ್ನೊಬ್ಬರ ಅಗತ್ಯವನ್ನು ಗಮನಿಸುವ ಅವಕಾಶ ದೊರಕುತ್ತದೆ. ನಮ್ಮಲ್ಲಿ ಯಾವಾಗ ಕಡ್ಡಾಯ ಪ್ರವೃತ್ತಿ ಇಲ್ಲದೆ ಹೋಗುತ್ತದೆಯೋ, ಆಗ ಸಂಬಂಧವು ಹೋರಾಟ, ಹಂಬಲ ಆಗುವುದಿಲ್ಲ. ಬದಲಿಗೆ ಅದು ಒಂದು ವರವಾಗುತ್ತದೆ.

ವೇತನ ಹೆಚ್ಚಳ ಸೇರಿ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹ

ಮೈಸೂರು ಜಿಪಂ ಮುಂದೆ ಗ್ರಾಪಂ ನೌಕರರ ಪ್ರತಿಭಟನೆ



ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ(ಸಿಐಟಿಯು)ದವರು ಮೈಸೂರು ಜಿಲ್ಲಾ ಪಂಚಾಯತ್ ಕಚೇರಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಏ.16(ಬಿಎಲ್‌ಯು)– ವೇತನ ಹೆಚ್ಚಳ, ನಿವೃತ್ತಿ ಹೊಂದಿದರೆ ಇಡಗಂಟು, ಭವಿಷ್ಯ ನಿಧಿ ಜಾರಿ ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ (ಸಿಐಟಿಯು) ದವರು ಮೈಸೂರು ಜಿಲ್ಲಾ ಪಂಚಾಯತ್ ಕಚೇರಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದರು.

ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ನಿಮ್ಮ ಬೇಡಿಕೆಗಳನ್ನು ಈಡೇರಿಸುತ್ತೇವೆ ಎಂದು ಸರ್ಕಾರ ಭರವಸೆ ನೀಡಿತ್ತು. ಆದರೆ ಕಳೆದ ಮೂರು ತಿಂಗಳಿನಿಂದ ಬೇಡಿಕೆ ಈಡೇರಿಸಿಲ್ಲ, ಅಲ್ಲದೆ ಬೇಡಿಕೆಗಳ ಈಡೇರಿಸುವ ಸಂಬಂಧ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರವೇ ಒಪ್ಪಿಕೊಂಡಂತೆ ಎಲ್ಲಾ ನೌಕರರಿಗೆ 5 ಸಾವಿರ ಹೆಚ್ಚಳ ಮಾಡಬೇಕು, ನೌಕರರು ನಿವೃತ್ತಿ ಅಥವಾ ನಿಧನ ಹೊಂದಿದರೆ ಇಡಗಂಟು 6 ಲಕ್ಷ ನೀಡಬೇಕು, ಪ್ರತಿ ಪಂಚಾಯಿತಿಗೆ ಎರಡು ಡಾಟಾ ಎಂಟ್ರಿ ಆಪರೇಟರ್, ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆ ಭರ್ತಿ ಮಾಡಬೇಕು ಎಂಬುದು ಸೇರಿದಂತೆ 13 ಬೇಡಿಕೆಗಳ ಈಡೇರಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರ ನಮ್ಮ ಬೇಡಿಕೆಗಳ ಈಡೇರಿಸದಿದ್ದರೆ ತೀವ್ರ ರೀತಿಯ ಹೋರಾಟ ರೂಪಿಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಬಿಎಸ್‌ಎನ್‌ಎಲ್ ಪಿಂಚಣಿದಾರರ ಪ್ರತಿಭಟನೆ



ಜಯಲಕ್ಷ್ಮಿಪುರಂನ ಬಿಎಸ್‌ಎನ್‌ಎಲ್ ಕಚೇರಿ ಮುಂದೆ ಬಿಎಸ್‌ಎನ್‌ಎಲ್ ಪಿಂಚಣಿದಾರರ ಜಂಟಿ ವೇದಿಕೆ ವತಿಯಿಂದ ತುಟ್ಟಿ ಭತ್ಯೆ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟಿಸಲಾಯಿತು.

ಮೈಸೂರು, ಏ.16(ಬಿಎಲ್‌ಯು)– ತುಟ್ಟಿಭತ್ಯೆ ತಡೆಹಿಡಿದಿರುವ ನಿರ್ಧಾರ ವಿರೋಧಿಸಿ ಬಿಎಸ್‌ಎನ್‌ಎಲ್ ಪಿಂಚಣಿದಾರರ ಜಂಟಿ ವೇದಿಕೆಯವರು ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಬಿಎಸ್‌ಎನ್‌ಎಲ್ ಕಚೇರಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದರು. ದೂರ ಸಂಪರ್ಕ ಇಲಾಖೆಯಿಂದ ಬಿಎಸ್‌ಎನ್‌ಎಲ್ ಗೆ ಅಭಿಯುಕ್ತಗೊಂಡ ನಂತರ ಇಲ್ಲಿನ ನೌಕರರನ್ನು ಪಿಂಚಣಿದಾರರೆಂದು ಕೇಂದ್ರ ಸರ್ಕಾರ ಪರಿಗಣಿಸಿತ್ತು. ನೌಕರರು ಸೇವೆಯಲ್ಲಿರುವಾಗ ವಂತಿಗೆ ರೂಪದಲ್ಲಿ ನೀಡಿರುವ ಸಂಚಿತ ನಿಧಿಯಿಂದ ಪಿಂಚಣಿ ನೀಡಲಾಗುತ್ತಿತ್ತು ಎಂದು ಪ್ರತಿಭಟನಾಕಾರರು ತಿಳಿಸಿದರು. ಆದರೆ ಈಗ ಲಾಭ–ನಷ್ಟದ ಆಧಾರದ ಮೇಲೆ ಪಿಂಚಣಿದಾರರ ತುಟ್ಟಿ ಭತ್ಯೆ ತಡೆಹಿಡಿಯಲಾಗಿದ್ದು, ಇದು ಅಸಂಬದ್ಧ ನಿರ್ಧಾರವಾಗಿದೆ ಎಂದು ಕಿಡಿಕಾರಿದರು.

ಮಧ್ಯ ಪ್ರಾಚ್ಯ ಯುದ್ಧದಿಂದ ಜಾಗತಿಕ ಮಟ್ಟದಲ್ಲಿ ನಾನಾ ಬಿಕ್ಕಟ್ಟು ಉಲ್ಬಣ

ಜನಸಾಮಾನ್ಯರ ದೈನಂದಿನ ಜೀವನದ ಮೇಲೂ ವ್ಯತಿರಿಕ್ತ ಪರಿಣಾಮ: ಮಹಾಜನ ಪಿಜಿ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ ಅಭಿಮತ

ಮೈಸೂರು, ಏ.16(ಎಂಕೆ)– ಮಧ್ಯ ಪ್ರಾಚ್ಯ ದೇಶಗಳಲ್ಲಿನ ಯುದ್ಧದಿಂದಾಗಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೃಷಿ, ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿ ಕುಂಠಿತವಾಗಲಿದ್ದು, ಜನಸಾಮಾನ್ಯರ ದೈನಂದಿನ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಮಹಾಜನ ಪಿಜಿ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ ಆತಂಕ ವ್ಯಕ್ತಪಡಿಸಿದರು.



ವಿಚಾರ ಸಂಕಿರಣದಲ್ಲಿ ಡಾ.ಸಿ.ಕೆ.ರೇಣುಕಾರ್ಯ ಮಾತನಾಡುತ್ತಿರುವುದು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ 'ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರದ ಮೇಲೆ ಮಧ್ಯಪ್ರಾಚ್ಯ ದೇಶಗಳ ಯುದ್ಧದ ಪರಿಣಾಮ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಯುದ್ಧ ಕೊನೆಯಾಗದಿದ್ದಲ್ಲಿ ಪೆಟ್ರೋಲಿಯಂ ಉತ್ಪನ್ನಗಳಿಗೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಹೇಳಿದರು.

ಭಾರತದ ಆರ್ಥಿಕತೆ ಉತ್ತಮವಾಗಿ ವೃದ್ಧಿಯಾಗುತ್ತಿದ್ದು, ಯುದ್ಧವು ಅಭಿವೃದ್ಧಿಯನ್ನು ಹಿಮ್ಮೆಟ್ಟಿಸಿದಂತಾಗಿದೆ. ಚೀನಾ ತನ್ನಲ್ಲಿ ನೂರು ವರ್ಷಗಳು ಆಗುವಷ್ಟು ಕಚ್ಚಾ ತೈಲವನ್ನು ಶೇಖರಣೆ ಮಾಡಿಟ್ಟುಕೊಂಡಿದೆ. ಆದರೆ, ಭಾರತದಲ್ಲಿ 15–20 ದಿನಕ್ಕಷ್ಟೇ ಸಾಕಾಗುವಷ್ಟಿದೆ. ಆದ್ದರಿಂದ ಕೊಲ್ಲಿ ರಾಷ್ಟ್ರಗಳೊಂದಿಗೆ ವಿಶ್ವಾಸದೊಂದಿಗೆ ವ್ಯವಹಾರ ನಡೆಸಬೇಕು. ಈಗಾಗಲೇ ಅನೇಕ ಹೋಟೆಲ್‌ಗಳನ್ನು ಮುಚ್ಚಲಾಗಿದೆ. ಆಟೋ ಗ್ಯಾಸ್ ಸಿಗದೆ ಪರದಾಡುವಂತಾಗಿದೆ. ಕಾರ್ಖಾನೆಗಳನ್ನು ಮುಚ್ಚಲಾಗುತ್ತಿದೆ. ಜೊತೆಗೆ ಇನ್ನೇನು ಬಿತ್ತನೆ ಕಾಲ ಸಮೀಪಿಸಲಿದ್ದು, ರಸಗೊಬ್ಬರ ಪೂರೈಕೆಗೂ ತೊಂದರೆಯಾಗಿ ಕೃಷಿ ಕ್ಷೇತ್ರದ ಮೇಲೂ ಪರಿಣಾಮ ಉಂಟಾಗಲಿದೆ. ಕೊಲ್ಲಿ ರಾಷ್ಟ್ರಗಳಿಂದ ಆಮದಾಗುತ್ತಿದ್ದ ಕಚ್ಚಾ ತೈಲವನ್ನು ಬೇರೆ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತೇವೆ ಎಂದರೆ, ದುಪ್ಪಟ್ಟು ಹಣ ನೀಡಬೇಕಾಗುತ್ತದೆ. ಈಗಾಗಲೇ ರೂಪಾಯಿ ಮೌಲ್ಯ ಕುಸಿಯುತ್ತಿದ್ದು, ಮತ್ತಷ್ಟು ಅಲ್ಲೋಲ–ಕಲ್ಲೋಲವಾಗಲಿದೆ. ತೆರಿಗೆ ಏರಿಕೆಯ ನೇರವಾಗಿ ಜನಸಾಮಾನ್ಯರ ಮೇಲೆ ಹಾಕುವುದರಿಂದ ಪದಾರ್ಥಗಳ ಬೆಲೆ ಏರಿಕೆ ಉಂಟಾಗಲಿದೆ. ಆದ್ದರಿಂದ ಕೊರೊನಾ ಸಂದರ್ಭದ ಪರಿಸ್ಥಿತಿಯನ್ನು ಎದುರಿಸಿದಂತೆ ಯುದ್ಧದ ಪರಿಸ್ಥಿತಿಯನ್ನು ಒಗ್ಗಟ್ಟಿನಿಂದ ಎದುರಿಸಿ ಸ್ವಾವಲಂಬನೆ ಸಾಧಿಸಬೇಕಿದೆ. ಭಾರತದಲ್ಲಿನ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲವನ್ನು ಸದ್ಬಳಕೆ ಮಾಡಿಕೊಂಡರೆ ಸಂಕಷ್ಟದಿಂದ ಹೊರಬರಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> “ ಕಚ್ಚಾ ತೈಲ ದೇಶದ ಅಭಿವೃದ್ಧಿಯ ಜೀವಾಳ. ದುರದೃಷ್ಟವಶಾತ್ ಭಾರತ ಕಚ್ಚಾ ತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸದಿರುವುದರಿಂದ ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಶೇ.85ರಷ್ಟು ಕಚ್ಚಾತೈಲವನ್ನು ಮಧ್ಯ ಪ್ರಾಚ್ಯಗಳ ದೇಶಗಳಿಂದ ಆಮದು ಮಾಡಿಕೊಳ್ಳಲಾಗಿದ್ದು, ಹಾರ್ಮುಜ್ ಜಲಸಂಧಿ (Strait of Hormuz) ಬಂದ್ ಮಾಡಿದರೆ ತೀವ್ರ ತೊಂದರೆ ಎದುರಿಸಬೇಕಾಗುತ್ತದೆ.
>
> –ಡಾ.ರೇಣುಕಾರ್ಯ

ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪಿಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ವೊರಬದ ಮಲ್ಲಿಕಾರ್ಜುನ, ಪ್ರಾಂಶುಪಾಲ ಡಾ.ರೇಚಣ್ಣ, ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ರೂಪ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ರೋಟರಿ ಶಾಲೆ ಹತ್ತಿರ, ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ
ಮೈಸೂರು ಜಿಲ್ಲೆ –570018. ಸಹಾಯವಾಣಿ ಸಂಖ್ಯೆ: 0821–2001737
ಇ–ಮೇಲ್: ka.hootagalli.cmc@gmail.com, ವೆಬ್‌ಸೈಟ್: ka.hootagalli.cmc@gmail.com

ಸಂ.: ನಸಹೂ/ತಾಂತ್ರಿಕ/ನೀ.ಸ/ಟೆಂಡರ್ ಪ್ರಕಟಣೆ/ಸಿ.ಆರ್–01/2026–27 ದಿನಾಂಕ: 15.04.2026

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ನಗರಸಭಾ ನಿಧಿಯಡಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ KW-02 ನಿಯಮದಂತೆ KPP ಪೋರ್ಟಲ್ ಮೂಲಕ ಐಟಂವಾರು ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅನ್ನು https://kppp.karnataka.gov.in ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. **ಇಂಡೆಂಟ್ ಸಂಖ್ಯೆ:** DMA/2026-27/WS/WORK_INDENT57280 ಅಂದಾಜು ಮೊತ್ತ **ರೂ. 49.00 ಲಕ್ಷಗಳು.** ಇ.ಎಂ.ಡಿ. ಮೊತ್ತ ರೂ. **83,100/–.** ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 30.04.2026 ಸಂಜೆ 5:30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 02.05.2026ರ ಬೆಳಿಗ್ಗೆ 10.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ ಹಾಗೂ ಜಿ.ಎಸ್.ಟಿ.ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಸಹಿ/– ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

DIPR/MYS/56/SA/2026-27

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾಧಕರ ಕೋಟಾದಲ್ಲಿ ನಿವೇಶನ ನೀಡಲು ಹೈಕೋರ್ಟ್ ಆದೇಶಿಸಿದರೂ ಕ್ರಮ ಕೈಗೊಳ್ಳದ ಮೈಸೂರು ಅಭಿವೃದ್ಧಿ ಪ್ರಾಧಿಕಾರ

ನ್ಯಾಯಾಂಗ ನಿಂದನೆ ಪ್ರಕರಣ ಹೂಡಲು ಚಿಂತನೆ

ಮೈಸೂರು, ಏ.16(ಎಂಟಿವೈ)– ಹೈಕೋರ್ಟ್ ಆದೇಶಿಸಿದ್ದರೂ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಸಾಧಕರ ಕೋಟಾದಲ್ಲಿ ನಿವೇಶನ ನೀಡದೆ, ನ್ಯಾಯಾಂಗ ನಿಂದನೆ ಮಾಡುತ್ತಿದೆ ಎಂದು ನಿವೇಶನಕ್ಕಾಗಿ ಅರ್ಜಿ ಹಾಕಿರುವ ಅಂತರರಾಷ್ಟ್ರೀಯ ಚೆಸ್ ಆಟಗಾರ ಎಂ.ಪಿ.ಅಜಿತ್ ಹಾಗೂ ನಿವೃತ್ತ ಯೋಧ ಬಿ.ಆರ್.ನಿಂಗರಾಜು ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರಿಗೆ ಸಾಧಕರ ಕೋಟಾದಡಿ ನಿವೇಶನಕ್ಕೆ ಈ ಹಿಂದಿನ ಮುಡಾ ಅರ್ಜಿ ಕರೆದಿತ್ತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 488 ಮಂದಿ ಸಾಧಕರು 2023ರ ಫೆಬ್ರವರಿ ನಿವೇಶನಕ್ಕೆ ಅರ್ಜಿ ಹಾಕಿದ್ದಾರೆ. ಹಲವರು ಪ್ರಾಥಮಿಕ ಕಂತನ್ನು ಕಟ್ಟಿದ್ದೇವೆ. ಬಳಿಕ 5 ಬಾರಿ ಅರ್ಜಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಮಾರ್ಚ್ 11ರಂದು ಹೈಕೋರ್ಟ್ ಕೂಡ 6 ತಿಂಗಳೊಳಗೆ ನಿವೇಶನ ನೀಡುವಂತೆ ಆದೇಶ ನೀಡಿದೆ. ಆದರೂ ಎಂಡಿಎ ಕಡೆಯಿಂದ ಯಾವುದೇ ಸ್ಪಂದನೆ ದೊರೆಯುತ್ತಿಲ್ಲ. ದೇವನೂರು 3ನೇ ಹಂತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳ ಹಂಚಿಕೆ ಮಾಡದೆ ಸುಮ್ಮನಿದೆ. ನಿವೇಶನ ನೀಡಲು ಕ್ರಮ ಕೈಗೊಳ್ಳದೇ ಇದ್ದರೆ ನ್ಯಾಯಾಂಗ ನಿಂದನೆ ಪ್ರಕರಣವನ್ನು ಎಂಡಿಎ ಎದುರಿಸಬೇಕಾಗುತ್ತದೆ ಎಂದರು.

ಸಾಧಕರ ಕೋಟಾದಲ್ಲಿ ನಿವೇಶನ ಪಡೆಯಲು ಅರ್ಜಿ ಸಲ್ಲಿಸಿದ್ದ ಅನೇಕರು ಸಾಲ ಮಾಡಿ ಹಣ ಕಟ್ಟಿದ್ದಾರೆ. ಆದರೂ ನಿವೇಶನ ಸಿಕ್ಕಿಲ್ಲ. ಇದರಿಂದ ಬಡ್ಡಿ ಕಟ್ಟಲಾಗದೇ ಹಲವರು ನಿವೇಶನಕ್ಕಾಗಿ ಕಟ್ಟಿದ್ದ ಹಣವನ್ನು ವಾಪಸ್ ಪಡೆದಿದ್ದಾರೆ ಎಂದು ಅಳಲು ತೋಡಿಕೊಂಡರು.

ಮೈಸೂರಲ್ಲಿ ತಾಪಮಾನ ಗರಿಷ್ಠ ಏರಿಕೆ ಭೀತಿ

ಮೈಸೂರು, ಏ.16(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಉಷ್ಣಾಂಶ 37 ಡಿಗ್ರಿ ತಲುಪಿದ್ದು, ತೇವಾಂಶ ರಹಿತ ಬಿಸಿಗಾಳಿಗೆ ಜನ ಹೈರಾಣಾಗುತ್ತಿದ್ದಾರೆ.

ಭಾರತ ಹವಾಮಾನ ಇಲಾಖೆ ವರದಿಯಲ್ಲಿ ಏಪ್ರಿಲ್‌ನಿಂದ ಜೂನ್‌ವರೆಗೆ ಮೈಸೂರು ಸೇರಿದಂತೆ ಕರ್ನಾಟಕದಲ್ಲಿ ಬಿಸಿಲು ಹೆಚ್ಚಾಗುವ ಎಚ್ಚರಿಕೆ ನೀಡಿದ್ದು, ಮೈಸೂರಲ್ಲಿ ಈ ಬಾರಿ ಗರಿಷ್ಠ ತಾಪಮಾನ 38 ಅಥವಾ 39 ಡಿಗ್ರಿ ತಲುಪುವ ಸಾಧ್ಯತೆ ಇದೆ ಎಂದು ಹವಾಮಾನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಲ್ಲಿ ಇದುವರೆಗೆ ತಾಪಮಾನ 36 ಡಿಗ್ರಿವರೆಗೆ ದಾಖಲಾಗುತ್ತಿತ್ತು. ಆದರೆ ಕಳೆದ 3–4 ವರ್ಷಗಳಿಂದ 39 ಡಿಗ್ರಿವರೆಗೂ ದಾಖಲಾಗುತ್ತಿದೆ. ಬದಲಾದ ಹವಾಮಾನ, ಹಸಿರು ಹೊದಿಕೆ ಕ್ಷೀಣಿಸುತ್ತಿರುವುದು. ಮರಗಳ ಹನನ ಸೇರಿದಂತೆ ಪರಿಸರದ ಮೇಲಾಗುತ್ತಿರುವ ದೌರ್ಜನ್ಯ ಪ್ರಕರಣದಿಂದಾಗಿ ಬೇಸಿಗೆಯಲ್ಲಿ ತಾಪಮಾನ ಹೆಚ್ಚಾಗುತ್ತಿದ್ದು, ಕಳೆದ 3–4 ದಿನಗಳಿಂದ ಜನ ರಸ್ತೆಯಲ್ಲಿ ಮಧ್ಯಾಹ್ನದ ವೇಳೆ ಓಡಾಡುವುದಕ್ಕೆ ಹಿಂದೇಟು ಹಾಕುವಂತಾಗಿದೆ.

ಒಣ ಗಾಳಿಯಿಂದ ತತ್ತರ: ಒಂದೆಡೆ ಬಿಸಿಲು ಹೆಚ್ಚಾಗಿದ್ದರೆ, ಮತ್ತೊಂದೆಡೆ ವಾತಾವರಣದಲ್ಲಿ ತೇವಾಂಶವಿಲ್ಲದ ಒಣ ಗಾಳಿ ಬೀಸುತ್ತಿರುವುದು ಜನರನ್ನು ತತ್ತರಿಸುವಂತೆ ಮಾಡಿದೆ. ಇದರಿಂದ ದ್ವಿಚಕ್ರ ವಾಹನ ಸವಾರರು, ದಾರಿ ಹೋಕರಿಗೆ ಬಿಸಿಗಾಳಿ ಬಡಿದಂತೆ ಭಾಸವಾಗುತ್ತಿದೆ. ಹೆಲ್ಮೆಟ್ ಧರಿಸಿದ ವಾಹನ ಸವಾರರ ಪಾಡು ಹೇಳತೀರದಾಗಿದೆ. ಅದರಲ್ಲೂ ಮೈಸೂರಲ್ಲಿ ಹೆಜ್ಜೆ ಹೆಜ್ಜೆಗೂ ಇರುವ ಸಿಗ್ನಲ್‌ನಿಂದಾಗಿ ಬಿಸಿಲಿನಲ್ಲೇ ನಿಲ್ಲುವ ಮೂಲಕ ಹೈರಾಣಾಗುತ್ತಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ: ಕರ್ನಾಟಕದಲ್ಲಿ ಏಪ್ರಿಲ್‌ನಿಂದ ಜೂನ್‌ವರೆಗೆ ಹವಾಮಾನದಲ್ಲಿ ವ್ಯತ್ಯಾಸವಾಗುವ ನಿರೀಕ್ಷೆಯಿದೆ. ಹೆಚ್ಚುತ್ತಿರುವ ತಾಪಮಾನ, ಶಾಖದ ಅಲೆಗಳ ಪರಿಸ್ಥಿತಿಗಳು ಮತ್ತು ಪೂರ್ವ ಮುಂಗಾರು ಮಳೆ ಬೀಳುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಏಪ್ರಿಲ್‌ನಲ್ಲಿ ಗರಿಷ್ಠ ತಾಪಮಾನ ದಾಖಲಾಗಲಿದೆ. ರಾತ್ರಿ ವೇಳೆಯೂ ತಾಪಮಾನವು ಹೆಚ್ಚಾಗಿರುತ್ತದೆ. ತಿಂಗಳಾಂತ್ಯದಲ್ಲಿ ಮಳೆಯಾಗುವ ನಿರೀಕ್ಷೆಯಿದೆ. ಅದರ ಜೊತೆಗೆ ಶಾಖದ ಅಲೆಯ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದೆ.

ಮೇ ತಿಂಗಳಲ್ಲೂ ಹಲವೆಡೆ ತಾಪಮಾನ ಹೆಚ್ಚಾಗುವ ಸಾಧ್ಯತೆಯಿದೆ. ಮಣ್ಣಿನ ತೇವಾಂಶ ಕ್ಷೀಣಿಸುವ ಸಾಧ್ಯತೆಯಿದೆ. ಆದರೂ ಕರ್ನಾಟಕದ ಕೆಲವು ಭಾಗಗಳಲ್ಲಿ ಪೂರ್ವ ಮುಂಗಾರಿನಲ್ಲಿ ಗುಡುಗು ಸಹಿತ ಮಳೆ ಬೀಳಲಿದೆ ಎಂದು ಮುನ್ಸೂಚನೆ ನೀಡಿದೆ.

ಜೂನ್ ತಿಂಗಳಲ್ಲಿ ನೈಋತ್ಯ ಮಾನ್ಸೂನ್ ಆರಂಭವಾಗಲಿದ್ದು, ಮಳೆಯ ಚಟುವಟಿಕೆ ಕ್ರಮೇಣ ಹೆಚ್ಚಾಗುವ ನಿರೀಕ್ಷೆಯಿದೆ. ಇದರಿಂದಾಗಿ ಮಣ್ಣಿನ ತೇವಾಂಶ ಸುಧಾರಿಸುತ್ತದೆ. ಮೋಡ ಕವಿದ ವಾತಾವರಣ ಮತ್ತು ಮಳೆ ಹೆಚ್ಚಾಗುವುದರೊಂದಿಗೆ ತಾಪಮಾನವು ಸ್ವಲ್ಪ ಮಟ್ಟಿಗೆ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಈಗಾಗಲೇ 37 ಡಿಗ್ರಿ ಉಷ್ಣಾಂಶಕ್ಕೆ ತತ್ತರಿಸಿರುವ ಜನ



"ಮೈಸೂರಲ್ಲಿ ಈಗಾಗಲೇ 37 ಡಿಗ್ರಿ ತಾಪಮಾನ ದಾಖಲಾಗಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ರಾಜ್ಯದಲ್ಲಿ ಈ ಬಾರಿ ತಾಪಮಾನ 39 ಡಿಗ್ರಿಗೆ ಹೆಚ್ಚಾಗುವ ಸಾಧ್ಯತೆ ಇದೆ. 2023ರಲ್ಲಿ 40.9ಡಿಗ್ರಿ ದಾಖಲಾಗಿತ್ತು. ಈ ಬಾರಿ ಮೈಸೂರಲ್ಲಿ ಬಿಸಿಗಾಳಿ ಇಲ್ಲ. ಆದರೆ, ತೇವಾಂಶ ರಹಿತ ಒಣಗಾಳಿ ಬೀಸುತ್ತಿರುವುದರಿಂದ ಬಿಸಿ ಗಾಳಿಯಂತೆ ಜನರಿಗೆ ಭಾಸವಾಗುತ್ತಿದೆ. ಮಳೆ ಬಿದ್ದು ಹಲವು ದಿನಗಳೇ ಕಳೆದಿರುವುದರಿಂದ ವಾತಾವರಣದಲ್ಲಿ ತೇವಾಂಶವಿಲ್ಲ. ಮೇ, ಜೂನ್ ತಿಂಗಳಲ್ಲಿ ಉತ್ತಮ ಮಳೆ ಬೀಳಲಿದೆ.

– ಡಾ.ಸುಶಾಂತ್ ಕುಮಾರ್, ನಾಗನಹಳ್ಳಿ ಕೃಷಿ ಸಂಶೋಧನಾ ಕೇಂದ್ರ

ಮೈಸೂರಲ್ಲಿ ಫ್ಲಾಟ್ ನೀಡುವುದಾಗಿ ನಂಬಿಸಿ 12 ಕೋಟಿ ರೂ. ವಂಚನೆ

ಬೆಂಗಳೂರು ಮೂಲದ ಬಿಲ್ಡರ್ ವಿರುದ್ಧ ಸಂತ್ರಸ್ತರ ಆರೋಪ

ಮೈಸೂರು,ಏ.16(ಬಿಎಲ್‌ಯು)– ಬೆಂಗಳೂರು ಮೂಲದ ಬಿಲ್ಡರ್ ಎಸ್.ಮಂಜುನಾಥ್ ಎಂಬಾತ ಮೈಸೂರಿನ ಚಾಮರಾಜ ಮೊಹಲ್ಲಾದ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ನೀಡುವುದಾಗಿ ನಂಬಿಸಿ 12 ಕೋಟಿಗೂ ಹೆಚ್ಚು ವಂಚನೆ ಮಾಡಿದ್ದಾನೆ ಎಂದು ಫ್ಲಾಟ್‌ಗಾಗಿ ಹಣ ಪಾವತಿಸಿರುವ ಕುಮುದಾ ಎಂಬುವರು ಆರೋಪಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಪಾರ್ಟ್‌ಮೆಂಟ್ ನಿರ್ಮಾಣ ಕಾಮಗಾರಿಯನ್ನು 2016ರಲ್ಲೇ ಆರಂಭಿಸಿರುವ ಮಂಜುನಾಥ್ ಈಗ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡದೆ ಅಪೂರ್ಣಗೊಳಿಸಿದ್ದಾನೆ ಎಂದು ಆಪಾದಿಸಿದ್ದಾರೆ.

ಜಾಯಿಂಟ್ ವೆಂಚರ್‌ನಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣ ಕೈಗೆತ್ತಿಕೊಂಡಿದ್ದನು. ಒಟ್ಟು 24 ಫ್ಲಾಟ್‌ನಲ್ಲಿ 15 ಮಂಜುನಾಥ್ ಭಾಗಕ್ಕೆ ಬಂದಿತ್ತು. ಉಳಿದ 9 ಫ್ಲಾಟ್ ಭೂ ಮಾಲೀಕರು ಹೊಂದಿದ್ದರು. ತನ್ನ ಪಾಲಿಗೆ ಬಂದ 15 ಫ್ಲಾಟ್‌ಗಳಲ್ಲಿ 6 ಫ್ಲಾಟ್‌ಗಳಿಗೆ ಪೂರ್ಣ ಹಣ ವಸೂಲಿ ಮಾಡಿಕೊಂಡಿದ್ದಾನೆ. ಉಳಿದ 9 ಫ್ಲಾಟ್‌ಗಳಿಗೆ ಶೇಕಡ 85ಕ್ಕಿಂತಲೂ ಹೆಚ್ಚು ಹಣ ಪಡೆದುಕೊಂಡಿದ್ದಾನೆ. ಕೆಲವರಿಗೆ ಕ್ರಯ ಪತ್ರ, ಮತ್ತೆ ಕೆಲವರಿಗೆ ಸೇಲ್ ಅಗ್ರಿಮೆಂಟ್ ಮಾಡಿ ಕೊಟ್ಟಿರುವ ಮಂಜುನಾಥ್ ಮೂರು ಫ್ಲಾಟ್‌ಗಳನ್ನು ಮೂವರಿಗೆ ಅಕ್ರಮವಾಗಿ ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟಿದ್ದಾನೆ ಎಂದು ಕುಮುದಾ ದೂರಿದರು.

ಈ ಮೂಲಕ ಸುಮಾರು 12 ಕೋಟಿಗೂ ಹೆಚ್ಚು ಹಣ ವಸೂಲಿ ಮಾಡಿ ನಾಪತ್ತೆಯಾಗಿದ್ದಾನೆ. ನಾಲ್ಕೈದು ವಿಳಾಸ ನೀಡಿರುವ ಆತ ಎಲ್ಲೂ ಪತ್ತೆಯಾಗುತ್ತಿಲ್ಲ. ಕಾನೂನಾತ್ಮಕ ನೋಟಿಸ್ ನೀಡಿದರೆ ಅಂಚೆ ಪತ್ರ ವಾಪಾಸು ಬರುತ್ತಿವೆ. ಈ ಸಂಬಂಧ ಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಈಗ ಜಾಮೀನು ಪಡೆಯಲು ಮಂಜುನಾಥ್ ಮುಂದಾಗಿದ್ದಾನೆ ಎಂದು ಹೇಳಿದರು. ಫ್ಲಾಟ್ ಮಾಲೀಕರಿಂದ ಜಿಎಸ್‌ಟಿ ಹಣ ಕೂಡ ಪಡೆದಿರುವ ಮಂಜುನಾಥ್ ಇಷ್ಟೆಲ್ಲಾ ಅಕ್ರಮ ಎಸಗಿದ್ದರೂ ಜಿಲ್ಲಾಡಳಿತ ಏನು ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ನೊಂದ ಜನರ ಬವಣೆ ಅರಿತು ಜಿಲ್ಲಾಡಳಿತ ಈತನ ವಿರುದ್ಧ ಕಠಿಣ ಕ್ರಮ ಕೈಗೊಂಡು ನಮ್ಮ ಹಣ ವಾಪಾಸು ಕೊಡಿಸಬೇಕು ಎಂದು ಕುಮುದಾ ಒತ್ತಾಯಿಸಿದರು. ಫ್ಲಾಟ್ ಪಡೆಯಲು ಹಣ ಪಾವತಿಸಿರುವ ಸರೋಜಿನಿ, ಜಯಸಿಂಹ, ಶಿವಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಕಚ್ಚಾವಸ್ತುಗಳ ಬೆಲೆ ಏರಿಕೆ ಹಿನ್ನೆಲೆ

ಫೋಟೋ, ವೀಡಿಯೊ ಚಿತ್ರೀಕರಣ, ಲ್ಯಾಬ್ ಮುದ್ರಣದ ದರ ಶೇಕಡ 30ರಷ್ಟು ಹೆಚ್ಚಳ



ಪತ್ರಿಕಾಗೋಷ್ಠಿಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ಸ್ ಅಂಡ್ ವೀಡಿಯೊಗ್ರಾಫರ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ವಿಜಯ್ ಮಾತನಾಡಿದರು.

ಮೈಸೂರು, ಏ.16(ಬಿಎಲ್‌ಯು)– ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಫೋಟೋಗ್ರಫಿ, ವೀಡಿಯೊಗ್ರಫಿಗೆ ಸಂಬಂಧಿಸಿದ ಪೇಪರ್, ಮುದ್ರಾ, ಕ್ಯಾಮರಾ, ಕ್ಯಾಮರಾ ಲೆನ್ಸ್, ಫ್ಲಾಷ್ ಸೇರಿದಂತೆ ಇತರೆ ಕಚ್ಚಾ ವಸ್ತುಗಳ ಬೆಲೆ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಫೋಟೋ, ವೀಡಿಯೊ ಚಿತ್ರೀಕರಣ, ಲ್ಯಾಬ್‌ಗಳ ಫೋಟೋ ಪ್ರಿಂಟ್, ಲ್ಯಾಮಿನೇಷನ್ ಬೆಲೆಯನ್ನು ಶೇಕಡ 30ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ಸ್ ಅಂಡ್ ವೀಡಿಯೊಗ್ರಾಫರ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ವಿಜಯ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದರ ಹೆಚ್ಚಳವನ್ನು ನಿನ್ನೆಯಿಂದ ಅನುಷ್ಠಾನಗೊಳಿಸಿದ್ದೇವೆ. ಬೆಲೆ ಏರಿಕೆಯ ಅನಿವಾರ್ಯತೆಗೆ ಗ್ರಾಹಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಮಧ್ಯ ಪ್ರಾಚ್ಯ ಯುದ್ಧದ ಪರಿಣಾಮದಿಂದ ಫೋಟೋ ಪ್ರಿಂಟ್ ಮಾಡುವ ಪೇಪರ್, ಮುದ್ರಣಕ್ಕೆ ಬಳಸುವ ಇಂಕ್, ಕ್ಯಾಮರಾ, ಕ್ಯಾಮರಾಗಳ ಲೆನ್ಸ್, ಫ್ಲಾಶ್ ಸೇರಿದಂತೆ ಇತರೆ ವಸ್ತುಗಳ ಬೆಲೆ ದುಬಾರಿಯಾಗಿದೆ. ಅಲ್ಲದೆ ಕೆಲಸ ಮಾಡುವ ನೌಕರರು ಕೂಡ ಹೆಚ್ಚು ವೇತನಕ್ಕೆ ಬೇಡಿಕೆ ಇಟ್ಟಿದ್ದಾರೆ. ಇದರಿಂದ ನಾವು ಕೂಡ ಶೇ.30 ರಷ್ಟು ಬೆಲೆ ಹೆಚ್ಚಳ ಮಾಡಿದ್ದೇವೆ ಎಂದು ವಿಜಯ್ ಸ್ಪಷ್ಟನೆ ನೀಡಿದರು.

ಕಳೆದ ಹತ್ತು ವರ್ಷಗಳಿಂದ ನಾವು ದರ ಏರಿಕೆ ಮಾಡಿಲ್ಲ. ಆದರೆ ಈಗ ಅನಿವಾರ್ಯವಾಗಿದ್ದು, ಇದಕ್ಕೆ ಗ್ರಾಹಕರು ಸಹಕಾರ ನೀಡಬೇಕು ಎಂದು ವಿಜಯ್ ಮತ್ತೊಮ್ಮೆ ಕೋರಿದರು.

ಲ್ಯಾಬ್ ಮಾಲೀಕ ಅಭಿನಂದನ್, ಅಸೋಸಿಯೇಷನ್ ಉಪಾಧ್ಯಕ್ಷ ಹೆಚ್.ರಾಜಗೋಪಾಲ್, ಕಾರ್ಯದರ್ಶಿ ಎ.ಧನಂಜಯ, ಖಜಾಂಚಿ ಕೆ.ಉಮೇಶ್, ನಿರ್ದೇಶಕರಾದ ಎ.ಮೋಹನ್, ಲೋಕೇಶ್, ಎಂ.ನಾರಾಯಣಸ್ವಾಮಿ, ನಿಧಿ ಮಂಜು ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಹನೀಯರ ಜಯಂತಿ ಆಚರಣೆ...



ಕರ್ನಾಟಕ ದಲಿತ ಪ್ಯಾಂಥರ್ಸ್ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಹಾಗೂ ಮಹಾನ್ ಸಮಾಜ ಸುಧಾರಕರಾದ ಜ್ಯೋತಿ ಬಾಪುಲೆ ಅವರ ಜನ್ಮದಿನ ಆಚರಿಸಲಾಯಿತು. ಈ ವೇಳೆ ಸಂಘಟನೆ ಅಧ್ಯಕ್ಷ ಯೋಗ ನರಸಿಂಹ, ವೆಂಕಟಗಿರಿ, ಅನುಪಮ, ದಾನಿಯಮ್ಮ, ನವೀನ್, ಧನಂಜಯ, ಭವನ್, ಚಾರ್ಲ್ಸ್, ಗೌತಮ್, ಅನುರಾಗ್ ಹಾಗೂ ಇತರರು ಉಪಸ್ಥಿತರಿದ್ದರು.

ಸಖಿ ಸಸಿ ಪರಿಸರ ದೀವಿಗೆ ಕಾರ್ಯಕ್ರಮ



ಮೈಸೂರು ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಪರಿಸರ ದೀವಿಗೆ ಸಖಿ ಸಸಿ ಕಾರ್ಯಕ್ರಮವನ್ನು ಇಂದು ರಾಮಕೃಷ್ಣನಗರದ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಾಹಿತ್ಯ ದಾಸೋಹದ ಶ್ರೀಮತಿ ಪದ್ಮಾ ಆನಂದ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ತುಳಸಿ ಸಸ್ಯದ ಬಗ್ಗೆ ಉಪನ್ಯಾಸ ನೀಡಿದರು. ಹಲವಾರು ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಚಿತ್ರದಲ್ಲಿ ಸಂಸ್ಥೆಯ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಹಾಗೂ ಇತರೆ ಸದಸ್ಯರನ್ನು ಕಾಣಬಹುದು.

ಸೂಕ್ತ ವೇದಿಕೆಗಳಲ್ಲಿ ಪ್ರತಿಭೆ ಅನಾವರಣಗೊಳಿಸಿ

ವಿದ್ಯಾರ್ಥಿಗಳಿಗೆ ನಟ–ಗಾಯಕ ನವೀನ್ ಸಜ್ಜು ಕಿವಿಮಾತು

ಮೈಸೂರು, ಏ.16(ಎಂಟಿವೈ)– ಹೊಸ ಹೊಸ ಪ್ರತಿಭೆಗಳಿಗೆ ಸಾಕಷ್ಟು ವೇದಿಕೆಗಳು ಸಿಗುತ್ತಿದ್ದು, ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ಸೂಕ್ತ ವೇದಿಕೆಗಳಲ್ಲಿ ಅನಾವರಣಗೊಳಿಸಿ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಗಾಯಕ ಮತ್ತು ನಟ ನವೀನ್ ಸಜ್ಜು ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ವೇದಿಕೆ 2025–26ರ ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್, ಎನ್‌ಸಿಸಿ ರೇಂಜರ್ಸ್ ಮತ್ತು ಸಾಂಸ್ಕತಿಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತದಲ್ಲಿ ಪ್ರತಿಭೆಗಳಿಗೆ ಸಾಕಷ್ಟು ವೇದಿಕೆಗಳು ಸಿಗುತ್ತಿವೆ. ಈ ಹಿಂದಿನಂತೆ ಅವಕಾಶಗಳಿಗೆ ಹುಡುಕುವ ಅಗತ್ಯವಿಲ್ಲ, ಅವಕಾಶಗಳನ್ನು ನಾವೇ ಸೃಷ್ಟಿಸಿಕೊಳ್ಳುವ ಸಾಮರ್ಥ್ಯ ಅನುಕೂಲಗಳು ನಮ್ಮ ಮುಂದೆ ಇವೆ. ಪ್ರತಿಭೆಗಳ ಅನಾವರಣಕ್ಕೆ ಒಳ್ಳೆಯ ವೇದಿಕೆಗಳು ಸಿಗುತ್ತಿವೆ. ವಿದ್ಯಾರ್ಥಿಗಳು ತಮ್ಮಲ್ಲಿನ ಪ್ರತಿಭೆಯನ್ನು ಹೊರ ಜಗತ್ತಿಗೆ ಪ್ರದರ್ಶಿಸುವ ಕಲೆ, ಕೌಶಲ್ಯವನ್ನು ರೂಡಿಸಿಕೊಳ್ಳಬೇಕು. ಅವಕಾಶಗಳನ್ನು ನಾವೇ ಸಷ್ಟಿಸಿಕೊಳ್ಳುವ ಸದಾವಕಾಶಗಳಿದ್ದು, ಈ ಮೂಲಕ ಭವಿಷ್ಯವನ್ನು ಉತ್ತಮವಾಗಿ ಕಟ್ಟಿಕೊಳ್ಳಬೇಕು ಎಂದರು.



ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ವೇದಿಕೆ ಸಮಾರೋಪ ಸಮಾರಂಭಕ್ಕೆ ಗಾಯಕ ನವೀನ್ ಸಜ್ಜು, ವಿಶೇಷ ಭೂಸ್ವಾಧೀನಾಧಿಕಾರಿ ವಿ.ಆರ್.ಶೈಲಜಾ ಚಾಲನೆ ನೀಡಿದರು.

ರಾಷ್ಟ್ರೀಯ ಹೆದ್ದಾರಿ–275 ಮೈಸೂರು–ಮಡಿಕೇರಿ ವಿಭಾಗದ ವಿಶೇಷ ಭೂಸ್ವಾಧೀನಾಧಿಕಾರಿ ವಿ.ಆರ್.ಶೈಲಜಾ (ಕೆಎಎಸ್) ಮಾತನಾಡಿ, ಮಹಾರಾಣಿ ಕಾಲೇಜು ಅಸ್ಮಿತೆಯಿದ್ದಂತೆ. ಈ ಕಾಲೇಜಿನಲ್ಲಿ ಇದುವರೆಗೂ ಲಕ್ಷಾಂತರ ಮಹಿಳೆಯರು ಉನ್ನತ ಶಿಕ್ಷಣ ಪಡೆದು ಬದುಕನ್ನು ಕಟ್ಟಿಕೊಂಡು, ಸಮಾಜಕ್ಕೆ ಬೆಳಕಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ವಿಭಾಗ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕಿ ಪ್ರೊ.ಡಿ.ಎಸ್.ಪ್ರತಿಮಾ, ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ, ಸಾಂಸ್ಕೃತಿಕ ವೇದಿಕೆ ಕಾರ್ಯದರ್ಶಿ ಡಾ.ಕೆ.ಎಸ್.ಭಾಸ್ಕರ್, ಖಜಾಂಚಿ ಡಾ.ಟಿ.ನಾಗವೇಣಿ, ಐಕ್ಯೂಎಸಿ ಸಂಚಾಲಕ ಪ್ರೊ.ಆನಂದ್, ಪತ್ರಾಂಕಿತ ವ್ಯವಸ್ಥಾಪಕ ಕೆ.ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಗಾಯಕ ನವೀನ್ ಸಜ್ಜು ಕನ್ನಡ ಚಲನಚಿತ್ರಗಳ ಕೆಲ ಗೀತೆಗಳನ್ನು ಹಾಡಿ ಗಮನ ಸೆಳೆದರು.

ಸಿಬಿಎಸ್‌ಸಿ ಪರೀಕ್ಷೆ ನಿಶ್ಚಿತಗೆ ಶೇ.93.80 ಅಂಕ



ಮೈಸೂರು: ಮೈಸೂರಿನ ಸಿದ್ಧಾರ್ಥ ನಗರದಲ್ಲಿರುವ ಕೇಂದ್ರೀಯ ವಿದ್ಯಾಲಯ ಶಾಲೆಯ ವಿದ್ಯಾರ್ಥಿನಿ ನಿಶ್ಚಿತ ಈಕೆ ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಸಿ) ಪರೀಕ್ಷೆಯಲ್ಲಿ ಶೇ.93.80% ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈಕೆ ರಮ್ಮನಹಳ್ಳಿ ಗ್ರಾಮದ ನಿವಾಸಿ ಹಾಗೂ ನಿವೃತ್ತ ಯೋಧ ಕುಮಾರ ಮತ್ತು ಲೋಲಾಕ್ಷಿ .ಪಿ.ಬಿ ಅವರ ಪುತ್ರಿ.

ಪ್ರಮತಿ ಶಾಲೆಗೆ ಶೇ.100 ಫಲಿತಾಂಶ

ಮೈಸೂರು, ಏ.16–ಕುವೆಂಪುನಗರದ ಪ್ರಮತಿ ಹಿಲ್‌ವ್ಯೂ ಅಕಾಡೆಮಿ ಶಾಲೆಯ ಸಿಬಿಎಸ್‌ಇ 10ನೇ ತರಗತಿಯಲ್ಲಿ ಶೇ.100 ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ 71 ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರಣವ್ ಅತ್ತೂರ್ (95%) 570 ಅಂಕಗಳನ್ನು ಗಳಿಸುವ ಮೂಲಕ ಶಾಲೆಯ ಟಾಪರ್ ಆಗಿದ್ದಾರೆ.

ಅಕ್ಷಯ ತೃತೀಯ ಅಂಗವಾಗಿ ಜೋಸ್ ಅಲುಕ್ಕಾಸ್‌ನಿಂದ ವಿಶೇಷ ಕೊಡುಗೆ




ಅಕ್ಷಯ ತೃತೀಯ ಅಂಗವಾಗಿ ಜೋಸ್ ಅಲುಕ್ಕಾಸ್ ವಿಶೇಷ ಕೊಡುಗೆ ನೀಡಿದೆ.

ಬೆಂಗಳೂರು, ಏ.16– ಜೋಸ್ ಅಲುಕ್ಕಾಸ್, ಅಕ್ಷಯ ತೃತೀಯ ಅಂಗವಾಗಿ ತನ್ನ ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ಘೋಷಿಸಿದೆ.

ಜೋಸ್ ಅಲುಕ್ಕಾಸ್‌ನ ಮಳಿಗೆಗಳಲ್ಲಿ ಗ್ರಾಹಕರು ಕೇವಲ 10% ಪಾವತಿಯನ್ನು ಮಾಡಿ ಹಾಗೂ ಚಿನ್ನದ ದರದ ಏರಿಕೆಯಿಂದ ಪ್ರಯೋಜನ ಪಡೆಯಬಹುದು. ಆಯ್ದ ಚಿನ್ನ, ವಜ್ರ ಮತ್ತು ಪ್ಲಾಟಿನಂ ಆಭರಣಗಳನ್ನು ಖರೀದಿಸುವ ಗ್ರಾಹಕರಿಗೆ ಮೇಕಿಂಗ್ ಶುಲ್ಕದ ಮೇಲೆ ಶೇ.50% ರಿಯಾಯಿತಿ ಹಾಗೂ ವಜ್ರದ ಮೌಲ್ಯದ ಮೇಲಿನ ಶೇ.30% ರಿಯಾಯಿತಿಯನ್ನು ಆಯ್ದ ಎಲ್ಲಾ ಸಂಗ್ರಹಗಳಿಗೆ ನೀಡುತ್ತಿದೆ.

10 ಗ್ರಾಂ ಚಿನ್ನಾಭರಣ, ವಜ್ರ ಖರೀದಿಸುವ ಗ್ರಾಹಕರಿಗೆ ಒಂದು ಚಿನ್ನದ ನಾಣ್ಯ ಉಚಿತವಾಗಿ ಸಿಗಲಿದೆ ಹಾಗೂ 0% ವೇಸ್ಟೇಜ್ ಚಾರ್ಜ್‌ನಲ್ಲಿ ಹಳೆಯ 22 ಕ್ಯಾರೆಟ್ ಚಿನ್ನಾಭರಣ ವಿನಿಮಯಕ್ಕೆ ಅವಕಾಶ ನೀಡಿದೆ. ಏ.19 ರಿಂದ ಮೇ 3 ರವರೆಗೆ ಪ್ರತಿ ಗ್ರಾಂ ಚಿನ್ನಾಭರಣ ಖರೀದಿಗೆ 100 ರೂಪಾಯಿ ಕ್ಯಾಶ್‌ಬ್ಯಾಕ್ ವೋಚರ್ ನೀಡಲಾಗುವುದು ಎಂದು ಜೋಸ್ ಅಲುಕ್ಕಾಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಪೌಲ್ ಅಲುಕ್ಕಾಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ...



ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನದಂದು ಮೈಸೂರಿನ ಟೌನ್‌ಹಾಲ್‌ನಲ್ಲಿ ದಿ. ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರ ಸಹೋದರ ವಿ.ರಾಮಸ್ವಾಮಿ, ತಮ್ಮ ನೂರಾರು ಅಭಿಮಾನಿಗಳೊಂದಿಗೆ ಡಾ. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.

ನಾಳೆಯಿಂದ ಉಚಿತ ಯೋಗಾಸನ ಶಿಬಿರ

ಮೈಸೂರು, ಏ.16– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಮೈಸೂರು ವೆಲ್‌ನೆಸ್ ಯೋಗ ಸೆಂಟರ್ ವತಿಯಿಂದ ಏ.18ರಿಂದ ಹತ್ತು ದಿನಗಳ ಉಚಿತ ಯೋಗ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಧ್ಯಾನ, ಮುದ್ರಯೋಗ, ಪ್ರಾಣಾಯಾಮ, ಕ್ರಿಯಾಯೋಗವನ್ನು ಎಲ್ಲಾ ವಯೋಮಾನದವರಿಗೂ ಉಚಿತವಾಗಿ ಹೇಳಿಕೊಡಲಾಗುತ್ತದೆ. ತರಬೇತಿಯು ಬೆಳಗ್ಗೆ 6ರಿಂದ 7 ಗಂಟೆಯವರೆಗೆ ಹಾಗೂ ಸಂಜೆ 6.30ರಿಂದ 7.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ.9980959598, 8050051444 ಸಂಪರ್ಕಿಸಿ.



ವಿವಿಧ ಕ್ಷೇತ್ರದ ಸಾಧಕರಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ

ಎಂ.ವೀರಪ್ಪ ದತ್ತಿ ಪ್ರಶಸ್ತಿ, ಡಿ.ವಿ. ಹಾಲಭಾವಿ ಪ್ರಶಸ್ತಿಗಳೂ ಸ್ವೀಕಾರ



ವಿವಿಧ ಕ್ಷೇತ್ರದ ಸಾಧಕರಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ(ನಾಲ್ವರಿಗೆ), ವಚನ ಚಿತ್ರರಚನಾ ಪಿತಾಮಹ ಶ್ರೀ ಎಂ.ವೀರಪ್ಪ ದತ್ತಿ ಪ್ರಶಸ್ತಿ(ಮೂವರಿಗೆ), ಕಲಾಗುರು ಶ್ರೀ ಡಿ.ವಿ.ಹಾಲಭಾವಿ ಪ್ರಶಸ್ತಿ(ಮೂವರಿಗೆ) ಸೇರಿದಂತೆ 10 ಮಂದಿಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಇತರೆ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು, ಏ.16(ಎಸ್‌ಪಿಎನ್)–ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠದ ಆವರಣದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ(ನಾಲ್ಕು ಮಂದಿ), ವಚನ ಚಿತ್ರ ರಚನಾ ಪಿತಾಮಹ ಶ್ರೀ ಎಂ.ವೀರಪ್ಪ ದತ್ತಿ ಪ್ರಶಸ್ತಿ (ಮೂವರು ಮಂದಿ), ಕಲಾಗುರು ಶ್ರೀ ಡಿ.ವಿ.ಹಾಲಭಾವಿ ಪ್ರಶಸ್ತಿ (ಮೂವರು ಮಂದಿ) ಸೇರಿದಂತೆ ಒಟ್ಟು 10 ಮಂದಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸುತ್ತೂರು ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ಹಿರಿಯ ವಿಮರ್ಶಕ ಡಾ.ಓ.ಎಲ್.ನಾಗಭೂಷಣಸ್ವಾಮಿ ರಚಿತ 'ಉಲಿವ ಮರ', ಹಿರಿಯ ಲೇಖಕ ಎಚ್.ಎಸ್.ಸಿದ್ಧಗಂಗಪ್ಪ ರಚಿತ 'ಶಿವಶರಣರು ಮತ್ತು ಜನಪದ ಕಲೆಗಳು' ಹಾಗೂ ಹಿರಿಯ ಲೇಖಕರಾದ ಡಾ.ಎಸ್.ಶಿವಾನಂದ ಬ್ಯಾಲಹುಣಸಿ ಮತ್ತು ಡಾ.ಅಜಯ್ ಕುಮಾರ್ ತಾಂಡೂರ ರಚಿತ 'ಚೆನ್ನಬಸವಣ್ಣನವರ ಕರಣಹಸಿಗೆ ವೈಜ್ಞಾನಿಕ ವಿಶ್ಲೇಷಣೆ' ಕೃತಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಮಾಡಲಾಯಿತು. 'ಆಧ್ಯಾತ್ಮ ಕ್ರಾಂತಿವೀರ ಮಹಾತ್ಮ ಶ್ರೀ ಬಸವೇಶ್ವರ್ ಕೇ ವಚನ್' ಪುಸ್ತಕ ರಚಿತ ದಿ. ಪ್ರೊ. ಬಾಲಚಂದ್ರ ಜಯಶೆಟ್ಟಿ ಅವರ ಪರವಾಗಿ ಪತ್ನಿ ಪುಷ್ಪಾ ಪ್ರಶಸ್ತಿ ಸ್ವೀಕರಿಸಿದರು.

ಸಂಗಪ್ಪ ನಿಂಗಪ್ಪ ಮಲಗೊಂಡ, ಶಿವಪುತ್ರಪ್ಪ ಎಂ.ಬಡಿಗೇರ, ಚಂದ್ರಶೇಖರ್ ಭೀಮಣ್ಣಪ್ಪ ಸೋಮಶೆಟ್ಟಿಗೆ ವಚನ ಚಿತ್ರರಚನಾ ಪಿತಾಮಹ ಎಂ.ವೀರಪ್ಪ ದತ್ತಿ ಪ್ರಶಸ್ತಿ, ಪ್ರೊ.ಕೆ.ಎಸ್.ಅಪ್ಪಾಜಯ್ಯ, ವಿಜಯ ರಾವ್, ಕಿಶೋರ್ ಎಸ್.ಹಿರೇಮಠರಿಗೆ ಕಲಾಗುರು ಡಿ.ವಿ.ಹಾಲಭಾವಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಎಂ.ಎಸ್.ಮೂರ್ತಿ ಮಾತನಾಡಿ, ಅಕ್ಷರದ ತಾಯಿ ದೃಶ್ಯಕಲೆ. ಇಂತಹ ದೃಶ್ಯಕಲೆಗೂ ಒಂದು ಸ್ಥಾನಮಾನವಿದೆ. ದೃಶ್ಯಕಲೆಗೆ ನಿಜಕ್ಕೂ ಭವಿಷ್ಯ ಇದೆ. ನಾವು ಬಹಳ ಜವಾಬ್ದಾರಿಯಿಂದ ಕಲೆ, ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಕನ್ನಡ–ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ.ಬಿ.ಎಸ್.ಮಂಜುನಾಥಸ್ವಾಮಿ ಮಾತನಾಡಿ, ಈ ಹಿಂದೆ ರಾಜ–ಮಹಾರಾಜರ ಕಾಲದಲ್ಲಿ ಕಲೆ, ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಅಂತಹ ಅದ್ಭುತ ಕಾರ್ಯವನ್ನು ಸುತ್ತೂರು ಮಠ ಮಾಡುತ್ತಿದೆ. ನಿಜವಾದ ಕಲಾವಿದರ ಕಾರ್ಯಗಳನ್ನು ಗುರುತಿಸಿ ಇಲ್ಲಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ. ಇಂದು ಪುಸ್ತಕಗಳ ಸಂಖ್ಯೆ ಹೆಚ್ಚುತ್ತಿದೆ. ಬರೆಯುವವರೂ ಹೆಚ್ಚಾಗಿದ್ದಾರೆ. ಆದರೆ ಓದುಗರ ಸಂಖ್ಯೆ ವಿರಳ ಎಂದರು.

"ಕಲೆ ಮತ್ತು ಸಾಹಿತ್ಯ ಮನುಷ್ಯನ ಮನಸ್ಸಿಗೆ ಸಾಂತ್ವನ ನೀಡುವ ಅದ್ಭುತ ಶಕ್ತಿಗಳು. ಕಲೆ, ಸಾಹಿತ್ಯ, ಸಂಗೀತ ಮತ್ತು ನೃತ್ಯಗಳಲ್ಲಿ ತಲ್ಲೀನರಾದರೆ ಅವುಗಳು ಅದ್ಭುತವಾಗಿ ಮೂಡಿ ಬರುತ್ತವೆ. ಅವು ನೋಡುಗರಿಗೂ ಮತ್ತು ಓದುಗರಿಗೂ ಮುದ ನೀಡುತ್ತವೆ. –ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ.

ಹಿರಿಯ ವಿಮರ್ಶಕ ಡಾ.ಓ.ಎಲ್.ನಾಗಭೂಷಣಸ್ವಾಮಿ ಮಾತನಾಡಿ, ಅನ್ನದ ಅಗತ್ಯ ಇರುವವರಿಗೆ ಅನ್ನವನ್ನು, ಅಕ್ಷರದ ಅಗತ್ಯತೆ ಇರುವವರಿಗೆ ಅಕ್ಷರವನ್ನು ಮಠ ನೀಡಿತು. ಅನ್ನ ಹಾಗೂ ಅಕ್ಷರ ದಾಸೋಹವನ್ನು ಯಾವುದೇ ಫಲಾಪೇಕ್ಷೆ ಇಲ್ಲದೆ ಮಠಗಳು ಮಾಡುತ್ತಿವೆ. ವಚನಗಳನ್ನು ಓದಿದಷ್ಟು ನಮಗೆ ಹೊಸ ವಿಚಾರಗಳು ತಿಳಿಯುತ್ತಾ ಹೋಗುತ್ತವೆ. 12ನೇ ಶತಮಾನದಲ್ಲಿ ವಚನಕಾರರು ಹೇಳಿದ ಮಾತುಗಳು ಪ್ರಸ್ತುತ ಹೊಸ ಅರ್ಥದಲ್ಲಿ ಕಾಣುತ್ತವೆ. ವಚನಕಾರರು ತಮ್ಮ ಅನುಭವವನ್ನೇ ಇಟ್ಟುಕೊಂಡು ಹೇಳಿದ ವಚನಗಳು ಅತ್ಯಂತ ಮುಖ್ಯವಾದದ್ದು ಎಂದರು.

ವೇದಿಕೆಯಲ್ಲಿ ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಉದ್ಯಮಿ ಸತೀಶ್ ಪ್ರಫುಲ್ಲಚಂದ್ರ, ಧ್ವನಿ ಫೌಂಡೇಷನ್ ಅಧ್ಯಕ್ಷರಾದ ಡಾ.ಶ್ವೇತಾ ಮಡಪ್ಪಾಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರೆ, ರೂಪ ಗುರುಪ್ರಸಾದ್ ಹಾಗೂ ಕೆ.ಜಿ.ವಿನುತಾ ಪ್ರಾರ್ಥಿಸಿದರು. ನಗರ್ಲೆ ಶಿವಕುಮಾರ್, ಎಚ್.ಎಸ್. ಅಂಬಿಕಾ ಶಿವನಂಜಪ್ಪ, ಎನ್.ಪಿ.ಪರಶಿವಮೂರ್ತಿ, ಡಾ.ಹೆಚ್.ಆರ್. ಮಮತಾ, ಜಿ.ಎಂ.ಪ್ರಸಾದ್, ನಾಗಲಾಂಬಿಕಾ ನಾಗಲಿಂಗಸ್ವಾಮಿ, ಕುಮಾರಸ್ವಾಮಿ ವಿರಕ್ತಮಠ, ಸೌಮ್ಯ, ಎಸ್.ಸಿ.ಚನ್ನಬಸಪ್ಪ, ಡಿ.ಎಸ್.ಅಂಬಿಕಾ ಮತ್ತು ಎಂ.ದೇವಿಕಾ ಪ್ರಶಸ್ತಿ ಪುರಸ್ಕೃತರ ಸ್ವಸ್ತಿ ವಾಚನ ಮಾಡಿದರು. ಡಾ.ರೇಚಣ್ಣ ವಂದಿಸಿದರೆ, ಬಿ. ನಿರಂಜನ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

ಅಂಬೇಡ್ಕರ್ ಜನ್ಮ ದಿನಾಚರಣೆ: ಸಾಧಕರಿಗೆ ಸನ್ಮಾನ; ಮಕ್ಕಳಿಗೆ ಉಚಿತ ಬ್ಯಾಗ್ ವಿತರಣೆ



ಮೈಸೂರಿನ ಕುವೆಂಪುನಗರ ಕಾಂಪ್ಲೆಕ್ಸ್ ಆವರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಅಭಿಮಾನಿಗಳು ನಿವೃತ್ತ ನೌಕರರ ಬಳಗದ ವತಿಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತಿತರ ಗಣ್ಯರು ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಮೈಸೂರು,ಏ.16–ಮೈಸೂರಿನ ಕುವೆಂಪು ನಗರ ಕಾಂಪ್ಲೆಕ್ಸ್ ಆವರಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಅಭಿಮಾನಿಗಳು ನಿವೃತ್ತ ನೌಕರರ ಬಳಗದ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಜ್ಯೋತಿ ಬೆಳಗಿಸಿ, ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ವಿಶ್ವ ಕಂಡಂತಹ ಮಹಾನ್ ಮೇಧಾವಿ. ಅಂಬೇಡ್ಕರ್ ಇಲ್ಲದ ಭಾರತವನ್ನು ಊಹಿಸಲು ಸಾಧ್ಯವಿಲ್ಲ. ಅಂಬೇಡ್ಕರ್ ಈ ದೇಶದ ಬಹು ದೊಡ್ಡ ಆಸ್ತಿ ಮತ್ತು ಶಕ್ತಿ. ಮಹಾನ್ ಮಾನವತಾವಾದಿ ಅಂಬೇಡ್ಕರ್ ತಮಗೆ ಎಷ್ಟೇ ನೋವು, ಅಡೆತಡೆ, ಅವಮಾನ, ಅಪಮಾನಗಳಾದರೂ ಭವಿಷ್ಯದಲ್ಲಿ ನನ್ನಂತೆ ಮತ್ಯಾರೂ ಅನುಭವಿಸಬಾರದು, ನೆಮ್ಮದಿ ಮತ್ತು ಘನತೆಯಿಂದ ಬದುಕಬೇಕೆಂಬ ದೂರದೃಷ್ಟಿಯಿಂದ ಶ್ರೇಷ್ಠ ಸಂವಿಧಾನ ನೀಡಿದರು ಎಂದು ಹೇಳಿದರು.

ಇಂದು ದೇಶದ ಅತೀ ಹಿಂದುಳಿದ ಕಟ್ಟಕಡೆಯ ವ್ಯಕ್ತಿಗೂ ಸಮಾನತೆ ಸ್ವಾತಂತ್ರ್ಯ ದಕ್ಕಿದೆ ಎಂದರೆ ಅದು ಅಂಬೇಡ್ಕರ್ ಅವರ ಕೊಡುಗೆ. ಮಹಿಳೆಯರು ಅಡುಗೆ ಮನೆಗೆ ಸೀಮಿತ ಎಂಬ ಮನುವಾದಿಗಳ ಉದ್ಧಟತನವನ್ನು ತೊಡೆದು ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಇರುವಿಕೆಯನ್ನು ಸಾಬೀತುಪಡಿಸಿಕೊಳ್ಳಲು ಸಾಧ್ಯವಾಗಿದ್ದು ಅಂಬೇಡ್ಕರ್ ಅವರು ನೀಡಿದ ಸಮಾನತೆ ಶಕ್ತಿಯಿಂದ. ಸಂವಿಧಾನದಿಂದ ಮಾತ್ರ ಭಾರತದ ಪ್ರತಿಯೊಬ್ಬರೂ ಸಮಾನ ಅವಕಾಶಗಳೊಂದಿಗೆ ನೆಮ್ಮದಿ ಹಾಗೂ ಘನತೆಯಿಂದ ಜೀವನ ನಡೆಸಲು ಸಾಧ್ಯವಾಗಿದೆ ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದು ಹೇಳಿದರು.


ಸಂವಿಧಾನ ನೀಡಿರುವ ಅವಕಾಶಗಳಿಂದ ಬೆಳೆದು, ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆದವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯಗಳನ್ನು ಕಿಂಚಿತ್ತಾದರೂ ಮೈಗೂಡಿಸಿಕೊಳ್ಳಬೇಕು. ಬಾಯಲ್ಲಿ ಮಾತ್ರ ಅಂಬೇಡ್ಕರ್ ಸಿದ್ಧಾಂತ ಹೇಳಿದರೆ ಸಾಲದು, ಬದಲಾಗಿ ಅವರ ಮಾರ್ಗದಲ್ಲಿ ನಡೆದು ಉತ್ತಮ ಸಮಾಜ ಕಟ್ಟಬೇಕು. ಸಮಾಜದ ಅಂಧಕಾರವನ್ನು ಹೋಗಲಾಡಿಸಲು ಕೈಲಾದ ಪ್ರಯತ್ನ ಮಾಡಬೇಕು. ಆಗ ಮಾತ್ರ ಇಂತಹ ಮಹನೀಯರ ಜಯಂತಿ ಆಚರಣೆಗೆ ನಿಜವಾದ ಅರ್ಥ ಬರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡಿರುವ ತಿ.ನರಸೀಪುರ ತಾಲೂಕು ಚಿಕ್ಕಬಾಗಿಲು ಗ್ರಾಮದ ಕುಮಾರಿ ನಿತ್ಯ ಎನ್.ಗುಜ್ಜಾರ್ ಹಾಗೂ ಲೋಕೋಪಯೋಗಿ ಇಲಾಖೆ ನಿವೃತ್ತ ಇಂಜಿನಿಯರ್ ಬೋರಯ್ಯ, ನಿವೃತ್ತ ಪತ್ರಾಂಕಿತ ಖಜಾನೆ ಅಧಿಕಾರಿ ವೆಂಕಟರಾಮು ಅವರನ್ನು ಅಭಿನಂದಿಸಲಾಯಿತು. ಇದೇ ವೇಳೆ ಶಾಲಾ ಮಕ್ಕಳಿಗೆ ಉಚಿತವಾಗಿ ಬ್ಯಾಗ್ ವಿತರಣೆ ಮಾಡಲಾಯಿತು. ಬಳಗದ ಸಂಚಾಲಕ, ನಿವೃತ್ತ ಪ್ರಾಧ್ಯಾಪಕ ಡಾ.ಡಿ.ಆನಂದ್, ಬಳಗದ ಉಪಾಧ್ಯಕ್ಷ ಪಿ.ಮರಿಸ್ವಾಮಿ, ದೊಡ್ಡಸ್ವಾಮಿ, ವೆಂಕಟರಮಣ, ಶಾಂತರಾಜು, ಕೃಷ್ಣಮೂರ್ತಿ, ಶಂಕರ್, ಶಿವಣ್ಣ, ಚಿಕ್ಕ ಸಿದ್ದಯ್ಯ, ಯಲಕವಯ್ಯ, ಶ್ರೀನಿವಾಸ್, ಯುವ ಮುಖಂಡರಾದ ರಾಮನ್.ಕೆ(ರಾಮು), ಲಿಂಗರಾಜು ಮತ್ತಿತರರು ಉಪಸ್ಥಿತರಿದ್ದರು.

ಸ್ವಯಂ ತೆರಿಗೆ ಕಟ್ಟುವುದಕ್ಕೂ ಹೆಣಗಾಟ

ಹೂಟಗಳ್ಳಿ ನಗರಸಭೆಯಲ್ಲಿ ಅವ್ಯವಸ್ಥೆಗೆ ಆಸ್ತಿ ಮಾಲೀಕರು ಹೈರಾಣ; ಆರೋಪ







ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಆಸ್ತಿ ಮಾಲೀಕರು, ಕಂದಾಯ ಪಾವತಿಗೆ ಪರಿತಪಿಸುವ ದುಃಸ್ಥಿತಿ ನಿರ್ಮಾಣವಾಗಿದೆ.

ಮೈಸೂರು, ಏ.16– ಮೈಸೂರಿನ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಆಸ್ತಿ ಮಾಲೀಕರು, ಕಂದಾಯ ಪಾವತಿಗೆ ಮೂರ್‍ನಾಲ್ಕು ದಿನ ಅಲೆಯುವ ದುಃಸ್ಥಿತಿ ನಿರ್ಮಾಣವಾಗಿದೆ.

ಅರ್ಜಿ ನೀಡಿ ಬೆಳಗ್ಗೆಯಿಂದ ಸಂಜೆವರೆಗೆ ಕಾದು ಕುಳಿತರೂ ಕಂದಾಯ ಪಾವತಿ ರಶೀದಿ ಸಿಗುವುದಿಲ್ಲ. ಮರುದಿನ ರಶೀದಿ ಸಿಕ್ಕರೂ ಬ್ಯಾಂಕ್‌ನಲ್ಲಿ ಸರದಿಯಲ್ಲಿ ನಿಂತು ಹಣ ಪಾವತಿ ಮಾಡುವಷ್ಟರಲ್ಲಿ ದಿನವೇ ಮುಗಿಯುತ್ತದೆ. ಇದಕ್ಕೆ ಮತ್ತೊಂದು ದಿನ ಬರಬೇಕು. ಈ ಬಗ್ಗೆ ನಗರಸಭೆ ಸಿಬ್ಬಂದಿಯನ್ನು ವಿಚಾರಿಸಿದರೆ ಸರ್ವರ್ ಸಮಸ್ಯೆ ಇದೆ ಎಂದು ನೆಪ ಹೇಳುತ್ತಾರೆ ಎಂದು ನೊಂದ ಸಾರ್ವಜನಿಕರು ದೂರಿದ್ದಾರೆ.

ಪರಿಚಿತರಿಗೆ ತಕ್ಷಣ ಕೆಲಸ: ಬೆಳಗ್ಗೆಯಿಂದ ಸಂಜೆವರೆಗೆ ಸರದಿಯಲ್ಲಿ ನಿಂತಿದ್ದರೂ ತೆರಿಗೆ ಪಾವತಿಗೆ ಚಲನ್ ಸಿಗುವುದಿಲ್ಲ. ಆದರೆ ಕೆಲವರು ಮಾತ್ರ ಹೀಗೆ ಹೋಗಿ ಹಾಗೆ ಚಲನ್ ಪಡೆದು ತೆರಳುತ್ತಾರೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಪರಿಚಿತರು, ಪ್ರಭಾವಿಗಳ ಶಿಫಾರಸು ಇದ್ದವರಿಗೆ ಇಲ್ಲಿ ಯಾವುದೇ ಸರ್ವರ್ ಸಮಸ್ಯೆ ಆಗುವುದಿಲ್ಲ. ಸರ್ಕಾರಕ್ಕೆ ತೆರಿಗೆ ಕಟ್ಟುವುದಕ್ಕೂ ಕೆಲಸ ಕಾರ್ಯ ಬಿಟ್ಟು ಎರಡು–ಮೂರು ದಿನ ಅಲೆದಾಡುವ ದುಃಸ್ಥಿತಿ ನಿರ್ಮಾಣವಾಗಿದೆ. ಸಾಮಾನ್ಯರಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸರಿಯಾಗಿ ಸ್ಪಂದಿಸುವುದಿಲ್ಲ. 32 ವರ್ಷಗಳಿಂದ ಇಂತಹ ಸ್ಥಿತಿಯನ್ನು ಕಂಡಿಲ್ಲ. ನಗರಸಭೆಯಾದ ನಂತರ ಹಲವು ಬಡಾವಣೆಗಳನ್ನು ಸೇರ್ಪಡೆ ಮಾಡಿರುವುದರಿಂದ ಈ ಸಮಸ್ಯೆ ಸೃಷ್ಟಿಯಾಗಿದೆ ಎನ್ನುತ್ತಾರೆ. ಹಾಗಿದ್ದರೆ ಅದಕ್ಕೆ ತಕ್ಕಂತೆ ಸಿಬ್ಬಂದಿಯನ್ನು ನಿಯೋಜಿಸಬೇಕು. ಅದನ್ನು ಬಿಟ್ಟು ಸಾರ್ವಜನಿಕರಿಗೆ ಈ ಪರಿ ತೊಂದರೆ ಕೊಡಬಾರದು ಎಂದು ಮಹಿಳೆಯೊಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ.


ಸೂಕ್ತ ವ್ಯವಸ್ಥೆಗೆ ಆಗ್ರಹ: ಆಸ್ತಿ ತೆರಿಗೆ ಪಾವತಿಗೇ 2–3 ದಿನ ಕಾಯುವಂತಾದರೆ ಜನ ಜೀವನಕ್ಕೆ ತೊಂದರೆಯಾಗುತ್ತದೆ. ಮನೆ ನಿರ್ಮಾಣಕ್ಕೆ ಮಾಡಿದ ಸಾಲ ತೀರಿಸಲು ಪರಿಪಾಟಲು ಪಡುವವರಿಗೆ ಒಂದು ದಿನ ಕೆಲಸಕ್ಕೆ ಹೋಗದಿದ್ದರೂ ಕಷ್ಟವಾಗುತ್ತದೆ. ಬೇರೆ ಊರುಗಳಲ್ಲಿ ನೆಲೆಸಿರುವ ಆಸ್ತಿ ಮಾಲೀಕರು ಮೂರ್‍ನಾಲ್ಕು ದಿನ ಅಲೆದಾಡಲು ಆಗುವುದಿಲ್ಲ. ಜನರ ಸಮಸ್ಯೆಗೆ ಅಧಿಕಾರಿಗಳು ಸ್ಪಂದಿಸಬೇಕು. ತೆರಿಗೆ ಪಾವತಿದಾರರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ತ್ವರಿತ ಪಾವತಿಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಅವ್ಯವಸ್ಥೆಯ ಗೂಡು

ಸದ್ಯ ಆಸ್ತಿ ತೆರಿಗೆ ಮೇಲೆ ಶೇ.5ರಷ್ಟು ರಿಯಾಯ್ತಿ ಇರುವ ಹಿನ್ನೆಲೆಯಲ್ಲಿ ಅಧಿಕ ಮಂದಿ ತೆರಿಗೆ ಪಾವತಿಗೆ ಬರುತ್ತಾರೆ. ವೃದ್ಧರು, ವಿಕಲಚೇತನರು, ಅನಾರೋಗ್ಯದಿಂದ ಬಳಲುತ್ತಿರುವವರು ಸರದಿಯಲ್ಲಿ ನಿಲ್ಲುತ್ತಾರೆ. ಆಸನದ ವ್ಯವಸ್ಥೆ ಸೇರಿದಂತೆ ಯಾವುದೇ ಮೂಲಸೌಕರ್ಯ ಕಲ್ಪಿಸಿಲ್ಲ. ಕನಿಷ್ಠ ಸರದಿಯನ್ನು ಸರಿಯಾದ ರೀತಿ ನಿರ್ವಹಣೆ ಮಾಡುವವರೂ ಗತಿಯಿಲ್ಲ. ಪರಿಣಾಮ ನೂಕುನುಗ್ಗಲು ಉಂಟಾಗಿ ಜನರ ನಡುವೆಯೇ ಜಗಳ ಉಂಟಾಗುತ್ತಿದೆ. ಬೆಳಗ್ಗೆಯಿಂದ ಸಂಜೆವರೆಗೂ ಕಾದಿದ್ದರೂ ವಿಳಂಬವಾಗಲು ಕಾರಣ ವೇನೆಂದು ಸೌಜನ್ಯಕ್ಕೂ ತಿಳಿಸುವುದಿಲ್ಲ. ನಾವೇ ಹೋಗಿ ಕೇಳಿದರೂ ಸರ್ವರ್ ಡೌನ್ ಕಾಯಬೇಕು ಎನ್ನುತ್ತಾರೆ. ಊಟಕ್ಕೆಂದು ಹೊರಹೋಗುವ ಸಿಬ್ಬಂದಿ ತಮಗಿಷ್ಟ ಬಂದಾಗ ವಾಪಸ್ಸಾಗುತ್ತಾರೆ ಎಂದು ಆರೋಪಿಸಿದ್ದಾರೆ.

ವಿ ಕೇರ್ ಸಂಸ್ಥೆಯಲ್ಲಿ ಉಚಿತ ಬೇಸಿಗೆ ಶಿಬಿರ

ಸಮತಾ ವೇದಿಕೆ ಹಿರಿಯ ಸದಸ್ಯೆ ಪ್ರೊ.ಲತಾ ಬಿದ್ದಪ್ಪ ಚಾಲನೆ



ವಿ ಕೇರ್ ಸಂಸ್ಥೆಯಲ್ಲಿ ಆಯೋಜಿಸಿದ್ದ ಉಚಿತ ಮಕ್ಕಳ ಬೇಸಿಗೆ ಶಿಬಿರಕ್ಕೆ ಸಮತಾ ವೇದಿಕೆ ಹಿರಿಯ ಸದಸ್ಯೆ ಪ್ರೊ.ಲತಾ ಬಿದ್ದಪ್ಪ ಚಾಲನೆ ನೀಡಿದರು.

ಮೈಸೂರು, ಏ.16(ಎಂಕೆ)– ಮೈಸೂರಿನ ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿರುವ ವಿ ಕೇರ್ ಸಂಸ್ಥೆಯಲ್ಲಿ 'ಒಳಗೊಳ್ಳುವಿಕೆಯ ಜೀವನ' ಶೀರ್ಷಿಕೆಯಡಿ ಮಕ್ಕಳಿಗೆ ಹಮ್ಮಿಕೊಂಡಿರುವ ಉಚಿತ ಬೇಸಿಗೆ ಶಿಬಿರಕ್ಕೆ ಸಮತಾ ವೇದಿಕೆ ಹಿರಿಯ ಸದಸ್ಯೆ ಪ್ರೊ.ಲತಾ ಬಿದ್ದಪ್ಪ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಶಿಬಿರಗಳು ಮಕ್ಕಳ ಬಲವರ್ಧನೆಯ ಸಮಾಜಮುಖಿ ಕಾರ್ಯಕ್ರಮಗಳಾಗಿದ್ದು, ಸಮಾಜದ ಒಳ್ಳೆಯ ಮನಸ್ಸುಗಳು ಬೆಂಬಲ ನೀಡಬೇಕು. ಮಕ್ಕಳಿಗೆ ಹಿರಿಯರಿಂದ ಮೌಲ್ಯಾಧಾರಿತವಾದ ಶಿಬಿರಗಳು, ಪಠ್ಯೇತರ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಮಕ್ಕಳು ಆತ್ಮವಿಶ್ವಾಸಭರಿತರಾಗಿ, ಸಮಾಜದ ಬಗ್ಗೆ ನಂಬಿಕೆ ಹೊಂದುತ್ತಾ ತಮ್ಮಲ್ಲಿನ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಈ ಶಿಬಿರದಲ್ಲಿ ಹೆಚ್ಚು ಪ್ರಾಧಾನ್ಯತೆ ಪಡೆದಿರುವುದು ನನಗೆ ಅಪಾರ ಭರವಸೆ ಮೂಡಿಸಿದೆ ಎಂದರು.

ನಿವೃತ್ತ ಆಂಗ್ಲ ಪ್ರಾಧ್ಯಾಪಕ ಪ್ರೊ.ಕೆ.ಪಿ. ವಾಸುದೇವನ್ ಮಾತನಾಡಿ, ನಮ್ಮ ಪರಿಸರದಲ್ಲಿ ಮಕ್ಕಳಿಗಾಗಿ ಇಂತಹ ಮೌಲ್ಯಾಧಾರಿತ ಸಾಂಸ್ಕೃತಿಕ ಶಿಬಿರಗಳು ತಿಳುವಳಿಕೆ ಇರುವ ಮನಸ್ಸುಗಳಿಂದ ನಡೆಯುತ್ತಿರುವುದು ನಿಜಕ್ಕೂ ಅಭಿನಂದನಾರ್ಹ. ಸಾರ್ವಜನಿಕರು ತಮ್ಮ ಧಾರ್ಮಿಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಿ ತಮ್ಮೆಲ್ಲಾ ಸಂಪನ್ಮೂಲಗಳನ್ನು ಧಾರೆ ಎರೆಯುವ ಬದಲು ದೇಶದ ಭವಿಷ್ಯವಾದ ಮಕ್ಕಳ ಶಿಬಿರಗಳಿಗೆ ಹೆಚ್ಚು ಸ್ಪಂದಿಸಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ವಿ–ಕೇರ್ ಸಂಸ್ಥೆಯ ಸಂಸ್ಥಾಪಕಿ ಡಾ.ಕುಮುದಿನಿ ಅಚ್ಚಿ, ಪ್ರೊ.ಶಶಿಕಲಾ, ಪತ್ರಕರ್ತ ಅಯ್ಯಪ್ಪ ಹೂಗಾರ, ಒಡನಾಡಿ ಸ್ಟ್ಯಾನ್ಲಿ, ಬರಹಗಾರ ಶ್ರೀಪಾದ ಹೆಗಡೆ, ರಂಗಕರ್ಮಿ ಜಯಶ್ರೀ ಹೆಗಡೆ ಮತ್ತಿತರರಿದ್ದರು.

ಮಹಾರಾಜ ಕಾಲೇಜು ಆಡಳಿತಾಧಿಕಾರಿಗೆ ಅಭಿನಂದನೆ



ಮೈಸೂರಿನಮಹಾರಾಜ ಕಾಲೇಜಿನ ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಡಾ. ಗೋವಿಂದರಾಜು ಅವರನ್ನು ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆಯಿಂದ ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಡಾ.ಷಣ್ಮುಗಂ, ಡಾ.ಮಂಜುನಾಥ್, ಡಾ.ಲೋಕೇಶ್ ಡಾ.ರವೀಂದ್ರ, ಡಾ.ರಾಚಯ್ಯ ದಯಾನಂದ, ವಿನೋದ್ ಇದ್ದರು.

ಸ್ನೇಹಿತನ ಬೈಕ್‌ನಲ್ಲಿ ವ್ಹೀಲಿಂಗ್; ಯುವಕನ ವಿರುದ್ಧ ಪ್ರಕರಣ

ಮೈಸೂರು,ಏ.16(ಪಿಎಂ)– ಸ್ನೇಹಿತನ ಬೈಕ್ ವ್ಹೀಲಿಂಗ್ ಮಾಡಿದ್ದ ಯುವಕನ ವಿರುದ್ಧ ದೇವರಾಜ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬನ್ನಿಮಂಟಪ ನಿವಾಸಿ ಆರ್.ಕೆ.ನಿಖಿಲ್ (19) ವಿರುದ್ಧ ಪ್ರಕರಣ ದಾಖಲಾಗಿದೆ. ಈತ ಮೈಸೂರಿನ ವಸ್ತುಪ್ರದರ್ಶನ ಮೈದಾನದ ಸಮೀಪ ಮಾ.28ರಂದು ರಾತ್ರಿ 11ರ ವೇಳೆ ತನ್ನ ಸ್ನೇಹಿತನ ಬೈಕ್‌ನಲ್ಲಿ (ಕೆಎ–55, ಎಕ್ಸ್–1463) ವ್ಹೀಲಿಂಗ್ ಮಾಡಿದ್ದ. ವಾಟ್ಸಪ್ ಸ್ಟೇಟಸ್‌ವೊಂದರಲ್ಲಿ ವ್ಹೀಲಿಂಗ್ ಮಾಡಿದ್ದ ವಿಡಿಯೋ ಅಪ್‌ಲೋಡ್ ಆಗಿತ್ತು. ಇದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ದೇವರಾಜ ಸಂಚಾರ ಪೊಲೀಸರು, ವ್ಹೀಲಿಂಗ್ ಮಾಡಿದ್ದ ನಿಖಿಲ್ ನನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸಿದ್ದಾರೆ.



ಆದಿಚುಂಚನಗಿರಿ ಮಠಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ ವೇಳೆ ರಾಷ್ಟ್ರಕವಿ ಕುವೆಂಪು ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಬೇಕೆಂದು ಹಿರಿಯ ಹೋರಾಟಗಾರ ಶಿವಶಂಕರ್ ಭಿತ್ತಿ ಪತ್ರ ಹಿಡಿದು ಆಗ್ರಹಿಸಿದರು.

ಕೊಡಗಿನ ಮಕ್ಕಳ ಮೊಟ್ಟ ಮೊದಲ ಯಕ್ಷಗಾನ ವೈಭವ



ಮಡಿಕೇರಿಯಲ್ಲಿ ನಡೆದ ಮಕ್ಕಳ ಯಕ್ಷಗಾನ ಪ್ರೇಕ್ಷಕರ ಮನಸೂರೆಗೊಂಡಿತು.

ಮಡಿಕೇರಿ, ಏ.16– ಸ್ಥಳೀಯ ಮಕ್ಕಳಿಂದಲೇ ರೂಪುಗೊಂಡ ಕೊಡಗಿನ ಪ್ರಥಮ ಮಕ್ಕಳ ಯಕ್ಷಗಾನ ತಂಡ ನಡೆಸಿಕೊಟ್ಟ ಎರಡು ಪ್ರಸಂಗಗಳು, ಮಡಿಕೇರಿಯ ಮೈತ್ರಿ ಸಮುದಾಯ ಭವನದಲ್ಲಿ ಇತ್ತೀಚೆಗೆ ಯಶಸ್ವಿ ಪ್ರದರ್ಶನ ಕಂಡವು.

ಕಲಾಕಾವ್ಯ ನಾಟ್ಯಶಾಲೆ ಪ್ರಸ್ತುತ ಪಡಿಸಿದ ವೀರ ಅಭಿಮನ್ಯು ಮತ್ತು ಶ್ರೀದೇವಿ ಮಹಾತ್ಮೆ ಎಂಬ ಪ್ರಸಂಗಗಳನ್ನು ಪುಟಾಣಿ ಮಕ್ಕಳು ಅಮೋಘವಾಗಿ ಪ್ರದರ್ಶಿಸುವ ಮೂಲಕ ಪ್ರೇಕ್ಷಕರ ಹೃದಯ ಗೆದ್ದರು. ಲೋಕಕಂಟಕನಾದ ಮಹಿಷಾಸುರನನ್ನು ಜಗನ್ಮಾತೆ ಸಂಹರಿಸುವ 'ಶ್ರೀದೇವಿ ಮಹಾತ್ಮೆ' ಪ್ರಸಂಗದಲ್ಲಿ ಮಹಿಷ, ದೇವಿ ಮತ್ತು ಸಿಂಹದ ಪಾತ್ರ ಮನೋಜ್ಞವಾಗಿತ್ತು. ಮಹಿಷಾಸುರ ಮತ್ತು ಸಿಂಹ ಪ್ರೇಕ್ಷಕರ ನಡುವಿಂದ ಎದ್ದು ಬರುವ ಸನ್ನಿವೇಶ ಮತ್ತು ಅಷ್ಟಭುಜೆ ಶ್ರೀದೇವಿಯ ರಂಗ ಪ್ರವೇಶ ರೋಮಾಂಚಕಾರಿಯಾಗಿತ್ತು. ಮೊದಲ ಬಾರಿಗೆ ಯಕ್ಷಗಾನ ವೇದಿಕೆ ಏರುತ್ತಿರುವ ಮಕ್ಕಳು, ಯಾವುದೇ ಭಯ ಸಂಕೋಚಗಳಿಲ್ಲದೆ ಅಭಿನಯಿಸಿ, ಪೇಕ್ಷಕರು ಮೂಗಿನ ಮೇಲೆ ಬೆರಳಿಡುವಂತೆ ತಮ್ಮ ಪ್ರತಿಭೆ ಮೆರೆದರು.

ಕೌರವರ 'ಚಕ್ರವ್ಯೂಹ' ಬೇಧಿಸುವ ವೀರ ಅಭಿಮನ್ಯುವಿನ ಸಾಹಸಗಾಥೆಯನ್ನು ಮಕ್ಕಳು ಪ್ರಸ್ತುತಪಡಿಸಿದರು. ಭಾಗವತರ ಹಾಡು, ಚಂಡೆ ಮದ್ದಲೆಗಳ ತಾಳಕ್ಕೆ ತಕ್ಕಂತೆ ನರ್ತಿಸುತ್ತಾ, ಸಂಭಾಷಣೆ ಹೇಳುತ್ತಾ ಯಕ್ಷಗಾನ ವೈಭವಕ್ಕೆ ಕಳೆತಂದುಕೊಟ್ಟರು.

ಸುಳ್ಯದ ಬಾಲಕೃಷ್ಣ ನಾಯರ್ ಗರಡಿಯಲ್ಲಿ ಕಳೆದ ಆರು ತಿಂಗಳ ತರಬೇತಿ ಪಡೆದಿರುವ ಕಲಾಕಾವ್ಯ ನಾಟ್ಯ ಶಾಲೆಯ ಮಕ್ಕಳು, ಕೊಡಗಿನಲ್ಲೂ ಯಕ್ಷ ಗಾನ ಕಲೆಯನ್ನು ಗಟ್ಟಿಗೊಳಿಸಬಹುದು ಎಂದು ನಿರೂಪಿಸಿದರು.

ಇದಕ್ಕೂ ಮುನ್ನ ನಡೆದ ಉದ್ಘಾಟನಾ ಸಮಾರಂಭದಲ್ಲಿ ಕಲಾಕಾವ್ಯ ನಾಟ್ಯ ಶಾಲೆಯ ಸ್ಥಾಪಕಿ ಕಾವ್ಯಶ್ರೀ, ಯಕ್ಷಗಾನ ಗುರುಗಳಾದ ತಾರಾನಾಥ ಸವಣೂರು, ಭಾಗವತರಾದ ಸುಬ್ರಾಯ ಸಂಪಾಜೆ ಹಾಗೂ ಬಾಲ ಭವನದ ಅಧ್ಯಕ್ಷ ರವೀಂದ್ರ ರೈ ಉಪಸ್ಥಿತರಿದ್ದರು. ಮಕ್ಕಳಿಗೆ ತರಬೇತಿ ನಿಡಿದ ಬಾಲಕೃಷ್ಣ ನಾಯರ್ ಮತ್ತು ಭರತನಾಟ್ಯ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಮಕ್ಕಳನ್ನು ಸನ್ಮಾನಿಸಲಾಯಿತು.

ವಿಶ್ವ ಕಲಾ ದಿನ ಆಚರಣೆ



ಮಡಿಕೇರಿ, ಏ.16– ವಿರಾಜಪೇಟೆ ಸಮೀಪದ ಮೈತ್ತಾಡಿ ಗ್ರಾಮದ ಐಚೆಟ್ಟಿರ ಐನ್ ಮನೆಯ ಅಂಗಳದಲ್ಲಿ ವಿಶ್ವ ಕಲಾ ದಿನ ಆಚರಿಸಲಾಯಿತು.

ಜಿಲ್ಲೆಯ ಖ್ಯಾತ ಚಿತ್ರಕಲಾವಿದ ಬಿ.ಆರ್ ಸತೀಶ್ ಅವರು ದೈವ ಕೋಲದ ಚಿತ್ರ ಬಿಡಿಸುವ ಮೂಲಕ ದಿನದ ಮಹತ್ವ ಸಾರಿದರು. ವಿಶ್ವ ಕಲಾ ದಿನದ ಕುರಿತು ಮಾತನಾಡಿದ ಬಿ.ಆರ್ ವಿಶ್ವದ ಶ್ರೇಷ್ಠ ಚಿತ್ರಕಲಾವಿದರಲ್ಲಿ ಒಬ್ಬರಾದ ಲಿಯೊನಾರ್ಡ್ ಡಾವಿನ್ಸಿಯ ಹುಟ್ಟು ಹಬ್ಬದ ಗೌರವಾರ್ಥವಾಗಿ ವಿಶ್ವ ಕಲಾ ದಿನವನ್ನು ಆಚರಿಸಲಾಗುತ್ತಿದೆ. ಕಲೆಯ ಪ್ರಾಮುಖ್ಯತೆ ಇಡೀ ವಿಶ್ವದ ಜನರಿಗೂ, ಎಲ್ಲಾ ವಯೋಮಾನದವರಿಗೂ, ಸರ್ವ ಜನಾಂಗದವರಿಗೂ ತಲುಪಿಸುವ ಪ್ರಯತ್ನವಾಗಿ ವಿಶ್ವ ಕಲಾ ದಿನವನ್ನು ಆಚರಿಸಲಾಗುತಿದೆ ಎಂದು ಮಾಹಿತಿ ನೀಡಿದರು. ಬಳಿಕ ತಾವು ಬಿಡಿಸಿದ ದೈವ ಕೋಲದ ಚಿತ್ರವನ್ನು ಐಚೆಟ್ಟಿರ ಕುಟುಂಬಸ್ಥರಿಗೆ ನೀಡಿ ಧನ್ಯವಾದ ಸಲ್ಲಿಸಿದರು. ಈ ಸಂದರ್ಭ ಐಚೆಟ್ಟಿರ ಕುಟುಂಬದ ಸದಸ್ಯರು ಹಾಜರಿದ್ದರು.

ನಿಯಮ ಉಲ್ಲಂಘಿಸಿ ಚಾಲನೆ: ಟಿಪ್ಪರ್, ಟ್ರಾಕ್ಟರ್ ವಿರುದ್ಧ ಪ್ರಕರಣ ದಾಖಲು



ಪೊಲೀಸರು ವಶ ಪಡಿಸಿಕೊಂಡಿರುವ ಟಿಪ್ಪರ್‌ಗಳು ಮತ್ತು ಟ್ರಾಕ್ಟರ್‌ಗಳು.

ಮಡಿಕೇರಿ, ಏ.16– ಪರವಾನಗಿ ನಿಯಮ ಉಲ್ಲಂಘಿಸಿ ಸಾರ್ವಜನಿಕರು ಮತ್ತು ಇತರ ವಾಹನ ಸವಾರರಿಗೆ ತೊಂದರೆಯಾಗುವ ರೀತಿಯಲ್ಲಿ ವಾಹನ ಚಲಾಯಿಸುತ್ತಿದ್ದ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ 9 ಟಿಪ್ಪರ್ ಲಾರಿಗಳು ಮತ್ತು 1 ಟ್ರ್ಯಾಕ್ಟರ್ ವಿರುದ್ದ ಕುಶಾಲನಗರ ಸಂಚಾರಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಕೂಡಿಗೆಯಿಂದ ಕುಶಾಲನಗರ ಮೂಲಕ ಹಾಗೂ ಮಡಿಕೇರಿ ಹಾಗೂ ಪಿರಿಯಾಪಟ್ಟಣ ಕಡೆಗೆ ಹೆದ್ದಾರಿ ರಸ್ತೆಯಲ್ಲಿ ತೆರಳುತ್ತಿದ್ದ ಟಿಪ್ಪರ್‌ಗಳು ಕ್ರಷರ್‌ಗಳಲ್ಲಿ ಮಿತಿಗಿಂತ ಅಧಿಕ ಪ್ರಮಾಣ ಜಲ್ಲಿಕಲ್ಲು, ಡಸ್ಟ್ ತುಂಬಿ ಸಾಗುವ ವೇಳೆ ರಸ್ತೆಯಲ್ಲಿ ಬೀಳುವ ಕಾರಣ ದ್ವಿಚಕ್ರ ವಾಹನಗಳಲ್ಲಿ ಇತ್ತೀಚಿಗೆ ಅಪಘಾತಗಳ ಸಂಖ್ಯೆಯು ಹೆಚ್ಚುತ್ತಿತ್ತು. ಈ ಹಿನ್ನೆಲೆಯಲ್ಲಿ ಕುಶಾಲನಗರ ಪೊಲೀಸ್ ವೃತ್ತ ನಿರೀಕ್ಷಕ ಪ್ರದೀಪ್ ಕುಮಾರ್ ಸೂಚನೆಯಂತೆ ಕುಶಾಲನಗರ ಸಂಚಾರಿ ಪೊಲೀಸ್ ಠಾಣಾಧಿಕಾರಿ ಗಣೇಶ್ ಮತ್ತು ಶ್ರೀನಿವಾಸ್ ಕುಶಾಲನಗರ ಸಂಚಾರಿ ಪೊಲೀಸ್ ಠಾಣೆ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದರು. ಎಲ್ಲಾ ವಾಹನಗಳನ್ನು ವೇ ಬಿಡ್ಜ್‌ಗೆ ಕೊಂಡೊಯ್ದು ಸರಕು ಭಾರ ಆಧರಿಸಿ ವಾಹನಗಳ ವಿರುದ್ದ ಪ್ರಕರಣ ದಾಖಲಿಸಿ ವಶಕ್ಕೆ ಪಡೆಯಲಾಯಿತು.

ಬೆಳಗ್ಗೆ ಕಾರ್ಯಾಚರಣೆಗೆ ಇಳಿದು ಹಲವಾರು ಟಿಪ್ಪರ್‌ಗಳು ಮತ್ತು ಟ್ರ್ಯಾಕ್ಟರ್‌ಗಳ ವಿರುದ್ದ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಸಂಚಾರಿ ಠಾಣಾಧಿಕಾರಿ ಶ್ರೀನಿವಾಸ್ ಹಾಗೂ ಗಣೇಶ್ ತಿಳಿಸಿದರು.

ಬ್ರಹ್ಮಕುಮಾರಿ ವಿವಿಯಿಂದ ಚಿಣ್ಣರ ಬೇಸಿಗೆ ಶಿಬಿರ ಉದ್ಘಾಟನೆ



ವಿರಾಜಪೇಟೆ, ಏ.16– ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ವಿರಾಜಪೇಟೆ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಬ್ರಹ್ಮಾಕುಮಾರೀಸ್ ಜ್ಞಾನಗಂಗಾ ಭವನದಲ್ಲಿ ನಡೆದ ಚಿಣ್ಣರ ಬೇಸಿಗೆ ಸಂಭ್ರಮವನ್ನು ಸಾಹಿತಿ ರಜಿತಾ ಕಾರ್ಯಪ್ಪ ಉದ್ಘಾಟಿಸಿ ವಿದ್ಯಾರ್ಥಿಗಳು ಸುಂದರ ಜೀವನವನ್ನು ರೂಪಿಸಿಕೊಳ್ಳಲು ಬೇಸಿಗೆ ಸಂಭ್ರಮ ಅಗತ್ಯ ಕಾರ್ಯಕ್ರಮ ಎಂದರು.

ಗೋಣಿಕೊಪ್ಪ ಕೂರ್ಗ್ ಪಬ್ಲಿಕ್ ಶಾಲೆಯ ಮುತ್ತಮ್ಮ ಅವರು ಮಾತನಾಡಿ ಪುಟ್ಟ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಭಯ ಮತ್ತು ಅದರ ನಿವಾರಣೆ ಬಗ್ಗೆ ಮಾಹಿತಿ ನೀಡಿದರು. ಸಂಸ್ಥೆಯ ಸಂಚಾಲಕರಾದ ಬಿ.ಕೆ.ಕೋಮಲ ಅವರು ಅಧ್ಯಾತ್ಮಿಕ ಜ್ಞಾನ ಮತ್ತು ಧ್ಯಾನದ ಬಗ್ಗೆ ತರಬೇತಿ ನೀಡಿದರು. ಮೈಸೂರಿನ ಕು, ಬಿ.ಕೆ.ಶಿವಾನಿ ಮತ್ತು ವಿಶಾಲಾಕ್ಷಿ, ವಿರಾಜಪೇಟೆ ಕೇಂದ್ರದ ರೂಪ ಪೂವಯ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ನಾಪೋಕ್ಲು ಹಿಂದೂ ಮಲಯಾಳಿ ಸಂಘದಿಂದ ವಿಷು ಹಬ್ಬ ಆಚರಣೆ

ನಾಪೋಕ್ಲು: ಸ್ಥಳೀಯ ಹಿಂದೂ ಮಲಯಾಳಿ ಸಂಘದ ವತಿಯಿಂದ ವಿಷು ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದೇವರ ಮೂರ್ತಿಯನ್ನು ಸಿಂಗರಿಸಿ ದೀಪ ಬೆಳಗಿ ಫಲ ಪುಷ್ಪಗಳನ್ನು ಅರ್ಪಿಸಲಾಯಿತು. ಆನಂತರ ಜನಾಂಗ ಬಾಂಧವರಿಗೆ ವಿಷು ಕಣಿ ಕೊನ್ನಪೂ ವಿತರಣೆ ಮಾಡಲಾಯಿತು. ಬಳಿಕ ಹಬ್ಬವನ್ನು ಸಾಂಪ್ರದಾಯಕವಾಗಿ ಆಚರಿಸಿ ಪರಸ್ಪರ ಶುಭಾಶಯ ಕೋರಿಕೊಂಡರು. ಸಂಘದ ಅಧ್ಯಕ್ಷ ಅನಿಲ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಧ್ಯಕ್ಷ ಕೆ.ಕೆ.ಅನಿಲ್ ಮತ್ತು ಪೊನ್ನು ಮುತ್ತಪ್ಪ ದೇವಾಲಯ ಅಧ್ಯಕ್ಷ ಚಂದ್ರ ದಿನದ ಮಹತ್ವದ ಬಗ್ಗೆ ಮಾತನಾಡಿದರು.

ಸಂಘದ ಉಪಾಧ್ಯಕ್ಷ ಅಭಿಲಾಷ್, ಮಹಿಳಾ ಘಟಕ ಅಧ್ಯಕ್ಷೆ ಸುಮಿತ್ರಾ ವಿನೋದ್, ಪೊನ್ನು ಮುತ್ತಪ್ಪ ದೇವಾಲಯ ಅಧ್ಯಕ್ಷ ಚಂದ್ರ ಇದ್ದರು.

10ನೇ ತರಗತಿ ಫಲಿತಾಂಶ: ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ ಉತ್ತಮ ಸಾಧನೆ

ರಕ್ಷಾ ಗಿರೀಶ್‌ಗೆ ಶೇ. 97.4 ಅಂಕ

ಚಾಮರಾಜನಗರ: ಚಾಮರಾಜನಗರದ



ಮಾದಾಪುರದಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯವು ಈ ಸಾಲಿನ 10ನೇ ತರಗತಿ ಫಲಿತಾಂ ಶದಲ್ಲಿ ಈ ಬಾರಿಯು ಶೇ.100 ಫಲಿತಾಂಶವನ್ನು ಪಡೆದಿದೆ.

ಶಾಲೆಯ ವಿದ್ಯಾರ್ಥಿನಿ ರಕ್ಷಾ ಗಿರೀಶ್ 487 ಅಂಕಗಳನ್ನು (ಶೇ.97.4) ಪಡೆದು ಶಾಲೆಗೆ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಜೀವಿತಾ.ಎಚ್ 477 ಅಂಕಗಳನ್ನು (ಶೇ.95.4) ಪಡೆದು ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

ಅಮೀಶ್ ಮತ್ತು ದೀಕ್ಷಿತ್ ಇಬ್ಬರೂ ತಲಾ 466 ಅಂಕಗಳನ್ನು (ಶೇ.93.2) ಪಡೆದು ಮೂರನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.


ಪರೀಕ್ಷೆ ಬರೆದ ಒಟ್ಟು 55 ವಿದ್ಯಾರ್ಥಿಗಳಲ್ಲಿ 10 ವಿದ್ಯಾರ್ಥಿಗಳು ಶೇ. 90 ಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ ಮತ್ತು ಉಳಿದ 45 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹದೇಶ್ವರಬೆಟ್ಟದ ಗ್ರಾಮಗಳಿಗೆ ಡಿಸಿ ಭೇಟಿ



ಚಾಮರಾಜನಗರ: ಜಿಲ್ಲಾಧಿಕಾರಿ ಶ್ರೀರೂಪ ಅವರು ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಗ್ರಾಮಗಳಿಗೆ ಇಂದು ಭೇಟಿ ನೀಡಿ ಸ್ಥಳೀಯರ ಅಹವಾಲುಗಳನ್ನು ಆಲಿಸಿ, ಮೂಲ ಸೌಲಭ್ಯಗಳನ್ನು ಪರಿಶೀಲಿಸಿದರು. ತೊಕ್ಕರೆ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಕುಡಿಯುವ ನೀರು ಹಾಗೂ ಇನ್ನಿತರ ಮೂಲ ಸೌಲಭ್ಯಗಳ ಕುರಿತು ಚರ್ಚಿಸಿದರು. ಅಂಗನವಾಡಿ ಕೇಂದ್ರವನ್ನು ಪರಿಶೀಲಿಸಿದರು. ದೊಡ್ಡಾಣೆ ಗ್ರಾಮದ ಶಾಲೆಯಲ್ಲಿ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿ ಕುಡಿಯುವ ನೀರು, ರಸ್ತೆ, ವಿದ್ಯುತ್, ಇನ್ನಿತರ ಮೂಲ ಸೌಕರ್ಯಗಳ ಬಗ್ಗೆ ವಿವರವಾಗಿ ಚರ್ಚಿಸಿದರು. ಆರ್.ಟಿ.ಸಿ, ಆಧಾರ್, ಇನ್ನಿತರ ಸೌಲಭ್ಯಗಳನ್ನು ಒದಗಿಸಿ ಕೊಡಲು ಸೂಚನೆ ನೀಡಿದರು. ಸ್ಥಳೀಯ ಸಮಸ್ಯೆಗಳನ್ನು ಶೀಘ್ರ ಪರಿಹರಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮಹದೇಶ್ವರಬೆಟ್ಟ ಪ್ರದೇಶದಲ್ಲಿರುವ ಅಕ್ಕ ಕೆಫೆಗೆ ಭೇಟಿ ನೀಡಿ ಎನ್.ಆರ್.ಎಲ್.ಎಂ ಯೋಜನೆಯಡಿಯಲ್ಲಿ ನಡೆದಿರುವ ಕಾಮಗಾರಿ ಪರಿಶೀಲಿಸಿದರು. ಮಲೆ ಮಹದೇಶ್ವರ ಬೆಟ್ಟದಲ್ಲಿ ಮೈರಾಡಾ ವತಿಯಿಂದ ಸ್ಥಾಪಿಸಲಾಗಿರುವ ಒಣಕಸ ಘಟಕವನ್ನು ಉದ್ಘಾಟಿಸಿ, ಎಸ್.ವಿ.ವೈ.ಎಂ ಸಂಸ್ಥೆಗಳು, ಗ್ರಾಮಸ್ಥರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಬೆಂಕಿ; ಅಪಾರ ಕಾಡು ನಾಶ



ಹನೂರು: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಲೊಕ್ಕನಹಳ್ಳಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಬಿದ್ದು ಅಪಾರ ಪ್ರಮಾಣದ ಕಾಡು ಬೆಂಕಿಗಾಹುತಿಯಾಗಿದೆ.

ಮಧ್ಯಾಹ್ನದ ವೇಳೆಗೆ ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಅಪಾರ ಪ್ರಮಾಣದ ಅರಣ್ಯ ನಾಶವಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಅರಣ್ಯಾಧಿಕಾರಿಗಳು, ಸಿಬ್ಬಂದಿ, ಬೆಂಕಿ ವಾಚರ್‌ಗಳು ತೆರಳಿ ಬೆಂಕಿಯನ್ನು ನಂದಿಸುವ ಕಾರ್ಯ ಮಾಡುತ್ತಿದ್ದಾರೆ. ಎಷ್ಟು ಎಕರೆ ನಾಶವಾಗಿದೆ ಎಂಬುದು ತಿಳಿದು ಬಂದಿಲ್ಲ.

ಕಳೆದ ಹಲವು ದಿನಗಳಿಂದಲೂ ಈ ಭಾಗದಲ್ಲಿ ನಿರಂತರವಾಗಿ ಅರಣ್ಯಕ್ಕೆ ಬೆಂಕಿ ಬಿದ್ದು ಅರಣ್ಯ ನಾಶವಾಗುತ್ತಿದೆ. ಬೈಲೂರು, ಕೊಳ್ಳೇಗಾಲ ವಲಯ ವ್ಯಾಪ್ತಿಯಲ್ಲಿ ಮೂರು ನಾಲ್ಕು ಬಾರಿ ಬಿದ್ದ ಬೆಂಕಿಯಿಂದಾಗಿ ನೂರಾರು ಎಕರೆ ಅರಣ್ಯ ಪ್ರದೇಶ ನಾಶವಾಗಿದೆ. ಅರಣ್ಯಕ್ಕೆ ಬೆಂಕಿ ಬೀಳದಂತೆ ಅರಣ್ಯದಂಚಿನ ಹಾಗೂ ಹಾಡಿಗಳಲ್ಲಿ ಅರಣ್ಯ ಇಲಾಖೆ ಸಾಕಷ್ಟು ಜಾಗೃತಿ ಮೂಡಿಸುವ ಕಾರ್ಯ ಮಾಡಿದರೂ ಕೂಡ ಅರಣ್ಯಕ್ಕೆ ಬೆಂಕಿ ಬೀಳುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಇದು ಕಾಡ್ಗಿಚ್ಚೋ ಅಥವಾ ಯಾರಾದರೂ ಕಿಡಿಗೇಡಿಗಳ ಕೃತ್ಯವೋ ಎಂಬುದನ್ನು ಇಲ್ಲಿಯ ತನಕ ಪತ್ತೆ ಹಚ್ಚಿಲ್ಲ. ಇನ್ನಾದರೂ ಸಂಬಂಧಪಟ್ಟವರು ಇದಕ್ಕೆ ಕಡಿವಾಣ ಹಾಕ ದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ಅರಣ್ಯ ನಾಶವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ಪ್ರದೇಶದ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ವಿಪರೀತವಾಗಿದ್ದು, ರೈತರು ಕಷ್ಟಪಟ್ಟು ಬೆಳೆದ ಫಸಲನ್ನು ತಿಂದು–ತುಳಿದು ನಾಶ ಮಾಡುತ್ತಿದ್ದು, ಕಾಡಾನೆ ಹಾವಳಿ ತಡೆಗೆ ಗ್ರಾಮಸ್ಥರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ.

ಈ ಹಿನ್ನೆಲೆಯಲ್ಲಿ ಕಿಡಿಗೇಡಿಗಳು ಈ ಬೆಂಕಿ ಹಚ್ಚಿ ಅರಣ್ಯ ಇಲಾಖೆ ವಿರುದ್ದ ಆಕ್ರೋಶ ವ್ಯಕ್ತಪಡಿಸುತ್ತಿರಬಹುದು ಎಂದು ಮೂಲಗಳು ಸಂಶಯ ವ್ಯಕ್ತಪಡಿಸಿವೆ.

ಅಂಬೇಡ್ಕರ್ ಜಯಂತಿ; ಕೆಸ್ತೂರಿನಲ್ಲಿ ಅನ್ನಸಂತರ್ಪಣೆ



ಕಡಲೆ ಹುಳಿ, ಪಾಯಸ, ಬೋಂದಿ, ಪಲಾವ್ ಮೊಸರು ಬಜ್ಜಿ, ಅನ್ನ ಸಾಂಬಾರ್, ಹಪ್ಪಳವನ್ನು ಊಟಕ್ಕೆ ಬಡಿಸಲಾಯಿತು.

ಯಳಂದೂರು, ಏ.16– ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿ ಪ್ರಯುಕ್ತ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಪ್ರತಿ ವರ್ಷವೂ ಅಂಬೇಡ್ಕರ್ ಜಯಂತಿಯನ್ನು ಹಬ್ಬದ ಮಾದರಿಯಲ್ಲಿ ಆಚರಿಸಿ ಎಲ್ಲರೂ ಸೇರಿ ಸಾಮೂಹಿಕವಾಗಿ ಊಟ ಮಾಡುತ್ತಾರೆ. ಬುಧವಾರ ಮುಂಜಾನೆಯಿಂದಲೆ ಅಡುಗೆ ತಯಾರಿ ಭರ್ಜರಿಯಾಗಿ ನಡೆಯಿತು ಮಧ್ಯಾಹ್ನ 1 ಕ್ಕೆ ಊಟ ಪ್ರಾರಂಭವಾಗಿ ಸಂಜೆ ನಾಲ್ಕರ ತನಕ ನಡೆಯಿತು.

ಸುಮಾರು ಮೂರು ಸಾವಿರಕ್ಕೂ ಹೆಚ್ಚು ಜನರು ಊಟ ಸವಿದರು.

ಸಂವಿಧಾನದ ಮೂಲಕ ಅಂಬೇಡ್ಕರ್ ವಿಚಾರಧಾರೆ ಅರಿಯಿರಿ



ಸಮಾರಂಭದಲ್ಲಿ ಮುಖ್ಯಮಂತ್ರಿ ಪದಕ ವಿಜೇತ ಎಸಿಪಿ ಮಹಾನಂದ, ಸಹಾಯಕ ಎಎಸ್‌ಐ ಶಿವಕುಮಾರ್ ಅವರುಗಳನ್ನು ಗೌರವಿಸಲಾಯಿತು.

ಕೊಳ್ಳೇಗಾಲ, ಏ.16– ಯುವ ಪೀಳಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ ಆಚರಣೆ ಜತೆಗೆ ಅವರ ತತ್ವ ಸಿದ್ಧಾಂತಗಳ ಅನುಸರಣೆಗೆ ಮಾಡಬೇಕು, ಸಂವಿಧಾನ ಓದುವ ಮೂಲಕ ಅಂಬೇಡ್ಕರ್ ಅವರ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ಆ ಮೂಲಕ ಅವರಿಗೆ ಗೌರವ ಸಲ್ಲಿಸುವಂತಾಗಬೇಕು, ಸಂವಿಧಾನ ಸಂರಕ್ಷಣೆ ಎಲ್ಲರ ಆದ್ಯತೆಯಾಗಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಬೆಂಗಳೂರು ರಸ್ತೆಯಲ್ಲಿರುವ ಭೀಮನಗರದ ಆದಿ ಕರ್ನಾಟಕ ಜನಾಂಗದ ನಿವೇಶನದಲ್ಲಿ ಸಂಜೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ ಭೀಮನಗರದ ಯಜಮಾನರು, ಕುಲಸ್ಥರು ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸ್ಮಾರಕ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಅತಿಥಿ ಗಣ್ಯರಿಗೆ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿ ವರ್ಷ ಅಂಬೇಡ್ಕರ್ ಜಯಂತಿಯನ್ನು ಆಚರಿಸುವ ಯುವ ಪೀಳಿಗೆ ಕೇವಲ ಕುಣಿದು ಕುಪ್ಪಳಿಸಿ ಸಂಭ್ರಮಿಸುವುದಕ್ಕೆ ಸಮಯ ಮೀಸಲಿಡದೆ, ಅಂಬೇಡ್ಕರ್ ಕುರಿತು ಸಂಪೂರ್ಣವಾಗಿ ತಿಳಿದುಕೊಳ್ಳಲು ಮುಂದಾಗಬೇಕು ಎಂದರು.

2025ನೇ ಸಾಲಿನ ಮುಖ್ಯಮಂತ್ರಿ ಪದಕ ಪುರಸ್ಕೃತರಾದ ಬೆಂಗಳೂರಿನ ಸಿಸಿಬಿ ವಿಭಾಗದ ಎಸಿಪಿ ಎಚ್.ಕೆ.ಮಹಾನಂದ ಹಾಗೂ ಮೈಸೂರು ನಗರದ ಅಶೋಕಪುರಂ ಠಾಣೆಯ ಎಎಸೈ ಎಸ್.ಶಿವಕುಮಾರ್ ಅವರನ್ನು ಶಾಸಕ ಎ.ಆರ್.ಕೆ, ಭೀಮನಗರದ ಜನತೆ ಪರವಾಗಿ ಸನ್ಮಾನಿಸಿದರು.

ಸಮಾರಂಭದಲ್ಲಿ 2024–25ನೇ ಸಾಲಿನ ಎಎಸ್‌ಎಲ್‌ಸಿ ಮತ್ತು 2025–26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ತಲಾ 24 ವಿದ್ಯಾರ್ಥಿಗಳು, ಭೀಮನಗರದಲ್ಲಿ ಶವ ಸಂಸ್ಕಾರ ಕಾರ್ಯಗಳಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿದ ಹಿರಿಯ ನಾಗರಿಕ ಎಳನಿಂಗ, ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಚೇತನ್‌ಕುಮಾರ್, ನೈರ್ಮಲ್ಯ ವಿಭಾಗದ ಮೇಲ್ವಿಚಾರಕ ರಮೇಶ್ (ಪುನೀತ್), ಪೌರ ಕಾರ್ಮಿಕರಾದ ರಂಗಸ್ವಾಮಿ, ರುದ್ರ ಅವರನ್ನು ಗೌರವಿಸಲಾಯಿತು.

ಮಾಜಿ ಶಾಸಕರುಗಳಾದ ಎಸ್.ಬಾಲರಾಜು, ಆರ್.ನರೇಂದ್ರ, ಚಾಮುಲ್ ಅಧ್ಯಕ್ಷ ಎಂ.ನಂಜುಂಡಸ್ವಾಮಿ ಇದ್ದರು

ಅನಧಿಕೃತ ಮದ್ಯ ಮಾರಾಟದ ವಿರುದ್ಧ ಕ್ರಮ ಕೈಗೊಳ್ಳಿ

ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಪಿ.ರವಿಕುಮಾರ್ ಸೂಚನೆ



ಸಭೆಯಲ್ಲಿ ಶಾಸಕ ರವಿಕುಮಾರ್ ಮಾತನಾಡಿದರು.

ಮಂಡ್ಯ, ಏ.16– ಜಿಲ್ಲೆಯಲ್ಲಿ ಮದ್ಯ ಮಾರಾಟ ಅಂಗಡಿಗಳು ಹೆಚ್ಚುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಅನಧಿಕೃತ ಮದ್ಯ ಮಾರಾಟ ಅಂಗಡಿಗಳ ಮೇಲೆ ಅಧಿಕಾರಿಗಳು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಪಿ.ರವಿಕುಮಾರ್ ಸೂಚಿಸಿದರು.

ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ (ಕೆಡಿಪಿ)ಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಔಷಧಿಗಳ ಕೊರತೆಯಾಗದಂತೆ ಔಷಧಿಗಳ ವ್ಯವಸ್ಥೆ ಮಾಡಬೇಕು. ತಾಲೂಕಿನ ಬಸರಾಳು ಸರ್ಕಾರಿ ಆಸ್ಪತ್ರೆಗೆ ವೈದ್ಯರನ್ನು ನೇಮಿಸಿ ರಾತ್ರಿ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದ ಅವರು ರೋಗಿಗಳ ಅನುಕೂಲಕ್ಕಾಗಿ ಆಂಬುಲೆನ್ಸ್ ಕಲ್ಪಿಸುವುದಾಗಿ ತಿಳಿಸಿದರು.

ಪ್ರಸ್ತುತ ಅತೀ ಹೆಚ್ಚು ಬಿಸಿಲು ಇರುವುದರಿಂದ ಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜಿಸಿ ಮಕ್ಕಳನ್ನು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುವಂತೆ ಕಾರ್ಯಕ್ರಮ ಆಯೋಜಿಸಬೇಕು. ಅಲ್ಲದೇ ಸರ್ಕಾರಿ ಶಾಲಾ– ಕಾಲೇಜುಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಕಾರ್ಯಕ್ರಮ ರೂಪಿಸಬೇಕು ಎಂದರು.

ವಿದ್ಯಾ ವಿಕಾಸ ಯೋಜನೆಯಡಿ ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ವಿತರಿಸಬೇಕು. ತಾಪಂ ವ್ಯಾಪ್ತಿಯ ಸರ್ಕಾರಿ ಶಾಲೆಗಳ ದಾಖಲೆಗಳನ್ನು ಪರಿಶೀಲಿಸಿ ಶಾಲೆಗಳ ಖಾತೆ ಮಾಡಿಸುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಕೃಷಿ ಇಲಾಖೆ ಅಧಿಕಾರಿಗಳು ಜಿಲ್ಲೆಯ ರೈತರಿಗೆ ರಸಗೊಬ್ಬರದ ಕೊರತೆ ಉಂಟಾಗದಂತೆ ಅಗತ್ಯ ಕ್ರಮ ವಹಿಸಬೇಕು. ಬಿತ್ತನೆ ಬೀಜ ವ್ಯವಸ್ಥೆ ಮಾಡಬೇಕು. ಕೃಷಿ ಇಲಾಖೆ ಯಿಂದ ಸಿಗುವ ಯೋಜನೆಗಳ ಮಾಹಿತಿಯನ್ನು ರೈತರಿಗೆ ತಿಳಿಸುವ ನಿಟ್ಟಿನಲ್ಲಿ ಕಾರ್ಯ ಕ್ರಮ ಆಯೋಜಿಸಿ ಪ್ರಚಾರ ಮಾಡಬೇಕು. ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಸರ್ಕಾರದ ಯೋಜನೆಯಡಿ ಜಾನುವಾರುಗಳು ಮರಣ ಹೊಂದಿದ ನಂತರ ಜಾನುವಾರುಗಳ ಮರಣ ದಾಖಲಾತಿ ಪರಿಶೀಲಿಸಿ ಸಹಾಯಧನ ನೀಡುವ ಬಗ್ಗೆ ಜನರಿಗೆ ಮಾಹಿತಿ ಹಾಗೂ ಜಾಗೃತಿ ಮೂಡಿಸಬೇಕು ಎಂದರು.

ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಗರ್ಭಿಣಿಯರು, ಬಾಣಂತಿಯರು ಮತ್ತು ಅಂಗನವಾಡಿ ಮಕ್ಕಳಿಗೆ ಉತ್ತಮ ಹಾಗೂ ಗುಣಮಟ್ಟ ಆಹಾರ ನೀಡಬೇಕು. ಬಾಣಂತಿಯರಿಗೆ ಮನೆ ಮನೆಗೆ ಆಹಾರ ಪದಾರ್ಥಗಳು ತಲುಪುವಂತೆ ಕ್ರಮವಹಿಸಬೇಕು. ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಕುರಿತು ಪ್ರತಿ ತಿಂಗಳು ಸಭೆ ನಡೆಸಿ ಯೋಜನೆಗಳ ನ್ಯೂನ್ಯತೆಗಳನ್ನು ಅಧಿಕಾರಿಗಳ ಗಮನಕ್ಕೆ ತರಬೇಕು. ಶಾಲಾ–ಕಾಲೇಜು ಮಕ್ಕಳಿಗೆ ತೊಂದರೆಯಾಗದಂತೆ ಬೆಳಗ್ಗೆ ಹಾಗೂ ಸಂಜೆ ರೂಟ್ ಬಸ್‌ಗಳನ್ನು ಹೆಚ್ಚುವರಿಯಾಗಿ ಬಿಡುವಂತೆ ತಿಳಿಸಿದರು.

ಬೇಸಿಗೆ ವೇಳೆ ವಿದ್ಯುತ್ ಕಡಿತಗೊಳಿಸದಂತೆ ವಿದ್ಯುತ್ ಕಾಮಗಾರಿಯನ್ನು ಕಡಿಮೆ ಸಮಯದಲ್ಲಿ ಕಾರ್ಯಗತಗೊಳಿಸುವಂತೆ ಕ್ರಮ ವಹಿಸಿ ಹಾಗೂ ರೈತರ ಜಮೀನಿಗೆ ವಿದ್ಯುತ್ ಕೊರತೆಯಾಗದಂತೆ ಅಧಿಕಾರಿಗಳು ಗಮನ ಹರಿಸಿ ಎಂದರು.

ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮವಹಿಸಬೇಕು. ಸಮಾಜ ಕಲ್ಯಾಣ ಇಲಾಖೆಯಡಿ ವಿದ್ಯಾರ್ಥಿ ನಿಲಯಗಳಿಗೆ ಉತ್ತಮ ಹಾಗೂ ಗುಣಮಟ್ಟ ಆಹಾರ ಹಾಗೂ ಸುಚಿತ್ವವಾದ ವಾತಾವರಣ ಕಾಪಾಡಿಕೊಳ್ಳುವಂತೆ ಕ್ರಮ ವಹಿಸಿ ಮತ್ತು ಅಧಿಕಾರಿಗಳು ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಶೀಲಿಸಬೇಕು ಎಂದರು.

ಸಭೆಯಲ್ಲಿ ಮುಡಾ ಅಧ್ಯಕ್ಷ ಬಿ.ಪಿ. ಪ್ರಕಾಶ್, ಜಿಪಂ ಉಪ ಕಾರ್ಯದರ್ಶಿ ಡಾ.ಶಿವಲಿಂಗಯ್ಯ, ತಹಸೀಲ್ದಾರ್ ವಿಶ್ವನಾಥ್, ತಾಪಂ ಇಒ ಲೋಕೇಶ್ ಮೂರ್ತಿ, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಸದಸ್ಯ ಹೆಚ್.ಕೆ.ರುದ್ರಪ್ಪ ಹಾಗೂ ತಾಲೂಕು ಅಧಿಕಾರಿಗಳು ಉಪಸ್ಥಿತರಿದ್ದರು.

ಕೃಷ್ಣಮೂರ್ತಿ ನಿಧನ

ಕೆ.ಆರ್.ಪೇಟೆ, ಏ.16– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿ ವಡ್ಡರಗುಡಿ ಗ್ರಾಮದ



ಹಿರಿಯ ಮುಖಂಡರು ಹಾಗೂ ತಾಲೂಕು ಕುಂಚ ಕಲಾವಿದರ ಸಂಘದ ಗೌರವ ಸಲಹೆಗಾರ ಕೃಅಷ್ಣಮೂರ್ತಿ(73) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಏ.17ರಂದು ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ್ಯಾಯಾಧೀಶೆ ಎ.ಎನ್.ಕಾಂತಮ್ಮ



ಮಂಡ್ಯ, ಏ.16– ಜಿಲ್ಲೆಯ ಮಳವಳ್ಳಿ ತಾಲೂಕಿನ ಅಂಚೆದೊಡ್ಡಿ ಗ್ರಾಮದ ನಿವಾಸಿ, ಮಧುಗಿರಿ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶೆ ಎ.ಎನ್. ಕಾಂತಮ್ಮ(43) ಗುರುವಾರ ನಿಧನರಾದರು. ಇವರು ಮಧುಗಿರಿಯಲ್ಲಿ 2025ರ ಜೂನ್‌ನಿಂದ ನ್ಯಾಯಧೀಶೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವಿವಾಹಿತರಾಗಿದ್ದ ಇವರು ಗುರುವಾರ ಬೆಳಗ್ಗೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಚಿನಕುರಳಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ



ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ಸನ್ಮಾನಿಸಲಾಯಿತು.

ಚಿನಕುರಳಿ, ಏ.16– ಡಾ.ಬಿ.ಆರ್.ಅಂಬೇಡ್ಕರ್ ಗೆಳೆಯರ ಬಳಗದಿಂದ ಚಿನಕುರಳಿ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಪ್ರಸ್ತುತ ವಾತಾವರಣ ಕಲುಷಿತಗೊಂಡಿದೆ. ಅಂಬೇಡ್ಕರ್ ಅವರು ಸಂವಿಧಾನ ಬರೆಯದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂಬುದು ಗೊತ್ತಿಲ್ಲ. ಕಾನೂನು ಬಿಗಿಯಾಗಿದ್ದರೂ ಹಲವು ಕಹಿ ಘಟನೆಗಳನ್ನು ನೋಡಿದ್ದೇವೆ. ತಪ್ಪು ಮಾಡಿದವರಿಗೆ ಶಿಕ್ಷೆ ಇದ್ದರೂ ದೌರ್ಜನ್ಯ, ದಬ್ಬಾಳಿಕೆ ಹೆಚ್ಚಾಗುತ್ತಿದೆ. ಸಂವಿಧಾನ ಇರದಿದ್ದರೆ ದೇಶ ಯಾವ ಮಟ್ಟಕ್ಕೆ ಹೋಗುತ್ತಿತ್ತೋ ಗೊತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಈ ವೇಳೆ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಮತ್ತು ಪೆನ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷೆ ಧನಲಕ್ಷ್ಮಿ ವಸಂತರಾಜು, ಮಾಜಿ ಉಪಾಧ್ಯಕ್ಷ ನಾಗರಾಜು, ಮಾಜಿ ಸದಸ್ಯರಾದ ಸತೀಶ್, ಚಿನಕುರಳಿ ಲೋಕೇಶ್, ಮುಖಂಡ ಪೊಲೀಸ್ ಶಿವಣ್ಣ, ಯೋಗೇಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಸಿಬಿಎಸ್‌ಇ 10ನೇ ತರಗತಿ ಫಲಿತಾಂಶ ಪ್ರಕಟ

ಸಿಎಸ್‌ಪಿ ಒಡೆತನದ ಎಸ್‌ಟಿಜಿಗೆ ಶೇ.100ರಷ್ಟು ಫಲಿತಾಂಶ



ಶಶಾಂಕ್ | ದಕ್ಷ | ಗಾನವಿ | ಪೃಥ್ವಿರಾಮ್

ಚಿನಕುರಳಿ, ಏ.16– ಸಿಬಿಎಸ್‌ಇ 10ನೇ ತರಗತಿ ಫಲಿತಾಂಶ ಪ್ರಕಟಗೊಂಡಿದ್ದು, ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಒಡೆತನದ ಎಸ್‌ಟಿಜಿ ಶಾಲೆಗೆ ಶೇ.100ರಷ್ಟು ಫಲಿತಾಂಶ ಬಂದಿದೆ.

ಸಿಬಿಎಸ್‌ಇ ಪರೀಕ್ಷೆಗೆ ಹಾಜರಾಗಿದ್ದ ಎಸ್‌ಟಿಜಿ ಶಾಲೆಯ 101 ವಿದ್ಯಾರ್ಥಿಗಳು ಸಹ ಉತ್ತೀರ್ಣರಾಗುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ. ಈ ಪೈಕಿ 35 ಉನ್ನತ ಶ್ರೇಣಿ ಹಾಗೂ 54 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಲೆಯ ಶಶಾಂಕ್ ಹೆಚ್.ಎನ್. (ಶೇ.96.4%), ದಕ್ಷ.ಕೆ (93%), ಗಾನವಿ.ವಿ (92.6%), ಪೃಥ್ವಿರಾಮ್.ಸಿ.ಆರ್ (92.6%), ಸೋಹಾನ್ ದಕ್ಷ ಪಿ (91.8%), ಜಶ್ವನ್ ಡಿ.ಸಿ.ಗೌಡ (90.4%), ಮಹಿತ.ಪಿ (89.6%), ಐಶ್ವರ್ಯ ಎಂ.ಎಲ್ (89.6%), ಮಹಾಲಕ್ಷ್ಮಿ ಎಂ (89.2%), ಸಾಯಿಸ್ಮೃತಿ.ವೈ (89.2%) ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಸಿಬಿಎಸ್‌ಇ ಪರೀಕ್ಷೆಯಲ್ಲಿ ಶಾಲೆಗೆ ಶೇ.100ರಷ್ಟು ಫಲಿತಾಂಶ ತಂದುಕೊಟ್ಟ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಂಶುಪಾಲರು, ಶಿಕ್ಷಕ ವೃಂದದವರನ್ನು ಸಂಸ್ಥೆ ಅಧ್ಯಕ್ಷರು ಹಾಗೂ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಹಾಗೂ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು ಅಭಿನಂದಿಸಿದ್ದಾರೆ.

■ ಸತ್ಯಮೂರ್ತಿ ತೋಳಹುಣಸೆ

ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ


ಅದಿತಿ



ಕನ್ನಡ ಚಿತ್ರರಂಗ ಈಗಾಗಲೇ ಹಲವು ಪ್ರಥಮಗಳಿಗೆ ಸಾಕ್ಷಿಯಾಗಿದೆ. ದುನಿಯಾ ವಿಜಯ್ ಅಭಿನಯದ 'ದಕ್ಷ' ಒಂದೇ ಟೇಕ್, ಒಂದೇ ಶಾಟ್‌ನಲ್ಲಿ ತಯಾರಾಗಿತ್ತು. ಈಗ ಬಿಡುಗಡೆಗೆ ಸಿದ್ದವಾಗಿರುವ 'ಅದಿತಿ' ಚಿತ್ರದಲ್ಲಿ ಕೇವಲ ಐದು ಶಾಟ್‌ಗಳಿವೆ. ಅಂದರೆ ಇಡೀ ಚಿತ್ರವನ್ನು ನಿರ್ದೇಶಕರು ಐದೇ ದೃಶ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ 'ಅದಿತಿ' ಚಿತ್ರವನ್ನು ಮಿಲೇನಿಯಮ್ ಆಡ್ ಮೀಡಿಯಾ ಬ್ಯಾನರ್ ಅಡಿಯಲ್ಲಿ ವ್ಯಾಲೆರಿನಾ ಮರಿಯ ರೋಜರ್ಸ್ ಮತ್ತು ನೆಲ್ಸನ್ ರೋಜರ್ಸ್ ಅವರು ನಿರ್ಮಿಸಿದ್ದಾರೆ. 'ಲಿಬರ್ಟಿ' ಎಂಬ ಅಡಿಬರಹ ಇರುವ ಈ ಚಿತ್ರಕ್ಕೆ ನೆಲ್ಸನ್ ರೋಜರ್ಸ್ ಅವರೇ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. 'ಅದಿತಿ' ಚಿತ್ರದ ಮುಖ್ಯ ಪಾತ್ರಗಳಲ್ಲಿ ಇಶಾನಾ ಸಣ್ಣಪ್ಪನವರ, ಹರ್ಷಿತಾ ಕಲ್ಲಿಂಗಲ್, ಆರತಿ, ನಿಸರ್ಗ ಮಂಜುನಾಥ್, ಯಶಾ, ಡ್ಯಾನಿ ಕುಟ್ಟಪ್ಪ ಸುನಿಲ್, ಅಜಿತ್ ಕುಮಾರ್, ಗೋಪಿ ಹಾಗೂ ಇತರರು ನಟಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, 'ಅದಿತಿ' ಒಂದು ಮಹಿಳಾಪ್ರಧಾನ ಸೈಕಲಾಜಿಕಲ್ ಥ್ರಿಲ್ಲರ್ ಚಿತ್ರ. ಅದಿತಿ ಎಂಬ ಯುವತಿಯ ಸುತ್ತ ನಡೆಯುವ ಘಟನೆಗಳೇ ಚಿತ್ರದ ಮುಖ್ಯ ಕಥಾವಸ್ತು ಈ ಚಿತ್ರದ ಇನ್ನೊಂದು ವಿಶೇಷತೆಯೆಂದರೆ, ಎಲ್ಲಾ ಭಾಷೆಯ ಚಿತ್ರಗಳಿಗೆ ಮಹಿಳೆಯರೇ ಸಂಭಾಷಣೆ ಬರೆದಿರುವುದು. 'ಕನ್ನಡದಲ್ಲಿ ಕುಮುದಹಳ್ಳಿ ಅರುಣ್ ಮೂರ್ತಿ ಪಂಚಿಂಗ್ ಡೈಲಾಗ್ ಬರೆದಿದ್ದಾರೆ ಎಂದರು. 'ಅದಿತಿ' ಚಿತ್ರಕ್ಕೆ ರಮೇಶ್ ಕೃಷ್ಣ ಮತ್ತು ಕೃಷ್ಣ ಪ್ರಿಯದರ್ಶನ್ ಸಂಗೀತ ಸಂಯೋಜಿಸಿದ್ದಾರೆ, ಬೆಂಗಳೂರು, ಕನಕಪುರದ ಸುತ್ತಮುತ್ತಲ ತಾಣಗಳಲ್ಲಿ 'ಅದಿತಿ'ಗೆ ಚಿತ್ರೀಕರಣ ನಡೆಸಲಾಗಿದೆ. ಸದ್ಯದಲ್ಲೆ ಚಿತ್ರದ ಸೆನ್ಸಾರ್ ಪ್ರಕ್ರಿಯೆ ಮುಗಿಸಿ, ಜೂನ್ ತಿಂಗಳಲ್ಲಿ ರಿಲೀಸ್ ಮಾಡುವ ಯೋಜನೆ ಚಿತ್ರತಂಡಕ್ಕಿದೆ.





ತಂದೆ ಮಗನ ಬಾಂಧವ್ಯದ 'ಫಾದರ್' ಸದ್ಯದಲ್ಲೇ ತೆರೆಗೆ

ಫಾದರ್ ಅಂದಾಕ್ಷಣ, ಪ್ರತಿಯೊಬ್ಬರಿಗೂ ನೆನಪಾಗೋದೇ ಅಪ್ಪ, ಬಾಲ್ಯದ ನೆನಪು. ತನ್ನ ಜೀವ ಸವೆಸಿ ಮಕ್ಕಳ ಬದುಕನ್ನು ರೂಪಿಸುವ ತ್ಯಾಗಮಯಿ ಅಪ್ಪ. ಅಂತಹ ತಂದೆಯ ಭಾವನಾತ್ಮಕ ಕಥೆಯನ್ನು ನಿರ್ಮಾಪಕ ಆರ್. ಚಂದ್ರು ಇದೇ ಶ್ರಾವಣದಲ್ಲಿ ತೆರೆಗೆ ತರುತ್ತಿದ್ದಾರೆ.

ತಂದೆ ಮಗನ ಸಂಬಂಧದ ಸುತ್ತ ನಡೆಯುವ ಅಪರೂಪದ ಕಥಾಹಂದರ ಈ ಚಿತ್ರದಲ್ಲಿದೆ. ಆರ್.ಸಿ.ಸ್ಟುಡಿಯೋಸ್ ನಿರ್ಮಾಣದ ಈ ಚಿತ್ರದಲ್ಲಿ ಪ್ರಕಾಶ್‌ರಾಜ್ ಹಾಗೂ ಡಾರ್ಲಿಂಗ್ ಕೃಷ್ಣ ತಂದೆ ಮಗನಾಗಿ ಕಾಣಿಸಿಕೊಂಡಿದ್ದಾರೆ.

ಲವ್ ಮಾಕ್ಟೇಲ್ -3ನಂತಹ ಯಶಸ್ವೀ ಚಿತ್ರ ನಿರ್ದೇಶಿಸಿದ ಡಾರ್ಲಿಂಗ್ ಕೃಷ್ಣ , ಅಮೃತಾ ಅಯ್ಯಂಗಾರ್ 'ಫಾದರ್' ಚಿತ್ರದ ನಾಯಕ, ನಾಯಕಿಯಾಗಿ ನಟಿಸಿದ್ದಾರೆ

"ಫಾದರ್" ಅಂದರೆ ಒಂದು ಶಕ್ತಿ. ಎಂಥದೇ ಪಾತ್ರ ಕೊಟ್ಟರೂ ಲೀಲಾಜಾಲವಾಗಿ ನಟಿಸುವ ಮೂಲಕ ಅದಕ್ಕೆ ಜೀವಕಳೆ ತುಂಬುವ ಪ್ರಕಾಶ್ ರಾಜ್ ಇಲ್ಲಿ ಒಬ್ಬ ತಂದೆಯಾಗಿ ಭಾವನಾತ್ಮಕವಾಗಿ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಲಿದ್ದಾರೆ ಎಂದು ಆರ್. ಚಂದ್ರು ಹೇಳಿದ್ದಾರೆ.

ಅಲಂಕಾರ್ ಪಾಂಡ್ಯನ್ ಅವರ ಸಹಯೋಗದಲ್ಲಿ ಆರ್.ಸಿ.ಸ್ಟುಡಿಯೋಸ್ ನಿರ್ಮಿಸಿರುವ ಈ ಚಿತ್ರಕ್ಕೆ ರಾಜ್ ಮೋಹನ್ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಸುಜ್ಞಾನ್ ಅವರ ಛಾಯಾಗ್ರಹಣ, ನಕುಲ್ ಅಭಯಂಕರ್ ಅವರ ಸಂಗೀತ ಸಂಯೋಜನೆ "ಫಾದರ್" ಚಿತ್ರಕ್ಕಿದೆ.

ದಿಗಂತ್‌ಗೆ ಒದಗಿದ 'ರುದ್ರ ಕಾಲ'



ವಿಭಿನ್ನ ಪಾತ್ರಗಳ ಮೂಲಕ ಜನಮನ ಸೂರೆಗೊಂಡಿರುವ ನಟ ದಿಗಂತ್ ಬಹಳ ದಿನಗಳ ನಂತರ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಆ ಚಿತ್ರದ ಹೆಸರು 'ರುದ್ರ ಕಾಲ'.

ಇತ್ತೀಚೆಗೆ ಈ ಚಿತ್ರದ ಶೀರ್ಷಿಕೆಯನ್ನು ಸ್ಟಾರ್ ಹಿರೋಯಿನ್ ಸಮಂತಾ ಬಿಡುಗಡೆ ಮಾಡಿ, ಚಿತ್ರ ಯಶಸ್ವಿಯಾಗಲೆಂದು ಹಾರೈಸಿದ್ದಾರೆ. ರಮೇಶ್ ನಾಯ್ಕ್ ಅವರು ನಿರ್ಮಾಣ ಮಾಡುತ್ತಿರುವ ಈ ಚಿತ್ರವನ್ನು ಗೋಪಿ ಅವರು ನಿರ್ದೇಶಿಸುತ್ತಿದ್ದಾರೆ. ಶೀರ್ಷಿಕೆಯಲ್ಲೇ ಕುತೂಹಲ ಮೂಡಿಸಿರುವ ಈ ಚಿತ್ರದ ಮುಹೂರ್ತ ಸಮಾರಂಭ ಇದೇ ತಿಂಗಳ 22 ರಂದು ನೆರವೇರಲಿದೆ.

ನಮ್ಮ ಡೈರೆಕ್ಟರ್ ಗೋಪಿ ಅವರು ಕಥೆ ಹೇಳುತ್ತಿದ್ದಾಗಲೇ ಈ ಚಿತ್ರದಲ್ಲಿ ನಟಿಸಬೇಕೆಂದು ನಾನು ನಿರ್ಧಾರ ಮಾಡಿದೆ. ಹಾಗೆಯೇ ನಮ್ಮ 'ರುದ್ರ ಕಾಲ' ಚಿತ್ರದ ಟೈಟಲ್ ಸಮಂತಾ ಅವರ ಕೈಯಿಂದ ರಿಲೀಸ್ ಆಗಿರುವುದು ತುಂಬಾ ಸಂತೋಷವಾಗಿದೆ. ಚಿತ್ರ ಎಲ್ಲರಿಗೂ ಮೆಚ್ಚುಗೆಯಾಗುತ್ತೆ ಎಂದು ತಿಳಿಸಿರುವ ನಾಯಕ ದಿಗಂತ್, ನಿರ್ದೇಶಕ ಗೋಪಿ, ನಿರ್ಮಾಪಕ ರಮೇಶ್ ನಾಯ್ಕ್ ಮತ್ತು ಇಡೀ ಚಿತ್ರತಂಡಕ್ಕೆ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದ್ದಾರೆ.

ನಮ್ಮ ಚಿತ್ರದ ಶೀರ್ಷಿಕೆ ಅನಾವರಣ ಮಾಡಿಕೊಟ್ಟ ಸಮಂತಾ ಅವರಿಗೆ ಧನ್ಯವಾದ. ಇದು ನಮ್ಮ ಚಿತ್ರದ ಶುಭಾರಂಭ ಎಂದು ಭಾವಿಸುತ್ತೇನೆ. 'ರುದ್ರ ಕಾಲ' ಚಿತ್ರದ ಚಿತ್ರೀಕರಣ ಕನ್ನಡ ಹಾಗೂ ತೆಲುಗು ಎರಡು ಭಾಷೆಗಳಲ್ಲಿ ಏಕಕಾಲಕ್ಕೆ ನಡೆಯಲಿದೆ. ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಿ ಆದಷ್ಟು ಬೇಗನೇ ಚಿತ್ರವನ್ನು ತೆರೆಗೆ ತರುವ ಯೋಚನೆ ಇದೆ. ಇದು ನನ್ನ ನಿರ್ದೇಶನದ ನಾಲ್ಕನೇ ಚಿತ್ರ. ಕಥೆ ಕೇಳಿ ಮೆಚ್ಚಿ ನಾಯಕನಾಗಿ ನಟಿಸುತ್ತಿರುವ ದಿಗಂತ್ ಹಾಗೂ ನಿರ್ಮಾಣ ಮಾಡುತ್ತಿರುವ ರಮೇಶ್ ನಾಯ್ಕ್ ಅವರಿಗೆ ನನ್ನ ಧನ್ಯವಾದ ಎನ್ನುತ್ತಾರೆ ಚಿತ್ರದ ನಿರ್ದೇಶಕರಾದ ಗೋಪಿ.

ನಿರ್ಮಾಪಕ ರಮೇಶ್‌ನಾಯ್ಕ್ ಚಿತ್ರದ ಬಗ್ಗೆ ಮಾತನಾಡುತ್ತಾ, ಡೈರೆಕ್ಟರ್ ಗೋಪಿ ಹೇಳಿದ ಕಾನ್ಸೆಪ್ಟ್ ನನಗೆ ತುಂಬಾ ಫ್ರೆಶ್ ಆಗಿದೆ ಅನಿಸಿತು. ನಮ್ಮ ಪ್ರೊಡಕ್ಷನ್‌ನಲ್ಲಿ ಇಂಥ ಚಿತ್ರ ಮೂಡಿ ಬರುತ್ತಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಟೈಟಲ್ ರಿಲೀಸ್ ಮಾಡಿದ ನಟಿ ಸಮಂತ ಹಾಗೂ ನಾಯಕ ದಿಗಂತ್ ಅವರಿಗೆ ಧನ್ಯವಾದ ಎಂದರು.

ರಮೇಶ್ ಅವರು ಕಥೆ ಬರೆದಿರುವ ಈ ಚಿತ್ರಕ್ಕೆ ಕ್ರಿಸ್ಟೋಫರ್ ಜೋಸೆಫ್ ಅವರು ಛಾಯಾಗ್ರಹಣ ಮಾಡುತ್ತಿದ್ದಾರೆ. ಚಿತ್ರದ ಲೈನ್ ಪ್ರೊಡ್ಯೂಸರ್ ಆಗಿ ನವೀನ್ ಹಾಗೂ ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಆಗಿ ಶಿವರಾಜ್ ಕಾರ್ಯ ನಿರ್ವಹಿಸುತ್ತಿದ್ದಾರೆ. ರಮೇಶ್ ಕೆ. ಪೂಜಾರಿ ಈ ಚಿತ್ರದ ಸಹ ನಿರ್ದೇಶಕರು.

'ಜಿನುಗೋ ಮಳೆ' ರೊಮ್ಯಾಂಟಿಕ್ ಹಾಡು ಬಿಡುಗಡೆ....




ಯೂನಿಕಾರ್ನ್ ಎಂಟರ್ ಟೈನ್ ಮೆಂಟ್ ಬ್ಯಾನರ್ ಮೂಲಕ ದೀಪ್ತಿ ಆಕಾಶ್ ನಿರ್ಮಿಸಿರುವ, ಬಿಗ್ ಬಾಸ್ ಖ್ಯಾತಿಯ ಧನುಷ್‌ಗೌಡ ಹಾಗೂ ಸ್ಪಂದನಾ ಸೋಮಣ್ಣ ಅಭಿನಯದ 'ಜಿನುಗೋ ಮಳೆ' ಎಂಬ ಆಲ್ಬಂ ಸಾಂಗ್ ಇತ್ತೀಚಿಗೆ ಬಿಡುಗಡೆಯಾಯಿತು.

ಈ ಸಂದರ್ಭದಲ್ಲಿ ನಟ ಧನುಷ್‌ಗೌಡ ಮಾತನಾಡುತ್ತ ಪಿ.ಆರ್.ಕೆ. ಸಂಸ್ಥೆಯಲ್ಲಿ ಕೆಲಸ ಮಾಡಬೇಕೆಂದು ನನಗೆ ಬಹಳ ದಿನಗಳಿಂದ ಆಸೆ ಇತ್ತು. ಅದು ಈ ಆಲ್ಬಂ ಹಾಡಿನ ಮೂಲಕ ನೆರವೇರಿದೆ. ಮೂಡಿಗೆರೆಯಲ್ಲಿ 3 ದಿನಗಳ ಕಾಲ ಈ ಹಾಡನ್ನು ಶೂಟ್ ಮಾಡಿದ್ದೇವೆ. ಶೂಟಿಂಗ್ ಟೈಮಲ್ಲಿ ಎಲ್ಲರೂ ಫ್ಯಾಮಿಲಿ ಥರ ಸೇರಿ ಕೆಲಸ ಮಾಡಿದ್ದೇವೆ. ಇದೊಂದು ರೊಮ್ಯಾಂಟಿಕ್ ಸಾಂಗ್ ಆಗಿದ್ದು, ತುಂಬಾ ಚೆನ್ನಾಗಿ ಬಂದಿದೆ ಎಂದರು.

ನಂತರ ನಾಯಕಿ ಸ್ಪಂದನಾ ಸೋಮಣ್ಣ ಮಾತನಾಡುತ್ತ 'ಜಿನುಗೋ ಮಳೆ' ಒಂದು ರೊಮ್ಯಾಂಟಿಕ್ ಸಾಂಗ್. ನಾನು ಹಾಗೂ ಧನುಷ್ ಗೌಡ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದೇವೆ. ಆಕಾಶ್ ಅವರು ಈ ಹಾಡಿನ ನಿರ್ದೇಶನದ ಜತೆಗೆ ನಿರ್ಮಾಣ ಸಹ ಮಾಡಿದ್ದಾರೆ. ಅವರು ಉಪೇಂದ್ರ ಜತೆ ಕೆಲಸ ಮಾಡಿದಂಥವರು. ಒಂದೊಳ್ಳೆ ಆಡಿಯೋ ಲೇಬಲ್ ನಲ್ಲಿ ನಮ್ಮ ಹಾಡು ರಿಲೀಸಾಗಿದೆ. ನನ್ನ ಸಹೋದರ ಅವಿನಾಶ್ ಈ ಹಾಡಿಗೆ ರಾಗಸಂಯೋಜನೆ ಮಾಡಿದ್ದಾರೆ. ಸಿನಿಮಾ ಕ್ವಾಲಿಟಿಯಲ್ಲಿ ಈ ಹಾಡನ್ನು ಮಾಡಿದ್ದೇವೆ ಎಂದರು.

ನಿರ್ದೇಶಕ ಹಾಗೂ ನಿರ್ಮಾಪಕ ಆಕಾಶ್ ಮಾತನಾಡುತ್ತ ಆರಂಭದಲ್ಲಿ ಇದೇ ಕಾನ್ಸೆಪ್ಟ್ ಇಟ್ಟುಕೊಂಡು ಶಾರ್ಟ್ ಫಿಲಂ ಮಾಡಬೇಕು ಎಂದುಕೊಂಡಿದ್ದೆ. ಇದಕ್ಕೆ ನಾಗಾರ್ಜುನ ಶರ್ಮಾ ಅವರಿಂದಲೇ ಲಿರಿಕ್ ಬರೆಸಬೇಕು ಎಂದುಕೊಂಡಿದ್ದೆ ಅವರು ಬ್ಯುಸಿ ಇದ್ದರೂ ಒಳ್ಳೆ ಲೈನ್ ಇಟ್ಟುಕೊಂಡು ಹಾಡು ರಚಿಸಿದ್ದಾರೆ. ಈ ಹಾಡಿನ ಪ್ರತಿಯೊಂದು ಸಾಲಿನಲ್ಲೂ ಅರ್ಥವಿದೆ. ನಮ್ಮ ತಂಡದ ಪ್ರತಿಯೊಬ್ಬರೂ ಶ್ರದ್ದೆಯಿಂದ ಕೆಲಸ ಮಾಡಿದ್ದಾರೆ ಎಂದರು.

ಸಿನಿಪದಬಂಧ-622



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.	ವಿಷ್ಣುವರ್ಧನ್ – ರೂಪಿಣಿ ಪ್ರೀತಿಯ ಆಶ್ರಯ ಪಡೆದಿದ್ದಾರೆ	7
4.	ಇಲ್ಲಿ ತಿರುಗಿರುವ ನಟಿಗೆ ಮತ್ತೇರಿದೆ	3
8.	ಶ್ರುತಿ ಸೇರಿದಾಗ ಚಿತ್ರದ ಹಾಡೊಂದರ ಆರಂಭವಿದು	7
9.	ಪ್ರಜ್ವಲ್ ದೇವರಾಜ್ ಅಭಿನಯದಲ್ಲಿ ಬಂದ 'ಮಿತ್ರ'	3
11.	ಸ್ಟೈಲ್ ಕಿಂಗ್ ನೆನಪಿಸಿಕೊಂಡರೆ ದುನಿಯಾ ವಿಜಯ್ ಚಿತ್ರ ಪ್ರತ್ಯಕ್ಷ !	5
13.	ಸುರನೊಂದಿಗೆ ನರನೂ ಇದ್ದಾನೆ	5
16.	ಉದಯ್ ಕುಮಾರ್ ಡಿಗ್ರಿ ಪಡೆಯಲು ಸಿ. ವಿ. ಶಿವಶಂಕರ್ ನಿರ್ದೇಶಕರು	5
17.	ಟೈಗರ್ ಪ್ರಭಾಕರ್ ಯುದ್ಧ ಕೇಸರಿ	5
18.	ಹುಳಿಯಾದ 'ಕರಿಯ'	2
19.	ಶಿವಣ್ಣ, ವಿಜಯ ರಾಘವೇಂದ್ರ, ರಾಧಿಕಾ ಅಭಿನಯದ ಚಿತ್ರ	2

ಮೇಲಿನಿಂದ ಕೆಳಕ್ಕೆ

1.	ಡಾ. ರಾಜ್‌ಕುಮಾರ್ – ಲಕ್ಷ್ಮಿಯ ಅನುರಾಗ ಜಯ ಕಂಡಿದೆ	6
2.	ಸುದೀಪ್ ಅಭಿನಯದ 'ಇನಿಯ'	2
3.	ಹಾಸ್ಯನಟ 'ವಿಜಿ'ಯೊಂದಿಗಿನ ಸಂಗೀತಾಕ್ಷರ	4
5.	ಆಡು ಮತ್ತು ಆನೆಗು ಇರುವ ವ್ಯತ್ಯಾಸ	6
6.	ವಿಷ್ಣುವರ್ಧನ್ – ರೂಪಿಣಿ ಅಭಿನಯದ ಚಿತ್ರ	2
7.	'ಆಕಾಶವೇ ಬೀಳಲಿ ಮೇಲೆ ನಾನೆಂದು ನಿನ್ನವನು..... ', ಗೀತೆಯ ಚಿತ್ರ	6
10.	ವಿಷ್ಣುವಿನ ನಾಲ್ಕನೆಯ ಅವತಾರದಲ್ಲಿ ನಟ ಮೋಹನ್ ಭಯಾನಕ	6
12.	ಶ್ರೀನಗರ ಕಿಟ್ಟಿ – ಪೂಜಾಗಾಂಧಿ ಅಭಿನಯದ ಚಿತ್ರಕ್ಕೆ ದಿನೇಶ್ ಬಾಬು ನಿರ್ದೇಶಕ	7
14.	ವಿಷ್ಣುವರ್ಧನ್ – ಆರತಿಯ ದೇವಲೋಕದ ಪರ್ವತ	5
15.	ಚಲನಚಿತ್ರಗಳಲ್ಲಿ ಮಾರಾಮಾರಿಯನ್ನು ಹೆಸರಿಸುವ ಪರಿ	3

ಸಿನಿ ಪದಬಂಧ 621ರ ಉತ್ತರ

ಬಿ	ಡು	ಗ	ಡೆ	ಯ	ಬೇ	ಡಿ		ರ	ಸಿ	ಕ
ಡಿ			ತ್		ಟೆ		ಭೆ			ನ್ನ
ಸ		ಜ		ರಂ	ಗಾ	ದ	ರಂ	ಗೇ	ಗೌ	ಡ
ದ	ವ	ನ			ರ					ಕು
ಬಂ		ನ		ವಾ		ಜೀ	ವ	ಕ್ಕೆ	ಜೀ	ವ
ಧ		ಮ		ಣಿ			ಜ್ರ			ರ
	ಶ	ರ	ಪಂ	ಜ	ರ		ದ		ಹೊ	
ಸ		ಣ		ಯ		ಗ	ಜ	ಕೇ	ಸ	ರಿ
ಲ್ಲಾ				ರಾ			ಲ		ಜೀ	
ಪ	ರ	ಶು	ರಾ	ಮ್		ದೀ	ಪಾ		ವ	
							ತ		ನ	ಗ್ಮ

ವಿಜೇತರು: ಧನ್ಯಾ ಎಸ್.ಎಲ್., ಸಿಂಧುವಳ್ಳಿ ಗ್ರಾಮ, ಮೈಸೂರು ತಾಲೂಕು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ಮಹಿಳೆಯರ ಸ್ವಾವಲಂಬಿ ಬದುಕಿಗೆ ಅಕ್ಕ ಕೆಫೆ ಆಸರೆ

ಜಿ.ಡಿ.ಹರೀಶ್‌ಗೌಡ ಅಭಿಪ್ರಾಯ



ಅಕ್ಕ ಕೆಫೆಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹುಣಸೂರು, ಏ.16– ಮಹಿಳೆಯರ ಸ್ವಾವಲಂಬಿ ಬದುಕಿಗೆ ಅಕ್ಕ ಕೆಫೆ ಪರಿಕಲ್ಪನೆ ಆಸರೆಯಾಗಲಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಬೀಜಗನಹಳ್ಳಿ ಗ್ರಾಪಂ ವ್ಯಾಪ್ತಿಯ ಹಾಲಗರೆ ಗ್ರಾಮದ ಹುಣಸೂರು–ಪಿರಿಯಾಪಟ್ಟಣ ಮುಖ್ಯರಸ್ತೆಯಲ್ಲಿ ನೂತನವಾಗಿ ಆರಂಭಗೊಂಡ ಅಕ್ಕ ಕೆಫೆ ಹೋಟೆಲ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರ ಬದುಕಿಗೆ ಅಕ್ಕ ಕೆಫೆ ಉತ್ತಮ ಯೋಜನೆಯಾಗಿದ್ದು, ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಿ ಎಂದರು.

ಸಾಮಾನ್ಯವಾಗಿ ಹೋಟೆಲ್ ಉದ್ಯಮ ಲಾಭದಾಯಕವಾಗಿದ್ದರೂ, ಇತ್ತೀಚೆಗೆ ತುಂಬಾ ಕಷ್ಟಕರವಾಗಿದೆ. ಆದರೆ ರುಚಿ ಮತ್ತು ಶುಚಿಗೆ ಆದ್ಯತೆ ನೀಡಿದರೆ ಗ್ರಾಹಕರು ನಿಮ್ಮಲ್ಲಿಗೆ ಹುಡುಕಿಕೊಂಡು ಬರಲಿದ್ದಾರೆ ಎಂದ ಅವರು ಅದೇ ರೀತಿ ಜನಮನ್ನಣೆ ಪಡೆದಿರುವ ಕೆಲ ಹೋಟೆಲ್‌ಗಳನ್ನು ಶಾಸಕರು ಉದಾಹರಣೆ ನೀಡಿದರು.

ಇತ್ತೀಚಿಗೆ ಮಹಿಳೆಯರು ಎಲ್ಲಾ ವಿಭಾಗಗಳಲ್ಲೂ ತಮ್ಮ ನೈಪುಣ್ಯತೆ ಪ್ರದರ್ಶಿಸುವ ಮೂಲಕ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ. ಇದೇ ರೀತಿ ಮಹಿಳೆಯರು ಮುಂದಿನ ದಿನಗಳಲ್ಲೂ ಮುಂದುವರಿಯಬೇಕು. ಸರ್ಕಾರದ ಈ ಯೋಜನೆ ಎಷ್ಟೋ ಹೆಣ್ಣು ಮಕ್ಕಳ ಬದುಕಿಗೆ ದಾರಿದೀಪವಾಗಲಿದೆ. ಸ್ವಚ್ಛತೆ ಜೊತೆಗೆ ಸಾಧ್ಯವಾದಷ್ಟು ಉತ್ತಮ ರುಚಿಯೊಂದಿಗೆ ಕಡಿಮೆ ದರದಲ್ಲಿ ಕಾಫಿ, ತಿಂಡಿ, ಊಟ ನೀಡಿದರೆ ನಿಮ್ಮ ಹೋಟೆಲ್ ಉದ್ಯಮ ಬಲಿಷ್ಠವಾಗಲಿದೆ ಎಂದರು.


ಮಹಿಳೆಯರಿಗೆ ವಿಧಾನಸಭೆ, ಲೋಕಸಭೆ ಚುನಾವಣೆಯಲ್ಲಿ ಶೇ.33ರಷ್ಟು ಮೀಸಲಾತಿ ಕಡ್ಡಾಯಗೊಳಿಸಿರುವುದು ಸ್ವಾಗತಾರ್ಹ. ಸರ್ಕಾರದ ಈ ಯೋಜನೆಗೆ ಸಂಜೀವಿನಿ ಮಹಿಳೆಯರಿಗೆ ಕಲಿಕೆಯ ಅವಶ್ಯಕತೆ ಇದ್ದು, ಅವರಿಗೆ ನನ್ನ ಕಡೆಯಿಂದ ಸಾಫ್ಟ್‌ವೇರ್ ನೀಡಲಿದ್ದು ತರಬೇತಿ ನೀಡಿ ಅವರನ್ನು ಯಶಸ್ವಿ ಉದ್ಯಮಿಗಳನ್ನಾಗಿ ಮಾಡಬೇಕು ಎಂದರು.

ಮಂಜುಳಾ ನರಗುಂದ ಮಾತನಾಡಿ, ಅಕ್ಕ ಕೆಫೆ ಮಹಿಳೆಯರ ಸ್ವಯಂ ಉದ್ಯೋಗಕ್ಕೆ ವೇದಿಕೆಯಾಗಿದೆ. ಇದು ಸರ್ಕಾರದ ಮಹತ್ವದ ಯೋಜನೆಯಾಗಿದ್ದು, ಮೈಸೂರು ಜಿಲ್ಲೆಯಲ್ಲಿ 2 ಕಡೆ ಮಾತ್ರ ಪ್ರಾರಂಭವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಯಶೋಧಮ್ಮ, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ರಘು, ಜಿಪಂನ ಸವಿತಾ, ಆಶಾ, ಇಓ ಹೊಂಗಯ್ಯ.ಕೆ, ಪಿಡಿಓ ಮಹದೇವಸ್ವಾಮಿ, ಭೀಮಪ್ಪ ಕೆ.ಲಾಳಿ, ಬಸವರಾಜು ಇನ್ನಿತರರಿದ್ದರು.

ಮಾದರಿ ಹ್ಯಾಂಡ್‌ಪೋಸ್ಟ್ ಸರ್ಕಲ್ ಕನಸು ಸಾಕಾರ

ಸರ್ಕಲ್ ನವೀಕರಣ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಚಾಲನೆ



ನೂತನವಾಗಿ ನಿರ್ಮಾಣವಾಗುವ ಸರ್ಕಲ್ ನೀಲ ನಕ್ಷೆ.



ನೂತನ ಹ್ಯಾಂಡ್‌ಪೋಸ್ಟ್ ವೃತ್ತ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ಹೆಚ್.ಡಿ.ಕೋಟೆ, ಏ.16– ತಾಲೂಕಿನ ಹ್ಯಾಂಡ್‌ಪೋಸ್ಟ್ ಸರ್ಕಲ್ ಅನ್ನು ಮಾದರಿ ಸರ್ಕಲ್ ಮಾಡಬೇಕೆಂಬ ನನ್ನ ಬಹುದಿನಗಳ ಕನಸು ಇಂದು ನನಸಾಗಿ ಸಾಕಾರಗೊಳ್ಳುತ್ತಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 4.5 ಕೋಟಿ ರೂ. ವೆಚ್ಚದ ಯರಹಳ್ಳಿ ಹ್ಯಾಂಡ್ ಪೋಸ್ಟ್ ವೃತ್ತ, ಕೊಲ್ಲೇಗೌಡನಹಳ್ಳಿ ವೃತ್ತ ನವೀಕರಣ ಕಾಮಗಾರಿ ಹಾಗೂ ಹ್ಯಾಂಡ್‌ಪೋಸ್ಟ್‌ನಿಂದ ಕೃಷ್ಣಾಪುರ ಸರ್ಕಲ್‌ವರೆಗೆ 3 ಕೋಟಿ ರೂ. ವೆಚ್ಚದಲ್ಲಿ ಜೋಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು ನನ್ನ ಮೊದಲ ಆದ್ಯತೆ ಆಗಿದ್ದು, ಭಾರತದ ಮಾಜಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ನಮ್ಮ ತಾಲೂಕಿನಲ್ಲಿ ನಡೆದ ಕಾಕನಕೋಟೆ ಕೆಡ್ಡ ವೀಕ್ಷಿಸಲು ಆಗಮಿಸಿದ ಸವಿ ನೆನಪಿಗಾಗಿ ಅವರ ಗೌರವಾರ್ಥ ಹ್ಯಾಂಡ್ ಪೋಸ್ಟ್‌ನಲ್ಲಿರುವ ಸರ್ಕಲ್‌ಗೆ ಆರ್‌ಪಿ ಸರ್ಕಲ್ ಎಂದು ಹೆಸರಿಡಲಾಗಿತ್ತು. ಇದೀಗ ಈ ವೃತ್ತವನ್ನು ಸುಂದರವಾಗಿ ಅಭಿವೃದ್ಧಿಪಡಿಸಲು ಇಂದು ಭೂಮಿ ಪೂಜೆ ನೆರವೇರಿಸಿದ್ದೇನೆ. ಈ ವೃತ್ತದಲ್ಲಿ 4 ರಸ್ತೆಗಳಿದ್ದು ನಾಲ್ಕೂ ಭಾಗಗಳಲ್ಲಿ ಹೈಟೆಕ್ ಬಸ್ ನಿಲ್ದಾಣ ಮತ್ತು ಶೌಚಾಲಯ ನಿರ್ಮಿಸಲಾಗುವುದು. ಕುಡಿಯುವ ನೀರು ಸಹ ಈ ನಿಲ್ದಾಣದಲ್ಲಿ ಸಿಗಲಿದ್ದು, 60ಕ್ಕೂ ಹೆಚ್ಚು ಮಂದಿ ಕುಳಿತುಕೊಳ್ಳುವ ವ್ಯವಸ್ಥೆ ಇರಲಿದೆ ಎಂದರು.

> ಕ್ಷೇತ್ರದ ಜನತೆ ನನ್ನ ಮೇಲೆ ವಿಶ್ವಾಸವಿಟ್ಟು 2 ಬಾರಿ ಶಾಸಕನಾಗಿ ಆಯ್ಕೆ ಮಾಡಿದ್ದಾರೆ. ಅವರ ಆಶಯದಂತೆ ತಾಲೂಕನ್ನು ಅಭಿವೃದ್ಧಿ ಪಡಿಸುವುದೇ ನನ್ನ ಗುರಿ. ಅಭಿವೃದ್ಧಿ ವಿಚಾರದಲ್ಲಿ ಟೀಕೆ ಮಾಡುವವರಿಗೆ ಕೆಲಸದ ಮೂಲಕ ಉತ್ತರ ನೀಡುತ್ತೇನೆ. ತಾಲೂಕಿನ ಜನತೆ ನನ್ನ ಮೇಲೆ ಇಟ್ಟಿರುವ ನಂಬಿಕೆಗೆ ಸದಾ ಬದ್ಧ. – ಅನಿಲ್ ಚಿಕ್ಕಮಾದು ಶಾಸಕ.

ಈ ವೃತ್ತ ತಾಲೂಕಿನ ಹೃದಯ ಭಾಗವಾಗಿ ಗುರುತಿಸಿಕೊಳ್ಳಲಿದ್ದು, ಈ ಕಾಮಗಾರಿಯನ್ನು ತ್ವರಿತಗತಿಯಲ್ಲಿ 6 ತಿಂಗಳೊಳಗಾಗಿ ಮುಗಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕೋಟೆಯಿಂದ ಸರಗೂರಿಗೆ ಸಂಪರ್ಕ ರಸ್ತೆ ನಿರ್ಮಾಣ ಕಾಮಗಾರಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಜೊತೆಗೆ ತುಂಬಸೋಗೆ ಸೇತುವೆಯನ್ನು ಬೀಚನಹಳ್ಳಿ ಗ್ರಾಮದಲ್ಲಿ ಕಬಿನಿ ಜಲಾಶಯಕ್ಕೆ ನಿರ್ಮಾಣವಾಗುತ್ತಿರುವ ಸೇತುವೆ ಮಾದರಿಯಲ್ಲಿ ಸ್ಟೀಲ್ ಸೇತುವೆ ನಿರ್ಮಾಣಕ್ಕೂ ಸಹ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಈ ವೇಳೆ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಪಿಡಬ್ಲ್ಯೂಡಿ ಎಇಇ ರಮೇಶ್, ಮೈಮುಲ್ ಅಧ್ಯಕ್ಷ ಈರೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ, ಕುರುಬ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಹೆಚ್.ಸಿ.ನರಸಿಂಹ ಮೂರ್ತಿ, ಪ್ರೇಮ್ ಸಾಗರ್, ಆಸೀಫ್ ಇಕ್ಬಾಲ್, ರಾಜು, ಸೂರ್ಯಕುಮಾರ್, ನಾಗನಹಳ್ಳಿ ಪ್ರದೀಪ್, ಹೋಂಡಾ ನಯಾಜ್, ಜಯರಾಂ, ಪ್ರಕಾಶ್, ಮರಿದೇವಯ್ಯ, ಬೀರೇಗೌಡ, ಶಿವಮಲ್ಲಪ್ಪ, ಅಜರ್, ಅಶೋಕ್, ರವಿ ಇದ್ದರು.

ಶ್ರೀಕಂಠೇಶ್ವರ ದೇವಾಲಯಕ್ಕೆ 2.11 ಕೋಟಿ ಆದಾಯ



ದಾಸೋಹ ಭವನದ ಆವರಣದಲ್ಲಿ ಹುಂಡಿ ಎಣಿಕೆ ನಡೆಯಿತು.

ನಂಜನಗೂಡು, ಏ.16– ಶ್ರೀಕಂಠೇಶ್ವರ ದೇವಾಲಯದ ಹುಂಡಿಯಲ್ಲಿ 2 ಕೋಟಿ 11 ಲಕ್ಷದ 50 ಸಾವಿರ ರೂ., 58 ಗ್ರಾಂ ಚಿನ್ನ, 2.5 ಕೆಜಿ ಬೆಳ್ಳಿ ಸಂಗ್ರಹವಾಗಿದೆ.

ದೇವಾಲಯದ ದಾಸೋಹ ಭವನದ ಆವರಣದಲ್ಲಿ ನಡೆದ ಹುಂಡಿ ಎಣಿಕೆಯಲ್ಲಿ ದೊಡ್ಡ ಜಾತ್ರಾ ಮಹೋತ್ಸವದ ಪ್ರಯುಕ್ತ ಈ ಬಾರಿ ಲಕ್ಷಾಂತರ ಜನರು ದೇವಾಲಯಕ್ಕೆ ಆಗಮಿಸಿದ್ದರಿಂದ 2 ಕೋಟಿ 11 ಲಕ್ಷದ 50 ಸಾವಿರ ರೂ., 58 ಗ್ರಾಂ ಚಿನ್ನ, 2.5 ಕೆಜಿ ಬೆಳ್ಳಿ ಮತ್ತು 46 ವಿದೇಶಿ ಕರೆನ್ಸಿಗಳು ದೊರೆತಿದೆ ಎಂದು ದೇವಾಲಯದ ಇಓ ಸಿ.ಜೆ.ಕೃಷ್ಣ ತಿಳಿಸಿದರು. ಈ ವೇಳೆ ಎಣಿಕೆ ಕಾರ್ಯದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಮಹಿಳೆಯರು, ದೇವಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೋಡಿ ಪಾಪಣ್ಣನವರ ಪತ್ನಿ ಸುಂದರಮ್ಮ ನಿಧನ



ಹುಣಸೂರು: ತಾಲೂಕಿನ ಕೋಡಿ ಗ್ರಾಮದ ನಿವಾಸಿ ಹಾಗೂ ಹುಣಸೂರು ಮಾಜಿ ಶಾಸಕ ದಿವಂಗತ ಕೋಡಿ ವಿ.ಪಾಪಣ್ಣ ಅವರ ಪತ್ನಿ ಶ್ರೀಮತಿ ಸುಂದರಮ್ಮ(81) ಅವರು ಗುರುವಾರ ಮುಂಜಾನೆ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಕೋಡಿ ಗ್ರಾಮದ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೋಕುಲಂ ಇಂಟರ್ ನ್ಯಾಷನಲ್ ಶಾಲೆ ಮಾನ್ಯತೆ ರದ್ದು

ನಂಜನಗೂಡು, ಏ.16– ತಾಲೂಕಿನ ಹುಣಸನಾಳು ಗ್ರಾಮದ ಬಳಿ ಇರುವ ಗೋಕುಲಂ ಇಂಟರ್ ನ್ಯಾಷನಲ್ ಶಾಲೆಯ 2026–27ನೇ ಸಾಲಿನ ಮಾನ್ಯತೆಯನ್ನು ರದ್ದುಗೊಳಿಸಿ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಆದೇಶ ಹೊರಡಿಸಿದ್ದಾರೆ.

ಹುಣಸನಾಳು ಗ್ರಾಮದಲ್ಲಿ ಗಾರ್ಡಿಯನ್ ಏಂಜಲ್ಸ್ ಎಜುಕೇಶನಲ್ ಟ್ರಸ್ಟ್, ವಿದ್ಯಾನಗರ ನಂಜನಗೂಡು ವತಿಯಿಂದ ನಡೆಯುತ್ತಿರುವ ಶ್ರೀಗೋಕುಲಂ ಇಂಟರ್ ನ್ಯಾಷನಲ್ ಶಾಲೆಯು ಶೈಕ್ಷಣಿಕ ನಿಯಮಗಳನ್ನು ಪಾಲಿಸದೇ ಇರುವುದರಿಂದ ಸದರಿ ಶಾಲೆಯನ್ನು ಕಾರ್ಯ ಸಾಧುವಲ್ಲದ ಶಾಲೆ ಎಂದು ಪರಿಗಣಿಸಿ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 34ರಡಿ, ಸದರಿ ಶಾಲೆ ನೋಂದಣಿಯನ್ನು ರದ್ದು ಪಡಿಸಿ, ಸೆಕ್ಷನ್ 39ರಡಿ 2026–27ನೇ ಸಾಲಿಗೆ ಶಾಲೆಯ ಮಾನ್ಯತೆಯನ್ನು ರದ್ದು ಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಬಿಇಓ ಕಚೇರಿ ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುರಸಭಾ ಚುನಾವಣೆಯಲ್ಲಿ 3ನೇ ವಾರ್ಡ್‌ನಿಂದ ಸ್ಪರ್ಧೆ

ಕನ್ನಡ ಸೇನೆ ಕರ್ನಾಟಕ ಸಂಘಟನೆ ತಾಲೂಕು ಅಧ್ಯಕ್ಷ ಭೈರಾಪುರ ಕೆ.ರಾಜು



ಭೈರಾಪುರ ಕೆ.ರಾಜು ಅವರನ್ನು ಬೆಂಬಲಿಗರು ಸನ್ಮಾನಿಸಿದರು.

ತಿ.ನರಸೀಪುರ, ಏ.16– ಬೆಂಬಲಿಗರು ಹಾಗೂ ಹಿತೈಷಿಗಳ ಒತ್ತಡದ ಮೇರೆಗೆ ಮುಂಬರುವ ಪುರಸಭಾ ಚುನಾವಣೆಯಲ್ಲಿ 3ನೇ ವಾರ್ಡ್‌ನಿಂದ ಸ್ಪರ್ಧಿಸುವುದಾಗಿ ಕನ್ನಡ ಸೇನೆ ಕರ್ನಾಟಕ ಸಂಘಟನೆಯ ತಾಲೂಕು ಅಧ್ಯಕ್ಷ ಭೈರಾಪುರ ಕೆ.ರಾಜು ತಿಳಿಸಿದರು.

ಕನ್ನಡ ಸೇನೆ ಕರ್ನಾಟಕ ಸಂಘಟನೆಯ ತಿ.ನರಸೀಪುರ ತಾಲೂಕು ಅಧ್ಯಕ್ಷರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಬೆಂಬಲಿಗರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪುರಸಭೆ ಚುನಾವಣೆ ಘೋಷಣೆ ದಿನಾಂಕ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪುರಸಭೆ ವ್ಯಾಪ್ತಿಯ ಭೈರಾಪುರ ಬಡಾವಣೆಯ 3ನೇ ವಾರ್ಡ್‌ನಿಂದ ಚುನಾವಣೆಗೆ ಸ್ಪರ್ಧಿಸಲು ಬೆಂಬಲಿಗರು ಒತ್ತಡ ಹೇರುತ್ತಿರುವುದರಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ. ಒಂದು ವೇಳೆ 3ನೇ ವಾರ್ಡ್ ಮಹಿಳಾ ವರ್ಗಕ್ಕೆ ಮೀಸಲಾದರೂ ನಾನು ಮಹಿಳಾ ಅಭ್ಯರ್ಥಿ ನಿಲ್ಲಿಸಲು ಸಿದ್ಧನಿದ್ದು, ಮೀಸಲಾತಿ ನಿಗದಿಯಾಗದಿದ್ದಲ್ಲಿ ಸ್ವತಃ ನಾನೇ ಚುನಾವಣೆಗೆ ಸ್ಪರ್ಧಿಸುವುದಾಗಿ ತಿಳಿಸಿದರು.

ಸಂಘಟನೆಯ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್ ಅವರು ನನ್ನ ಮೇಲೆ ವಿಶ್ವಾಸವಿಟ್ಟು ತಾಲೂಕು ಅಧ್ಯಕ್ಷ ಸ್ಥಾನ ನೀಡಿದ್ದು, ಅವರ ನಂಬಿಕೆಗೆ ಚ್ಯುತಿ ಬಾರದಂತೆ ಕಾರ್ಯನಿರ್ವಹಿಸುತ್ತೇನೆ ಎಂದ ಅವರು ಶೀಘ್ರದಲ್ಲೇ ತಾಲೂಕಿನಲ್ಲಿ ಸಂಘಟನೆಯ ಕಚೇರಿ ತೆರೆಯಲಾಗುವುದು ಎಂದರು.

ಚಿತ್ರ ನಿರ್ದೇಶಕ ಕಾರ್ತಿಕ್ ಸೂರ್ಯ ಮಾತನಾಡಿ, ಜನಪರ ಕಾಳಜಿ ಹೊಂದಿರುವ ಕೆ.ರಾಜು ಅವರನ್ನು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ತಾಲೂಕು ಅಧ್ಯಕ್ಷರಾಗಿ ಮಾಡಿರುವುದು ಸಂತಸ ತಂದಿದೆ. ಜನರ ಮನೆ ಬಾಗಿಲಿಗೆ ತೆರಳಿ ಅವರ ಕಷ್ಟ ವಿಚಾರಿಸಿ ಸ್ಪಂದಿಸುವ ಉದಾರ ಮನಸ್ಸಿನ ವ್ಯಕ್ತಿತ್ವದ ರಾಜು ಅವರು ನಿಜಕ್ಕೂ ಅಭಿನಂದನೆಗೆ ಅರ್ಹರು. ಕೊರೊನಾ ವೇಳೆ ಸಂಕಷ್ಟದಲ್ಲಿ ಕಲಾವಿದರಿಗೆ ಅವರು ನೆರವಾಗಿದ್ದರು. ಮುಂಬರುವ ಪುರಸಭೆ ಚುನಾವಣೆಯಲ್ಲಿ ರಾಜು ಅವರು ಸ್ಪರ್ಧಿಸಿದರೇ ಅವರ ಗೆಲುವಿಗೆ ಹಗಲು ರಾತ್ರಿ ಶ್ರಮಿಸಿ ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಇದೇ ವೇಳೆ ತಿಳಿಸಿದರು.

ತಾಲೂಕು ಬಾಬು ಜಗಜೀವನರಾಂ ಸಂಘದ ಪ್ರಧಾನ ಕಾರ್ಯದರ್ಶಿ ವಾಟಾಳು ಜಿ.ಎನ್.ಪುಟ್ಟಸ್ವಾಮಿ, ಡಾ.ವಿಷ್ಣು ವರ್ಧನ್ ಸೇವಾ ಸಮಿತಿ ಬಸವಣ್ಣ, ಕೇಬಲ್ ಸ್ವಾಮಿ, ಐಬಿ ಶಿವು, ತುಂಬಲ ಗಣೇಶ್, ತಬಲಾ ರಾಚಪ್ಪ ಹಾಜರಿದ್ದರು.

ಮೂರನೇ ಪುಟದಿಂದ

ಮೈಸೂರಲ್ಲಿ ಮನೆ ಗಣತಿ ಆರಂಭ



ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ಗಣತಿದಾರರಾದ(ಶಿಕ್ಷಕಿ) ಮಾಲಿನಿ ಅವರು ಮನೆ ಗಣತಿ ಪ್ರಕ್ರಿಯೆಯಲ್ಲಿ ಮಾಹಿತಿ ಕಲೆ ಹಾಕುತ್ತಿರುವುದು.

ಈ ಹಿನ್ನೆಲೆಯಲ್ಲಿ ಇಂದಿನಿಂದ (ಏ.16) ಮೇ 15ರವರೆಗೆ ಮನೆ ಬಾಗಿಲಿಗೆ ಗಣತಿದಾರರು ಹೋಗಿ ಮನೆ ಪಟ್ಟಿ ತಯಾರಿಸಿ, ಮನೆ ಗಣತಿ ಮಾಡಲಿದ್ದಾರೆ.

ಮನೆ ಗಣತಿಗಾಗಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1832 ಬ್ಲಾಕ್ ರಚಿಸಲಾಗಿದ್ದು, ಅದರಲ್ಲಿ 2023 ಗಣತಿದಾರರು, 341 ಮಂದಿ ಮೇಲ್ವಿಚಾರಕರು ಸೇರಿದಂತೆ 2364 ಮಂದಿ ಮನೆ ಗಣತಿ ಕಾರ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ ವಿವಿಧ ತಾಲೂಕು ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ 4181 ಬ್ಲಾಕ್‌ಗಳಿದ್ದು, 4517 ಗಣತಿದಾರರು, 867 ಮೇಲ್ವಿಚಾರಕರು ಸೇರಿದಂತೆ 5384 ಮಂದಿ ಗಣತಿ ಕಾರ್ಯ ನಿರ್ವಹಿಸಲಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ 6013 ಬ್ಲಾಕ್‌ನಲ್ಲಿ 6540 ಗಣತಿದಾರರು, 1208 ಮೇಲ್ವಿಚಾರಕರು ಒಳಗೊಂಡಂತೆ 7748 ಸಿಬ್ಬಂದಿ ಮನೆ ಪಟ್ಟಿ ಮತ್ತು ಮನೆ ಗಣತಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಡಿಜಿಟಲೀಕರಣ: ಇದೇ ಮೊದಲ ಬಾರಿಗೆ ಮನೆ ಪಟ್ಟಿ, ಮನೆ ಗಣತಿ ಕಾರ್ಯವನ್ನು ಡಿಜಿಟಲೀಕರಣಗೊಳಿಸಲಾಗಿದೆ. ಪೇಪರ್ ರಹಿತ ಗಣತಿ ಕಾರ್ಯದಲ್ಲಿ ಗಣತಿದಾರರು ತಮ್ಮ ಮೊಬೈಲ್, ಟ್ಯಾಬ್ ಅಥವಾ ಲ್ಯಾಪ್‌ಟಾಪ್‌ನಲ್ಲಿಯೇ ನಿಗದಿತ ಆನ್‌ಲೈನ್ ಪೋರ್ಟಲ್‌ನಲ್ಲಿ ಗಣತಿ ಮಾಹಿತಿಯನ್ನು ನಮೂದಿಸುತ್ತಿದ್ದಾರೆ. ಇದರಿಂದ ಈ ಬಾರಿ ನಡೆಸುವ ಗಣತಿ ಕಾರ್ಯ ನಿಖರವಾದ ದತ್ತಾಂಶ ಹೊಂದಿರುವ ವಿಶ್ವಾಸ ಇದೆ. ಅಲ್ಲದೆ, ಮಾಹಿತಿ ಕಳೆದು ಹೋಗದಂತೆ, ಸೋರಿಕೆಯಾಗದಂತೆ ಕಟ್ಟೆಚ್ಚರ ವಹಿಸಲಾಗಿದೆ. ಗಣತಿದಾರರು ಮನೆ ಮಾಲೀಕರಿಗೆ ಪ್ರಶ್ನೆ ಕೇಳಿ, ಉತ್ತರ ಪಡೆದುಕೊಂಡು ಆನ್‌ಲೈನ್ ಪೋರ್ಟಲ್‌ನಲ್ಲಿ ಟಿಕ್ ಮಾಡಿಕೊಳ್ಳುತ್ತಿರುವುದರಿಂದ ಮನೆ ಮಾಲೀಕರಿಗೆ ಗಣತಿ ಪ್ರಕ್ರಿಯೆ ಸುಲಭವಾಗಿದೆ. ಆದರೆ, ಕೆಲವೆಡೆ ನೆಟ್ವರ್ಕ್ ಸಿಗದ ಸ್ಥಳದಲ್ಲಿ ಗಣತಿದಾರರಿಗೆ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಆದರೂ, ಗಣತಿ ಪ್ರಕ್ರಿಯೆ ಬಿರುಸಾಗಿ ಸಾಗಿದೆ.

ಬಿಸಿಲಿನಲ್ಲಿ ಹೈರಾಣ: ಗಣತಿದಾರರು ಬಿಸಿಲಿನಲ್ಲಿ ಮನೆ–ಮನೆಗೆ ಅಲೆದು ಹೈರಾಣಾಗುತ್ತಿದ್ದಾರೆ. ಬೆಳಗ್ಗೆ ಗಣತಿ ಪ್ರಕ್ರಿಯೆ ಆರಂಭಿಸಿ, ಮಧ್ಯಾಹ್ನ 12 ಗಂಟೆಯೊಳಗೆ ಎಷ್ಟು ಸಾಧ್ಯವೋ ಅಷ್ಟು ಮನೆಗಳ ಗಣತಿ ನಡೆಸುತ್ತಿದ್ದಾರೆ. ಬಳಿಕ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30ರವರೆಗೂ ಮನೆ ಗಣತಿ ನಡೆಸಲು ನಿರ್ಧರಿಸಿದ್ದಾರೆ.

ದಕ್ಷಿಣದವರೆಗೆ ಯಾವ ಅನ್ಯಾಯವೂ ಆಗಲ್ಲ

ಇಲ್ಲ ಭರವಸೆ ಎಂಬ ಪದವನ್ನು ಬಳಸಬೇಕೆಂದು ಬಯಸಿದರೆ, ನಾನು ಹಾಗೆ ಹೇಳುತ್ತೇನೆ ಎಂದು ಅವರು ಹೇಳಿದರು. ದಕ್ಷಿಣ ಮುಖ್ಯಮಂತ್ರಿಗಳಾದ ತಮಿಳುನಾಡಿನ ಎಂ.ಕೆ.ಸ್ಟಾಲಿನ್, ಕೇರಳದ ಪಿಣರಾಯಿ ವಿಜಯನ್, ತೆಲಂಗಾಣದ ರೇವಂತ್ ರೆಡ್ಡಿ ಮತ್ತು ಕರ್ನಾಟಕದ ಸಿದ್ದರಾಮಯ್ಯ ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿರುವ ತಮ್ಮ ರಾಜ್ಯಗಳಿಗೆ ಕ್ಷೇತ್ರ ಪುನರ್ವಿಂಗಡಣೆಯಿಂದ ಅನ್ಯಾಯವಾಗಲಿದೆ ಎಂದು ಹೇಳುತ್ತಾ ಬಂದಿದ್ದಾರೆ.

17 ಅಪರಾಧಿಗಳಿಗೆ ಶಿಕ್ಷೆ ಪ್ರಕಟ!

ಅಪರಾಧಿಗಳಲ್ಲಿ ಹಲವರನ್ನು ಹೆಚ್ಚುವರಿಯಾಗಿ ಸಾಕ್ಷ್ಯಗಳ ನಾಶಕ್ಕೆ ಕಾರಣರಾದ ಆರೋಪದಲ್ಲಿ ತಪ್ಪಿತಸ್ಥರೆಂದು ಘೋಷಿಸಲಾಯಿತು. ಇನ್ನು 20ನೇ ಆರೋಪಿಯಾಗಿದ್ದ ವಾಸುದೇವರಾಮ ನಿಲೇಕಣಿ (ಧಾರವಾಡ ಉಪನಗರ ವಿಭಾಗದ ಎಸಿಪಿ) ಹಾಗೂ 21ನೇ ಆರೋಪಿಯಾಗಿದ್ದ ಸೋಮಶೇಖರ ಬಸಪ್ಪ ನ್ಯಾಮಗೌಡ (ವಿನಯ್ ಕುಲಕರ್ಣಿ ಆಪ್ತ ಸಹಾಯಕ) ಅವರನ್ನು ನಿರ್ದೋಷಿಗಳೆಂದು ಕೋರ್ಟ್ ಹೇಳಿತ್ತು. 2016ರ ಜೂನ್‌ನಲ್ಲಿ ಧಾರವಾಡದ ಜಿಮ್ನಾಷಿಯಂನಲ್ಲಿ ಬಿಜೆಪಿ ನಾಯಕ ಮತ್ತು ಧಾರವಾಡ ಜಿಲ್ಲಾ ಪಂಚಾಯತ್‌ನ ಮಾಜಿ ಸದಸ್ಯ ಯೋಗೇಶ್ ಗೌಡರ್‌ನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಆರಂಭದಲ್ಲಿ ಸ್ಥಳೀಯ ಪೊಲೀಸರು ತನಿಖೆ ನಡೆಸಿದ್ದರು. ನಂತರ ಸಿಬಿಐಗೆ ಹಸ್ತಾಂತರಿಸಲಾಗಿದ್ದು ಪ್ರಕರಣ ಸಂಬಂಧ 100ಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ನಡೆಸಲಾಗಿತ್ತು.

ಮೈಸೂರಿನಿಂದ ಹೈದರಾಬಾದ್‌ಗೆ ಮತ್ತೊಂದು ವಿಮಾನ ಶೀಘ್ರ ಹಾರಾಟ

ಮುಂದಿನ ದಿನಗಳಲ್ಲಿ ಪ್ರಮುಖ ನಗರಗಳಿಗೆ ಹೆಚ್ಚುವರಿ ವಿಮಾನ ಸೇವೆ; ಸಂಸದ ಯದುವೀರ್ ಭರವಸೆ



ಯದುವೀರ್ ಒಡೆಯರ್



ಮೈಸೂರು,ಏ.16(ಪಿಎಂ)– ಮೈಸೂರಿನಿಂದ ಮುತ್ತಿನ ನಗರಿ ಹೈದರಾಬಾದ್‌ಗೆ ಮತ್ತೊಂದು ವಿಮಾನ ಸಂಚಾರ ಅತೀ ಶೀಘ್ರದಲ್ಲೇ ಆರಂಭವಾಗಲಿದೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಈ ವಿಷಯ ಹಂಚಿಕೊಂಡಿದ್ದಾರೆ. ಮೈಸೂರಿನಿಂದ ಹೈದರಾಬಾದ್‌ಗೆ ಮೇ 1ರಿಂದ ಈ ವಿಮಾನ ಸೇವೆ ಆರಂಭವಾಗಲಿದೆ. ಮಧ್ಯಾಹ್ನ 2.20ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ಹೊರಡಲಿರುವ ವಿಮಾನ ಸಂಜೆ 4 ಗಂಟೆಗೆ ಹೈದರಾಬಾದ್ ತಲುಪಲಿದೆ. ಈಗಾಗಲೇ ಎರಡು ವಿಮಾನ ಚೆನ್ನೈ, ಹೈದರಾಬಾದ್‌ಗೆ ತೆರಳುತ್ತಿದ್ದು, ಈ ವಿಮಾನ ಸಂಚಾರ ಸೇವೆಯಿಂದ ನಾಗರಿಕರಿಗೆ ಮತ್ತಷ್ಟು ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ಮೈಸೂರಿನಿಂದ ಹೆಚ್ಚುವರಿ ವಿಮಾನ ಸಂಚಾರ ಆರಂಭವಾಗಲಿದೆ ಎಂದು ಸಂಸದರು ತಿಳಿಸಿದ್ದಾರೆ.

ಏರ್ ಟ್ರಾಫಿಕ್ ಹೆಚ್ಚಳದ ಗುರಿ: ಮೈಸೂರಿನಿಂದ ವಾಯು ಸಂಚಾರ ಹೆಚ್ಚಳಕ್ಕೆ ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಹಲವಾರು ಬಾರಿ ಕೇಂದ್ರ ಸಚಿವರೊಂದಿಗೆ ಮಾತುಕತೆ ನಡೆಸಿದ್ದೇನೆ ಎಂದು ಯದುವೀರ್ ತಿಳಿಸಿದ್ದಾರೆ. ವಿಮಾನ ನಿಲ್ದಾಣ ವಿಸ್ತರಣೆಗೆ ತೊಡಕಾಗಿರುವ ಭೂ ಸ್ವಾಧೀನ ಪ್ರಕ್ರಿಯೆ ಕೂಡ ಬಹುತೇಕ ಪೂರ್ಣಗೊಂಡಿದೆ. ಮುಂದಿನ ಕೆಲವೇ ದಿನಗಳಲ್ಲಿ ಭೂಮಿ ಹಸ್ತಾಂತರಗೊಂಡ ನಂತರ ಕೇಂದ್ರದ ಮೇಲೆ ಇನ್ನಷ್ಟು ಒತ್ತಡ ಹೇರಿ ವಿಮಾನ ನಿಲ್ದಾಣ ವಿಸ್ತರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಒಮ್ಮೆ ವಿಮಾನ ನಿಲ್ದಾಣ ವಿಸ್ತರಣೆಗೊಂಡ ನಂತರ ದೇಶದ ನಾನಾ ಪ್ರಮುಖ ನಗರಗಳಿಗೆ ಮೈಸೂರಿನಿಂದ ನೇರ ವಿಮಾನ ಸಂಚಾರ ಸೇವೆ ಆರಂಭಗೊಳ್ಳಲಿದೆ. ಇದರೊಂದಿಗೆ ಮೈಸೂರಿನ ಅಭಿವೃದ್ಧಿಯೂ ಸಮಾನಾಂತರವಾಗಿ ಆಗಲಿದೆ. ಮೈಸೂರಿನಿಂದ ಏರ್ ಟ್ರಾಫಿಕ್ (ವಿಮಾನ ಸಂಚಾರ) ಹೆಚ್ಚಿಸಲು ಎಲ್ಲಾ ರೀತಿಯ ಮಾತುಕತೆ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಈ ನಿಟ್ಟಿನಲ್ಲಿ ಸಂಪೂರ್ಣ ಕಾರ್ಯಪ್ರವೃತ್ತನಾಗಲಿದ್ದೇನೆ. ಮೈಸೂರಿನ ಸಮಗ್ರ ಅಭಿವೃದ್ಧಿಗೆ ಬದ್ಧನಾಗಿದ್ದೇನೆ ಎಂದು ಯದುವೀರ್ ಒಡೆಯರ್ ತಿಳಿಸಿದ್ದಾರೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಸೇವಾವಧಿ ವಿಸ್ತರಣೆ



ಡಾ.ಎಂ.ಎ.ಸಲೀಂ

ಮೈಸೂರು,ಏ.16(ಪಿಎಂ)– ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರ ಸೇವಾವಧಿ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2027ರ ಆಗಸ್ಟ್ 29ರವರೆಗೆ ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ರಾಜ್ಯ ಪೊಲೀಸ್ ಮಹಾರ್ದೇಶಕರಾಗಿ (ಡಿಜಿ–ಐಜಿಪಿ) ಮುಂದುವರೆಯಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಡಬ್ಲ್ಯೂಪಿ (ಸಿ) ನಂ.310/1996 (ಪ್ರಕಾಶ್ ಸಿಂಗ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ (ದಿನಾಂಕ: 22–9–2006) ಅನುಸಾರ ಈ ಕ್ರಮ ವಹಿಸಿರುವುದಾಗಿ ಆದೇಶದಲ್ಲಿ ಉಲ್ಲೇಖಿಸಲಾಗಿದೆ. 1993ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಡಾ.ಎಂ.ಎ.ಸಲೀಂ ಅವರು ಈ ವರ್ಷದ ಜೂನ್‌ನಲ್ಲಿ ನಿವೃತ್ತರಾಗಬೇಕಿತ್ತು. ಆದರೆ ಸರ್ಕಾರ ಅವರ ಸೇವಾವಧಿ ವಿಸ್ತರಿಸಿದೆ. 2025ರ ಮೇನಲ್ಲಿ ಪ್ರಭಾರ ಡಿಜಿ ಐಜಿಪಿಯಾಗಿ ಸಲೀಂ ಅವರನ್ನು ನೇಮಕ ಮಾಡಲಾಗಿತ್ತು. ಬಳಿಕ ಅವರನ್ನು 2025ರ ಆಗಸ್ಟ್‌ನಲ್ಲಿ ಪೂರ್ಣಾವಧಿಗೆ ನೇಮಕ ಮಾಡಲಾಗಿತ್ತು. ಅವರು ರಾಜ್ಯದ 43ನೇ ಡಿಜಿ–ಐಜಿಪಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಏ.18ರಂದು ಬಿವಿಬಿಯಲ್ಲಿ ನೃತ್ಯ ರೂಪಕ ಕಾರ್ಯಕ್ರಮ



ಮೈಸೂರು,ಏ.16(ಪಿಎಂ)– ಭಾರತೀಯ ವಿದ್ಯಾಭವನ (ಬಿವಿಬಿ) ಮೈಸೂರು ಕೇಂದ್ರದ ವತಿಯಿಂದ ಏ.18ರಂದು 'ನರಸಿಂಹ ನೃತ್ಯ ರೂಪಕ' ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ ಮೈಸೂರು ಕೇಂದ್ರದ ಸಭಾಂಗಣದಲ್ಲಿ ಅಂದು ಸಂಜೆ 6ಕ್ಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಉಡುಪಿಯ ಕೊಡವೂರು ನೃತ್ಯ ನಿಕೇತನ ತಂಡವು ನೃತ್ಯ ರೂಪಕ ಪ್ರದರ್ಶನ ನೀಡಲಿದೆ.

ಮುಡಾ ಅಕ್ರಮಕ್ಕೆ ಕನ್ನಡಿ

ಮಂಜೂರು ಮಾಡಿದ ವೇಳೆ ಆಯುಕ್ತರಾಗಿದ್ದ ನಟೇಶ್, ಸಮರ್ಥಿಕೊಂಡಿದ್ದರು. ಆದರೆ ಈ ಇಬ್ಬರು ಆಯುಕ್ತರಾಗಿದ್ದಾಗ ಅಕ್ರಮ ನಡೆದಿದೆ ಎಂದು ರಾಜ್ಯ ಸರ್ಕಾರವೇ ರಚಿಸಿದ ಪಿ.ಎನ್.ದೇಸಾಯಿ ಅವರ ವಿಚಾರಣಾ ಆಯೋಗವೇ ಹೇಳಿದೆ.

ಸರ್ಕಾರದಿಂದಲೇ ನೋಟಿಸ್: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿತ್ತು ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ, ವರದಿ ಸಲ್ಲಿಸಲು ಸರ್ಕಾರವು 2024ರ ಜುಲೈ 14ರಂದು ನಿವೃತ್ತ ನ್ಯಾಯಾಧೀಶರಾದ ಪಿ.ಎನ್.ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ವಿಚಾರಣಾ ಆಯೋಗ ರಚಿಸಿತು. ಬಳಿಕ ಆಯೋಗವು 2006ರಿಂದ 2024ರ ಜುಲೈ 15ರ ಅವಧಿಯಲ್ಲಿನ ಪ್ರಕರಣಗಳ ಬಗ್ಗೆ ಸುದೀರ್ಘ ವಿಚಾರಣೆ ನಡೆಸಿ, ದಾಖಲೆಗಳು, ಅಧಿಕಾರಿ ಹಾಗೂ ನೌಕರರನ್ನು ಸಾಕ್ಷಿಗಳನ್ನಾಗಿ ವಿಚಾರಣೆಗೆ ಒಳಪಡಿಸಿದ ಬಳಿಕ ಸಲ್ಲಿಸಲಾದ ವಿಸ್ತೃತ ವಿಚಾರಣಾ ವರದಿ 2025ರ ಜು.30ರಂದು ಸರ್ಕಾರವು ಸ್ವೀಕರಿಸಿತ್ತು.

ವಿಚಾರಣಾ ವರದಿಯಲ್ಲಿ ವಿಷಯ ವ್ಯಾಪ್ತಿಗೆ ಸಂಬಂಧಿಸಿದಂತೆ ನಡೆದಿರುವ ಅಕ್ರಮಗಳ ಬಗ್ಗೆ ಪ್ರಕರಣಗಳನ್ನು ಗುರುತಿಸಿದೆ. ಅದರಂತೆ ತಾವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ನಿಯಮಬಾಹಿರವಾಗಿ ಮತ್ತು ಮನಸ್ಸೋಇಚ್ಛೆ ಬೆಲೆ ಬಾಳುವ ನಿವೇಶನಗಳನ್ನು ಹಂಚಿಕೆ ಮಾಡಿ, ಅಧಿಕಾರ ವ್ಯಾಪ್ತಿ ಮೀರಿ ನಡೆದುಕೊಳ್ಳುವ ಮೂಲಕ ನಿಯಮ ಉಲ್ಲಂಘಿಸಿರುವುದು ಕಂಡುಬಂದಿದೆ. ಜವಾಬ್ದಾರಿಯುತ ಅಧಿಕಾರಿಯಾಗಿ ನಿಯಮಬಾಹಿರವಾಗಿ ನಿವೇಶನ ಹಂಚಿಕೆ ಮತ್ತು ಇತರೆ ಪ್ರಕರಣಗಳಲ್ಲಿ ನಿಯಮಗಳಿಗೆ ವಿರುದ್ಧವಾಗಿ ತಾವು ತೆಗೆದುಕೊಂಡಿರುವ ನಿರ್ಣಯಗಳು ಮತ್ತು ಎಸಗಿರುವ ಕರ್ತವ್ಯಲೋಪಗಳು ಗಂಭೀರ ಸ್ವರೂಪದ್ದಾಗಿದೆ. ಹಾಗಾಗಿ ನಿಮ್ಮ ವಿರುದ್ಧ ಏಕೆ ಶಿಸ್ತು ಕ್ರಮ ಜರುಗಿಸಬಾರದು ಎಂಬುದರ ಕುರಿತು ಈ ನೋಟಿಸ್ ತಲುಪಿದ 15 ದಿನಗಳೊಳಗಾಗಿ ಸಮಜಾಯಿಷಿ ನೀಡುವಂತೆ, ತಪ್ಪಿದ್ದಲ್ಲಿ ಯಾವುದೇ ಸಮಜಾಯಿಷಿ ಇಲ್ಲವೆಂದು ಭಾವಿಸಿ, ನಿಯಮಾನುಸಾರ ಕ್ರಮ ಜರುಗಿಸುವುದಾಗಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಕಳೆದ ಫೆ.24ರಂದು ಪ್ರತ್ಯೇಕ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ದೂರುದಾರ ಸ್ನೇಹಮಯಿ ಕೃಷ್ಣ ಆರೋಪ ದಿಟವೆಂಬುದು ಸರ್ಕಾರಕ್ಕೂ ಮನದಟ್ಟಾದಂತಿದೆ.

ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಸಹಾಯವಾಣಿ

ಜಲಸೇವಾ ನಿಯಂತ್ರಣ ಕೊಠಡಿ ಆರಂಭಿಸಿದ ಮೈಸೂರು ಜಿಪಂ

ಮೈಸೂರು,ಏ.16(ಪಿಎಂ)– ಕುಡಿಯುವ ನೀರಿನ ಅಭಾವ ಉಂಟಾದಲ್ಲಿ ಶೀಘ್ರದಲ್ಲಿ ಕ್ರಮ ವಹಿಸಲು ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಜಲಸೇವಾ ನಿಯಂತ್ರಣ ಕೊಠಡಿ ತೆರೆದಿದ್ದು, ಸಹಾಯವಾಣಿ ವ್ಯವಸ್ಥೆ ಸಹ ಮಾಡಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತದ ಬೇಸಿಗೆಯಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಂಭವವಿರುವ ಹಿನ್ನೆಲೆಯಲ್ಲಿ ಸಹಾಯವಾಣಿ ಆರಂಭಿಸಲಾಗಿದೆ. ಆ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕ್ರಮ ವಹಿಸಲಾಗಿದ್ದು, ಜಿಲ್ಲೆಯ ಸಾರ್ವಜನಿಕರು ಸಹಾಯವಾಣಿ ದೂ.ಸಂ. 0821–2526344ಗೆ ಕರೆ ಮಾಡಿ ಕುಡಿಯುವ ನೀರಿನ ಸಮಸ್ಯೆ ಎದುರಾದಲ್ಲಿ ಮಾಹಿತಿ ನೀಡಿ ಬಗೆಹರಿಸಿಕೊಳ್ಳಬಹುದು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ಮೋಡಿಗೆ ಮರುಳಾದ ಹಿರಿಯ ನಾಗರಿಕರಿಗೆ 12 ಲಕ್ಷ ವಂಚನೆ

ಸೆನ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು,ಏ.16(ಪಿಎಂ)–ಫೇಸ್‌ಬುಕ್‌ನಲ್ಲಿ ಬಂದ ಆನ್‌ಲೈನ್ ಹೂಡಿಕೆ ವಿಡಿಯೋ ನಂಬಿ ಹಣ ಹೂಡಿಕೆ ಮಾಡಿದ ಹಿರಿಯ ನಾಗರಿಕರೊಬ್ಬರು 12 ಲಕ್ಷ ರೂ. ಕಳೆದುಕೊಂಡ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ವಿದ್ಯಾರಣ್ಯಪುರಂನ 60 ವರ್ಷದ ಪುರುಷರೊಬ್ಬರು ಹೀಗೆ ಮೋಸ ಹೋದವರು. ಫೆ.28ರಂದು ಫೇಸ್‌ಬುಕ್‌ನಲ್ಲಿ ಆನ್‌ಲೈನ್ ಹೂಡಿಕೆ ಕುರಿತ ವಿಡಿಯೋ ಬಂದಿತು. ಹೂಡಿಕೆಯಿಂದ ಪ್ರತಿ ತಿಂಗಳು ಹೆಚ್ಚು ಲಾಭ ಗಳಿಸಬಹುದೆಂಬ ಸಂದೇಶ ಅದರಲ್ಲಿತ್ತು. ಇದನ್ನು ನಂಬಿ ಸದರಿ ವಿಡಿಯೋ ಕೆಳಗೆ ಇದ್ದ ರಿಜಿಸ್ಟರ್ ಲಿಂಕ್ ಕ್ಲಿಕ್ ಮಾಡಿದೆ. ಆಗ ಮೊಬೈಲ್ ಸಂಬರ್ ಸೇರಿದಂತೆ ಎಲ್ಲಾ ಮಾಹಿತಿಯೊಂದಿಗೆ ರಿಜಿಸ್ಟರ್ ಆಯಿತು.

ನಂತರ ಮೊಬೈಲ್ ಸಂಖ್ಯೆಯೊಂದರಿಂದ ವಾಟ್ಸಪ್ ಕರೆ ಮಾಡಿ ಫೈನಾನ್ಸಿಯಲ್ ಅಡ್ವೈಸರ್ ಎಂದು ಪರಿಚಯಿಸಿಕೊಂಡ ವ್ಯಕ್ತಿಯೊಬ್ಬ ಹೇಳಿದಂತೆ ಬ್ಯಾಂಕ್ ಖಾತೆಯಿಂದ ಮಾ.20ರಿಂದ ಏ.13ರವರೆಗೆ ವಿವಿಧ ಖಾತೆಗಳಿಗೆ ಒಟ್ಟಾರೆ 12,02,930 ರೂ. ವರ್ಗಾವಣೆ ಮಾಡಿ ಮೋಸ ಹೋಗಿರುವುದಾಗಿ ಸದರಿ ಹಿರಿಯ ನಾಗರಿಕರು ನೀಡಿದ ದೂರಿನನ್ವಯ ಏ.15ರಂದು ಎಫ್‌ಐಆರ್ ದಾಖಲಾಗಿದೆ.

ಕೇರಳಂಗೆ ಸಾಗಿಸುತ್ತಿದ್ದ ಎಮ್ಮೆ, ಕೋಣಗಳ ರಕ್ಷಣೆ

ಮೈಸೂರು, ಏ.16(ವಿವಿಹೆಚ್)– ಈಚರ್ ವಾಹನದಲ್ಲಿ ಕೇರಳಂನ ಕಸಾಯಿ ಖಾನೆಗೆ ಅಕ್ರಮವಾಗಿ ಸಾಗಿಸುತ್ತಿದ್ದ 23 ಜಾನುವಾರುಗಳನ್ನು ಮೈಸೂರು ದಕ್ಷಿಣ ಠಾಣೆ ಪೊಲೀಸರು ರಕ್ಷಿಸಿ, ಚಾಲಕನನ್ನು ಬಂಧಿಸಿದ್ದಾರೆ. ಉತ್ತನಹಳ್ಳಿ ಬಳಿ ರಿಂಗ್ ರಸ್ತೆಯಲ್ಲಿ ನಂಜನಗೂಡು ಕಡೆಗೆ ಜಾನುವಾರುಗಳನ್ನು ಸಾಗಿಸಲಾಗುತ್ತಿದೆ ಎಂದು ಏ.11ರ ಬೆಳಗಿನ ಜಾವ 4 ಗಂಟೆಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಪೊಲೀಸರು ತಕ್ಷಣ ಕಾರ್ಯೋನ್ಮುಖರಾಗಿದ್ದಾರೆ. ನಗರದ ಎಪಿಎಂಸಿ ಮಾರುಕಟ್ಟೆ ಬಳಿ ತೆರಳುತ್ತಿದ್ದ ಈಚರ್(ಕೆಎ–18, ಡಿ–0656) ವಾಹನವನ್ನು ತಡೆದು ನಿಲ್ಲಿಸಿದಾಕ್ಷಣ ಚಾಲಕ ಪರಾರಿಯಾಗಲು ಯತ್ನಿಸಿದ್ದಾನೆ. ಈ ವೇಳೆ ಪೊಲೀಸರು ಆತನ ಬೆನ್ನತ್ತಿ ಹಿಡಿದು ವಿಚಾರಣೆ ನಡೆಸಿ, ವಾಹನ ಪರಿಶೀಲಿಸಿದಾಗ ಅದರಲ್ಲಿ 9 ಕೋಣ ಹಾಗೂ 14 ಎಮ್ಮೆಗಳು ಪತ್ತೆಯಾಗಿವೆ. ಈ ಬಗ್ಗೆ ವಿಚಾರಿಸಿದಾಗ ತನ್ನ ಹೆಸರು ಮೊಹಮ್ಮದ್ ಹುಸೇನ್ ಎಂದು, ಮಂಡ್ಯ ಜಿಲ್ಲೆಯ ಕಿರಣ್ ಎಮ್ಮೆಗಳನ್ನು ತುಂಬಿಸಿ, ಕೇರಳಂನ ಕಸಾಯಿ ಖಾನೆಗೆ ಸಾಗಿಸುವಂತೆ ಸೂಚಿಸಿದ್ದಾಗಿ ತಿಳಿಸಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ.

ಕೆಆರ್‌ಎಸ್ ಜಲಾಶಯದ ನೀರು 100 ಅಡಿಗೆ ಕುಸಿತ



ಕಬಿನಿ ಜಲಾಶಯದ ಮಟ್ಟವೂ 2,261 ಅಡಿಗೆ ಇಳಿಕೆ

● ಒಳ ಹರಿವು ಬಹುತೇಕ ಸ್ಥಗಿತ ● ಇನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ನೀರು ಪೂರೈಕೆ ● ಎರಡೂ ಅಣೆಕಟ್ಟೆನಿಂದ 340 ಎಂಎಲ್‌ಡಿ ನೀರು ಸರಬರಾಜು ● ಮೇ ತಿಂಗಳಲ್ಲಿ ಮುಂಗಾರು ಆರಂಭ ಸಾಧ್ಯತೆ

ಸದ್ಯಕ್ಕೆ ಮೈಸೂರಿಗೆ ಕುಡಿಯುವ ನೀರಿನ ಸಮಸ್ಯೆ ಇಲ್ಲ...

"ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ನೂರು ಅಡಿಗೆ ಕುಸಿದರೂ, ಕಬಿನಿ ಜಲಾಶಯದಲ್ಲಿ 2,261 ಅಡಿಗೆ ಇಳಿದರೂ ಮೈಸೂರು ನಗರದಲ್ಲಿ ಕುಡಿ ಯುವ ನೀರಿಗೆ ಯಾವುದೇ ಸಮಸ್ಯೆ ಇಲ್ಲ. ಕೆಆರ್‌ಎಸ್ ಜಲಾಶಯದಲ್ಲಿ 70 ಅಡಿವರೆಗೆ ನೀರು ಸರಬರಾಜು ಮಾಡಬಹುದು. ಮುಂದಿನ ತಿಂಗಳಲ್ಲಿ ಮುಂಗಾರು ಆರಂಭವಾಗಿ, ಜಲಾಶಯ ಭರ್ತಿಯಾಗಬಹುದು. ಮೈಸೂರು ನಗರಕ್ಕೆ ಕೆಆರ್‌ಎಸ್ ಜಲಾಶಯದಿಂದ 240 ಎಂಎಲ್‌ಡಿ, ಕಬಿನಿ ಜಲಾಶಯದಿಂದ 100 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದೆ. ಸಾಮಾನ್ಯವಾಗಿ ಬೇಸಿಗೆ ವೇಳೆ ಕುಡಿಯುವ ನೀರು ಹೆಚ್ಚಾಗಿ ಬಳಕೆಯಾಗುತ್ತದೆ. ಆದರೂ ಎರಡು ಅಣೆಕಟ್ಟೆನಲ್ಲಿ ಅಗತ್ಯ ನೀರಿನ ಸಂಗ್ರಹ ಇರುವ ಕಾರಣ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ.

-ಅಶ್ವಿನ್, ಎಕ್ಸಿಕ್ಯೂಟಿವ್ ಇಂಜಿನಿಯರ್, ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರ, ಮೈಸೂರು.

ಮೈಸೂರು, ಏ.16(ಬಿಎಲ್‌ಯು)– ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ನೀರಿನ ಮಟ್ಟ ನೂರು ಅಡಿಗೆ ಕುಸಿದಿದೆ. ಹಾಗೆಯೇ ಮೈಸೂರಿಗೆ ಕುಡಿಯುವ ನೀರು ಸರಬರಾಜು ಮಾಡುವ ಮತ್ತೊಂದು ಜಲಾಶಯ ಕಬಿನಿ ಅಣೆಕಟ್ಟೆನ ನೀರಿನ ಮಟ್ಟ 2,261 ಅಡಿಗೆ ಇಳಿದಿದೆ.

ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದ ನೀರಿನ ಮಟ್ಟ ಕುಸಿಯುತ್ತಿದ್ದರೂ ಸದ್ಯಕ್ಕೆ ಮೈಸೂರು ನಗರಕ್ಕೆ ಕುಡಿಯುವ ನೀರಿಗೆ ಯಾವುದೇ ತೊಂದರೆ ಇಲ್ಲ. ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 70 ಅಡಿಗೆ ಕುಸಿದರೂ ನೀರು ಸರಬರಾಜು ಮಾಡಬಹುದು. ಅದಕ್ಕಿಂತ ಕೆಳಗೆ ಇಳಿದರೆ ಸಮಸ್ಯೆ ಎದುರಾಗಲಿದೆ. ಅಂದರೆ ಜಲಾಶಯದಲ್ಲಿ ಇನ್ನು 30 ಅಡಿ ಹೆಚ್ಚು ನೀರು ಇದ್ದು, ಸದ್ಯಕ್ಕೆ ಕುಡಿಯುವ ನೀರಿಗೆ ತೊಂದರೆ ಆಗುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಮಳೆಯಾದರೆ ಕೆಆರ್‌ಎಸ್ ಜಲಾಶಯ ತುಂಬುತ್ತದೆ, ಹಾಗೆಯೇ ಕೇರಳದ ವೈನಾಡು ಪ್ರದೇಶದಲ್ಲಿ ವರುಣ ಆರ್ಭಟಿಸಿದರೆ ಕಬಿನಿ ಜಲಾಶಯ ಭರ್ತಿಯಾಗುತ್ತದೆ. ಆದರೆ ಮಳೆಗಾಲ ಇನ್ನು ಆರಂಭವಾಗದ ಹಿನ್ನೆಲೆಯಲ್ಲಿ ದಿನೆ ದಿನೇ ಎರಡು ಜಲಾಶಯದ ನೀರಿನ ಮಟ್ಟ ಕುಸಿಯುತ್ತಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 100.96 ಅಡಿಗಳಾಗಿದೆ. ಅಣೆಕಟ್ಟೆಯ ಗರಿಷ್ಠ ನೀರು ಸಂಗ್ರಹ 49.452 ಟಿಎಂಸಿಗಳಾಗಿದ್ದು, ಇಂದು ಅಣೆಕಟ್ಟೆಯಲ್ಲಿ 23.571 ಟಿಎಂಸಿ ನೀರಿದೆ.

ಜಲಾಶಯಕ್ಕೆ 74 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಕುಡಿಯುವ ನೀರಿಗಾಗಿ ಜಲಾಶಯದಿಂದ 4033 ಕ್ಯುಸೆಕ್ ನೀರನ್ನು ಹೊರಗೆ ಬಿಡಲಾಗುತ್ತಿದೆ.

ಕಳೆದ ವರ್ಷ ಇದೇ ದಿನದಂದು ಕೆಆರ್‌ಎಸ್ ಜಲಾಶಯದಲ್ಲಿ 101.35 ಅಡಿ ನೀರಿತ್ತು, ಆದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಒಂದು ಅಡಿ ಕಡಿಮೆಯಾಗಿದೆ. ಆದರೆ 2024ರಲ್ಲಿ ಕೆಆರ್‌ಎಸ್ ಜಲಾಶಯದಲ್ಲಿ 83.22 ಅಡಿ ನೀರಿತ್ತು. ಆದರೆ ಈ ವರ್ಷ ಈ ದಿನಕ್ಕೆ 100 ಅಡಿಗೆ ಕುಸಿದಿದೆ.


ಕಬಿನಿ ಜಲಾಶಯ: ಮೈಸೂರಿನ ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದೆ. ಆದರೆ ಇಂದು 2,261 ಅಡಿಗೆ ಕುಸಿದಿದೆ. ಜಲಾಶಯದ ಗರಿಷ್ಠ ಮಟ್ಟ 19.52 ಟಿಎಂಸಿಗಳಾಗಿದ್ದು, ಇಂದಿನ ಮಟ್ಟ 7.73 ಟಿಎಂಸಿ ನೀರು ಸಂಗ್ರಹವಿದೆ. ಜಲಾಶಯಕ್ಕೆ ಕೇವಲ 88 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 1,200 ಕ್ಯುಸೆಕ್ ನೀರನ್ನು ಹೊರಗೆ ಬಿಡಲಾಗುತ್ತಿದೆ.

ಕಬಿನಿ ಜಲಾಶಯದಲ್ಲಿ ಕಳೆದ ವರ್ಷ ಇದೇ ದಿನದಂದು 2,266 ಅಡಿ ನೀರಿತ್ತು, 2024 ರಲ್ಲಿ 2,262 ಅಡಿ ನೀರಿತ್ತು. ಆದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 5 ಅಡಿಗೆ ಕುಸಿದಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೆಂಡದ ಸೆರಗು (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಭೂತ್ ಬಂಗ್ಲಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಲವ್ ಮಾಕ್‌ಟೇಲ್–3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಮಿ. ಎಕ್ಸ್ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಬೆಂಗಳೂರು ಇನ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕೆಂಡದ ಸೆರಗು (ಕ) + ಕ್ಯಾಲೆಂಡರ್ (ಕ)	2+2 ಪ್ರದರ್ಶನಗಳು

ಬಸವ ಜಯಂತಿಗೆ ಆಹ್ವಾನ



'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಅವರಿಗೆ ಬಸವ ಬಳಗಗಳ ಒಕ್ಕೂಟದ ವತಿಯಿಂದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಆಯರಹಳ್ಳಿ ಪಿ.ವಿರೂಪಾಕ್ಷ ಹಾಗೂ ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್, ಬಸವ ಜಯಂತಿ ಆಹ್ವಾನ ಪತ್ರಿಕೆ ನೀಡಿ, ಸಮಾರಂಭಕ್ಕೆ ಆಹ್ವಾನಿಸಿದರು.

ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ



ಕೆ.ಪ್ರಕಾಶ್ ಚಂದನ ಕೀರ್ತನಾ ಅಮೂಲ್ಯ ಮನ್ವಿತ ಶಶಿಕಿರಣ್

ಮೈಸೂರು, ಏ.16– ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜು, ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.94.11ರಷ್ಟು ಫಲಿತಾಂಶ ಪಡೆದಿದೆ.

ಪರೀಕ್ಷೆಗೆ ಹಾಜರಾಗಿದ್ದ 223 ವಿದ್ಯಾರ್ಥಿಗಳಲ್ಲಿ 47 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ ಕೆ.ಪ್ರಕಾಶ್(542 ಅಂಕ), ಚಂದನ(532), ವಾಣಿಜ್ಯ ವಿಭಾಗದ ಬಿ.ಕೀರ್ತನಾ(563), ಜಿ.ಆರ್.ಅಮೂಲ್ಯ(562) ಹಾಗೂ ವಿಜ್ಞಾನ ವಿಭಾಗದಲ್ಲಿ ಬಚು ಮನ್ವಿತ(556) ಹಾಗೂ ಶಶಿಕಿರಣ್(544) ಅತೀ ಹೆಚ್ಚು ಅಂಕ ಗಳಿಸಿದ್ದಾರೆ. ಎಂದು ಪ್ರಾಂಶುಪಾಲರಾದ ವೆಂಕಟೇಶ್ ತಿಳಿಸಿದ್ದಾರೆ.

ಏ.23 ರಂದು ಬೃಹತ್ ಉದ್ಯೋಗ ಮೇಳ

ಮೈಸೂರು, ಏ.16–ಮೀಡಿಯಾ ಟಿವಿ ವತಿಯಿಂದ ಬೃಹತ್ ಉದ್ಯೋಗ ಮೇಳವನ್ನು ಏ.23ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಕಾಮಾಕ್ಷಿ ಆಸ್ಪತ್ರೆ ಎದುರಿನ ರೋಟರಿ ಸಭಾಂಗಣದಲ್ಲಿ ಬೆಳಗ್ಗೆ 9.30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಏರ್ಪಡಿಸಲಾಗಿದೆ. ಉದ್ಯೋಗ ಮೇಳದಲ್ಲಿ ಸುಮಾರು ನೂರು ವಿವಿಧ ಕಂಪನಿಗಳು ಭಾಗವಹಿಸಲಿವೆ. 8ನೇ ತರಗತಿ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಭಾಗವಹಿಸಬಹುದು. ಆಸಕ್ತರು ಮೊ.7337888444, 7337666444 ಮೂಲಕ ತಮ್ಮ ಹೆಸರು ನೋಂದಾಯಿಸಬೇಕು ಎಂದು ಪ್ರಕಟಣೆ ಕೋರಿದೆ.

ಶುಭಾಶಯ



ಎಂ.ಕುಮಾರ್ ಮಾದೇಗೌಡ ಅವರು ಹುಟ್ಟುಹಬ್ಬ ಆಚರಿಸಿಕೊಂಡ ಸಂದರ್ಭದಲ್ಲಿ ಪಡುವಾರಹಳ್ಳಿ ಯಜಮಾನ ತಿಮ್ಮೇಗೌಡ್ರು, ಡಾ.ಲೋಕೇಶ್, ಫಾಲ್ಕನ್ ಮಾದೇಗೌಡ, ಮಂಜಪ್ಪ, ಗುರುದತ್ತ, ರಾಜಣ್ಣ, ಗಿರೀಶ್, ದೇವೇಗೌಡ, ನಿಂಗರಾಜ್, ದಿನೇಶ್, ಮಧು ಒಂಟಿಕೊಪ್ಪಲ್, ದೇವೇಗೌಡ, ಗೋಪಾಲಣ್ಣ, ರಾಕೇಶ್, ಚಂದ್ರಹಾಸ, ನಿಂಗರಾಜೇ ಗೌಡ, ಶಿವಕುಮಾರ್, ಕಿಶೋರ್ ಕುಮಾರ್, ರಾಕೇಶ್ ಅಭಿನಂದಿಸಿ, ಶುಭಾಶಯ ಕೋರಿದರು

ಮುಂಗಾರು ಕೊರತೆ ಹಿನ್ನೆಲೆ

ಕುಡಿಯುವ ನೀರಿಗೆ ಜಿಲ್ಲಾಧಿಕಾರಿಗಳೇ ಹೊಣೆ!

● ಜಿಲ್ಲಾಧಿಕಾರಿಗಳು, ಜಿಪಂ ಸಿಇಓಗಳ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ
● ಆಗಸ್ಟ್‌ನಲ್ಲಿ ವಾಡಿಕೆ ಮಳೆ; ಸೆಪ್ಟೆಂಬರ್‌ನಲ್ಲಿ ಕೊರತೆ ಸಾಧ್ಯತೆ

ಬೆಂಗಳೂರು, ಏ.16(ಕೆಎಂಶಿ)– ರಾಜ್ಯದ ಐದು ಜಿಲ್ಲೆಗಳ ಹೊರತುಪಡಿಸಿ ಬೇರೆ ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗರುಕತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.



ಇಂದು ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧ ಸಭಾಂಗಣದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತಾಗಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಸಭೆ ಜರುಗಿತು.

ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್ ತಿಂಗಳಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ.

ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಜಿಲ್ಲಾಧಿಕಾರಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚಿಸಿದರು.

ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಟ್ಯಾಂಕರ್‌ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಇದರ ಮೂಲಕ 515ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು.

ಕಲಬುರಗಿ ಜಿಲ್ಲೆಯ 147 ಗ್ರಾಮ ಪಂಚಾಯತ್, ಬಾಗಲಕೋಟೆ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯ 130, ತುಮಕೂರಿನ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಪ್ರಸ್ತುತ 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಒಟ್ಟು 145 ವಾರ್ಡ್‌ಗಳಿಗೆ 57 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದ್ದು, ಬಾಡಿಗೆಗೆ 22 ಕೊಳವೆ ಬಾವಿಗಳನ್ನು ಪಡೆಯಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.


ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ 321.93 ಟಿ.ಎಂ.ಸಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ.36ರಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿ.ಎಂ.ಸಿ ನೀರು ಲಭ್ಯವಿತ್ತು. ಪ್ರಸುತ ಕುಡಿಯುವ ನೀರಿಗೆ ಜಲಾಶಯಗಳಲ್ಲಿ ಲಭ್ಯವಿದೆ.

ರಸಗೊಬ್ಬರ ಲಭ್ಯತೆ: ಮಧ್ಯಪ್ರಾಚ್ಯದಲ್ಲಿನ ಯುದ್ಧದ ಪರಿಸ್ಥಿತಿಯಿಂದಾಗಿ ಈ ಬಾರಿ ರಸಗೊಬ್ಬರ ಪೂರೈಕೆಯಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ವ್ಯಾಪಾರಿಗಳು ರಸಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ದಾಸ್ತಾನು ಇರಿಸುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು.

ರೈತರಿಗೆ ಸೂಕ್ತ ಸಮಯದಲ್ಲಿ ರಸಗೊಬ್ಬರ ಲಭ್ಯತೆಯನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಬೇಕು. ಯೂರಿಯಾ, ಡಿಎಪಿ ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಬೇರೆ ರಾಜ್ಯಗಳಿಗೆ ರಸಗೊಬ್ಬರ ಸಾಗಾಟ ಮಾಡುವುದನ್ನು ನಿಯಂತ್ರಿಸಬೇಕು. ಇದಕ್ಕಾಗಿ ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆಯನ್ನು ಬಿಗಿಗೊಳಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ರಘು ಕೌಟಿಲ್ಯ ಅವರ 'ಭೂಮಿ ಪುತ್ರಿ' ಎರಡನೇ ಆವೃತಿ ನಾಳೆ ಬಿಡುಗಡೆ

ಮೈಸೂರು, ಏ.16– ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ಹಾಗೂ ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ರಘು(ಕೌಟಿಲ್ಯ) ಅವರು ತಮ್ಮ ಧರ್ಮಪತ್ನಿ ದಿವಂಗತ ನಿರ್ಮಲ ಅವರನ್ನು ಕುರಿತು ರಚಿಸಿರುವ 'ಭೂಮಿ ಪುತ್ರಿ' ಕೃತಿಯ ಎರಡನೇ ಆವೃತಿ ಬಿಡುಗಡೆಗೆ ಸಿದ್ಧವಾಗಿದೆ.



ಮೈಸೂರು–ನಂಜನಗೂಡು ರಸ್ತೆ ಟೋಲ್ ಸಮೀಪವಿರುವ ನಿರ್ಮಲಧಾಮದಲ್ಲಿ ಏ.18ರಂದು ಸಂಜೆ 5ಕ್ಕೆ ಆಯೋಜಿಸಿರುವ ಸಮಾರಂಭದಲ್ಲಿ ಖ್ಯಾತ ಗಾಯಕಿ ಶ್ರೀಮತಿ ಶುಭಾ ರಾಘವೇಂದ್ರ ಅವರು ಕೃತಿ ಬಿಡುಗಡೆ ಮಾಡಲಿದ್ದಾರೆ. ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಖ್ಯಾತ ಅಂಕಣಕಾರ ಹಾಗೂ ಸಂಸ್ಕೃತಿ ಚಿಂತಕ ಡಾ.ಗುಬ್ಬಿಗೂಡು ರಮೇಶ್ ಕೃತಿ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮದ ವಿಶೇಷವಾಗಿ ಪ್ರೇಮಕವಿ ಕೆ.ಎಸ್.ನರಸಿಂಹಸ್ವಾಮಿ ಅವರ 'ನಿನ್ನೊಲುಮೆ ಅರಮನೆಗೆ' ಗೀತೆಯನ್ನು ವಿದುಷಿ ಡಾ.ಶಾಂಭವಿ ಸ್ವಾಮಿ ಅವರ ನಿರ್ದೇಶನದಲ್ಲಿ ಆಯಾಮ ಅಕಾಡೆಮಿ ವಿದ್ಯಾರ್ಥಿಗಳು 'ಕಾವ್ಯ–ನೃತ್ಯ ರೂಪಕ'ವಾಗಿ ಪ್ರಸ್ತುತಪಡಿಸಲಿದ್ದಾರೆ. ಆರ್.ತನುಶ್ರೀ ಕಾರ್ಯಕ್ರಮ ನಿರೂಪಿಸಲಿದ್ದಾರೆ.

ಬಸವ ಜಯಂತಿ ಆಹ್ವಾನ ಪತ್ರಿಕೆ, ಪ್ರಚಾರದ ಪೋಸ್ಟರ್ ಬಿಡುಗಡೆ



ಮೈಸೂರಿನಲ್ಲಿ ಎರಡು ದಿನ ನಡೆಯಲಿರುವ ಬಸವ ಜಯಂತಿ ಸಮಾರಂಭದ ಆಹ್ವಾನ ಪತ್ರಿಕೆ ಹಾಗೂ ಪ್ರಚಾರದ ಪೋಸ್ಟರ್ ಅನ್ನು ವಿವಿಧ ಮಠಗಳ ಶ್ರೀಗಳ ಸಮ್ಮುಖದಲ್ಲಿ ಬಸವ ಬಳಗಗಳ ಒಕ್ಕೂಟದ ವತಿಯಿಂದ ಬಿಡುಗಡೆ ಮಾಡಲಾಯಿತು.

ಮೈಸೂರು, ಏ.16– ಮೈಸೂರಿನಲ್ಲಿ ಅದ್ಧೂರಿಯಾಗಿ ಆಚರಿಸಲು ಉದ್ದೇಶಿರುವ ಬಸವ ಜಯಂತಿ ಸಮಾರಂಭದ ಆಹ್ವಾನ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ನಗರದ ನಟರಾಜ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ದಂಡಿಕೆರೆ ಮಠದ ಶ್ರೀ ಬಸವಲಿಂಗ ಸ್ವಾಮೀಜಿ ಸೇರಿದಂತೆ ವಿವಿಧ ಮಠಗಳ ಶ್ರೀಗಳ ಸಮ್ಮುಖದಲ್ಲಿ, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಆಯರಹಳ್ಳಿ ಪಿ.ವಿರೂಪಾಕ್ಷ, ಪ್ರಧಾನ ಸಂಚಾಲಕರಾದ ದೇವರಾಜು ಪಿ. ಚಿಕ್ಕಹಳ್ಳಿ, ಕೋಶಾಧ್ಯಕ್ಷರಾದ ಜಿ.ಮಾರಹಳ್ಳಿ ಜಯಶಂಕರ್, ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ. ಮಲ್ಲೇಶ್, ಪುಟ್ಟರಾಜಪ್ಪ, ಶರಣ ಮಹದೇವಪ್ಪ ಅವರ ನೇತೃತ್ವದಲ್ಲಿ ಏ.19 ಹಾಗೂ 20ರಂದು ನಡೆಯಲಿರುವ ಬಸವ ಜಯಂತಿ ಸಮಾರಂಭದ ಆಹ್ವಾನ ಪತ್ರಿಕೆ ಹಾಗೂ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ಈ ವೇಳೆ ಬಸವಣ್ಣನವರ ಆದರ್ಶಗಳಿಗೆ ಅನುಗುಣವಾಗಿ ಈ ಬಾರಿಯ ಬಸವ ಜಯಂತಿಯನ್ನು ವೈಶಿಷ್ಟ್ಯಪೂರ್ಣ ಹಾಗೂ ತುಂಬಾ ಅಚ್ಚುಕಟ್ಟಾಗಿ ನಡೆಸುವ ಮೂಲಕ ಎಲ್ಲರ ಮೆಚ್ಚುಗೆ ಪಡೆಯಬೇಕು ಎಂದು ಕುದೇರು ಹಾಗೂ ದಂಡಿಕೆರೆ ಶ್ರೀದ್ವಯರು ಮಾರ್ಗದರ್ಶನ ಮಾಡಿದರು.

ಬಳಿಕ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಕಾರ್ಯಕ್ರಮದ ರೂಪುರೇಷೆ ಬಗ್ಗೆ ವಿವರಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು. ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್ ಅಭಿಪ್ರಾಯ ಹಂಚಿಕೊಂಡು, ಬಸವ ಜಯಂತಿ ಯಶಸ್ವಿಗೆ ಪ್ರತಿಯೊಬ್ಬರ ಸಹಕಾರ ಮುಖ್ಯ ಎಂದರು. ಮೈಸೂರು ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಲೋಹಿತ್ ದೊರೆಸ್ವಾಮಿ ಹಾಗೂ ಸಾಮಾಜಿಕ ಮಾಧ್ಯಮ ಸಮಿತಿ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್ ಪ್ರಚಾರ ಕಾರ್ಯದ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಮಹೇಂದ್ರ ಶೈವ, ಕುಮಾರಸ್ವಾಮಿ, ಬಿ.ಆರ್.ಶಿವಕುಮಾರ್, ಡಾ.ಮಹದೇವಪ್ಪ, ಆಟೋ ಮಹೇಶ್, ಮಲ್ಲೇಶ್ ಮಲ್ಲ, ಎಸ್‌ಆರ್‌ಎಸ್ ಶಿವಕುಮಾರ್, ಎಸ್‌ಬಿಟಿ ಸುರೇಶ್, ಬಾಗಳಿ ಮಹೇಶ್, ಕಾವಿ ಬಸಪ್ಪ, ಡಿ.ಪಿ.ಸುರೇಶ್, ಗಜೇಂದ್ರ, ಕೆ.ಎಸ್.ಪ್ರಕಾಶ್, ದೇವಲಾಪುರ ಕಿಶೋರ್, ಸಂತೋಷ್, ಶಿವಪ್ರಕಾಶ್, ಪಾಲು ಅರಸ್, ಗಿರೀಶ್ ಮಾರ್ಬಳ್ಳಿ, ಬೀರಿಹುಂಡಿ ಸೋಮಶೇಖರ್, ಗೆಜ್ಜಗಳ್ಳಿ ನಂಜಪ್ಪ, ಗುರೂರು ಮಲ್ಲೇಶ್, ಶಿವಮಣಿ ವಿರುಪಾಕ್ಷ, ವನಜಾ ನಾಗರಾಜ್, ದನ್ಯ, ಸತ್ಯೇಂದ್ರ ಮೂರ್ತಿ, ಮಲ್ಲಿಕಾ ಮಹದೇವಸ್ವಾಮಿ, ರಾಜೇಶ್ವರಿ, ಕಾಡಸೂರು ರಾಜಣ್ಣ, ವೃಷಬೇಂದ್ರ, ವೈಟ್ ನವೀನ್, ಮಹದೇವ ಪ್ರಸಾದ್, ಜಿ.ಎಸ್. ಕಿಶೋರ್, ಮಹದೇವು ಸೇರಿದಂತೆ ಸಮಾಜದ ಅನೇಕ ಮುಖಂಡರು ಉಪಸ್ಥಿತರಿದ್ದರು.

ಅಂಕೋಲಾ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಥನಾಲ್ ಟ್ಯಾಂಕರ್ ಸ್ಫೋಟ; ಸಂಚಾರ ಸ್ಥಗಿತ

ಅಂಕೋಲಾ: ತಾಲೂಕಿನ ಕಂಚಿನಬಾಗಿಲು ಸಮೀಪ ರಾಷ್ಟ್ರೀಯ ಹೆದ್ದಾರಿ–52ರಲ್ಲಿ ಗುರುವಾರ ಎಥನಾಲ್ ದ್ರಾವಣ ತುಂಬಿಕೊಂಡು ಬೆಳಗಾವಿಯಿಂದ ಮಂಗಳೂರಿನತ್ತ ಸಾಗುತ್ತಿದ್ದ ಟ್ಯಾಂಕರ್ ಉರುಳಿ ಬಿದ್ದ ಪರಿಣಾಮ ಸ್ಫೋಟಗೊಂಡು, ಬೆಂಕಿ ಅವಘಡ ಸಂಭವಿಸಿ ಸುಟ್ಟು ಕರಕಲಾದ ಘಟನೆ ನಡೆದಿದೆ.

ಸ್ಫೋಟದ ತೀವ್ರತೆಗೆ ಟ್ಯಾಂಕರ್‌ನಲ್ಲಿ ಭಾರೀ ಬೆಂಕಿ ಕಾಣಿಸಿಕೊಂಡಿದ್ದು, ಚಾಲಕನಿಗೂ ಬೆಂಕಿ ತಗುಲಿ ಗಾಯಗೊಂಡಿದ್ದು, ತಕ್ಷಣವೇ ಅವರನ್ನು ಅಂಕೋಲಾ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಕಾರವಾರ ಕ್ರಿಮ್ಸ್‌ಗೆ ದಾಖಲಿಸಲಾಗಿದೆ. ಟ್ಯಾಂಕರ್‌ನಲ್ಲಿದ್ದ ಕ್ಲೀನರ್ ನಾಪತ್ತೆಯಾಗಿದ್ದಾನೆ. ಸ್ಫೋಟದ ಪರಿಣಾಮ ಟ್ಯಾಂಕರ್ ಸಂಪೂರ್ಣವಾಗಿ ಹೊತ್ತಿ ಉರಿದಿದೆ. ಬೆಂಕಿಯ ತೀವ್ರತೆಯಿಂದಾಗಿ ಸ್ಥಳಕ್ಕೆ ಹತ್ತಿರ ಹೋಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಟ್ಯಾಂಕರ್ ಸ್ಫೋಟಗೊಂಡ ತಕ್ಷಣ ಸುತ್ತಮುತ್ತಲಿನ ಮರ–ಗಿಡಗಳಿಗೂ ಬೆಂಕಿ ವ್ಯಾಪಿಸಿದ್ದು, ಪರಿಸ್ಥಿತಿ ಗಂಭೀರವಾಗಿತ್ತು ಮಾಹಿತಿ ಪಡೆದ ತಕ್ಷಣ ಅಂಕೋಲಾ ತಾಲೂಕಿನ ಅಗ್ನಿಶಾಮಕದಳ, ಕಾರವಾರದ ಅಗ್ನಿಶಾಮಕ ದಳ ಸಿಬ್ಬಂದಿ ಹಾಗೂ ಐಎನ್‌ಎಸ್ ವಜ್ರಕೋಶದ ಅಗ್ನಿಶಾಮಕ ದಳ ಸ್ಥಳಕ್ಕೆ ದೌಡಾಯಿಸಿ, ಬೆಂಕಿ ನಂದಿಸಲು ಹರಸಾಹಸ ಪಟ್ಟರು.

ಘಟನಾ ಸ್ಥಳಕ್ಕೆ ಅಂಕೋಲಾ ತಹಶೀಲ್ದಾರ್ ನೋರೊನಾ ಹಾಗೂ ಡಿವೈಎಸ್ಪಿ ಗಿರೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಗತ್ಯ ಕ್ರಮಗಳನ್ನು ಕೈಗೊಂಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಹೆಚ್ಚಿನ ತನಿಖೆ ನಡೆಯುತ್ತಿದೆ.

ಮಂತ್ರಾಲಯ ಬಳಿ ಅಪಘಾತ: ಚಿಕ್ಕಮಗಳೂರಿನ 8 ಮಂದಿ ಭಕ್ತರ ದುರ್ಮರಣ

ರಾಯಚೂರು: ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಚಿಕ್ಕಮಗಳೂರು ಮೂಲದ ಎಂಟು ಭಕ್ತರು ಮೃತಪಟ್ಟಿದ್ದಾರೆ. ರಾಯರ ದರ್ಶನಕ್ಕೆ ಬೊಲೆರೋ ವಾಹನದಲ್ಲಿ ತೆರಳುತ್ತಿದ್ದಾಗ ಸಿಮೆಂಟ್ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ. ಚಿಕ್ಕಮಗಳೂರು ಮೂಲದ ಭಕ್ತರು ರಾಯರ ದರ್ಶನಕ್ಕೆ ಆಗಮಿಸುತ್ತಿದ್ದರು. ಈ ವೇಳೆ ಮಾರ್ಗ ಮಧ್ಯೆ ಬೊಲೆರೋ ವಾಹನಕ್ಕೆ ಸಿಮೆಂಟ್ ಮತ್ತು ಜಲ್ಲಿಕಲ್ಲು ಟ್ಯಾಂಕರ್ ಡಿಕ್ಕಿ ಹೊಡೆದಿದೆ. ಬೊಲೆರೋ ವಾಹನದಲ್ಲಿ ಒಟ್ಟು 21 ಜನರು ಪ್ರಯಾಣಿಸುತ್ತಿದ್ದರು ಎಂದು ತಿಳಿದು ಬಂದಿದೆ. ಅಮೃತ, ತೇಜಸ್ವಿನಿ, ಧನ್ಯ, ದೀಪಿಕ, ದೀಕ್ಷಿತ, ಪ್ರತಾಪ್, ಕುಮಾರ್, ಯಶೋದಮ್ಮ ಮೃತರು.

ಮುಂಬೈ ವಿರುದ್ಧ ಪಂಜಾಬ್‌ಗೆ ಭರ್ಜರಿ ಜಯ



ಪ್ರಭ್‌ಸಿಮ್ರಾನ್ ಸಿಂಗ್ ಹಾಗೂ ಶ್ರೇಯಸ್ ಅಯ್ಯರ್ ಜುಗಲ್‌ಬಂದಿ.

ಮುಂಬೈ, ಏ.16(ವಿವಿಹೆಚ್)– ಪ್ರಭ್‌ಸಿಮ್ರಾನ್ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಶತಕದ ಜೊತೆಯಾಟದ ನೆರವಿನಿಂದ ಅತಿಥೇಯ ಮುಂಬೈ ಇಂಡಿಯನ್ಸ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿದ ಪಂಜಾಬ್ ಕಿಂಗ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್–2026ರ 24ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 195 ರನ್ ಕಲೆಹಾಕಿತು.

ಈ ಮೊತ್ತ ಬೆನ್ನತ್ತಿದ ಪಂಜಾಬ್ ಪ್ರಿಯಾನ್ಶ್ ಆರ್ಯ (15), ಕೂಪರ್ ಕೊನೊಲಿ (17) ವಿಕೆಟ್ ಕಳೆದುಕೊಂಡು ಆರಂಭಿಕ ಹಿನ್ನಡೆ ಅನುಭವಿಸಿದರೂ ಪ್ರಭ್‌ಸಿಮ್ರಾನ್ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಶತಕದ ಜೊತೆಯಾಟದಿಂದ ಚೇತರಿಸಿಕೊಂಡಿತು.

ನಾಯಕ ಶ್ರೇಯಸ್ ಅಯ್ಯರ್ 35 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಸಹಿತ 66 ರನ್ ಪೇರಿಸಿದರೆ, ಪ್ರಭ್‌ಸಿಮ್ರಾನ್ ಅಜೇಯರಾಗಿ ಉಳಿದು 39 ಎಸೆತಗಳಲ್ಲಿ 11 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 80 ರನ್ ಚಚ್ಚಿದರು. ಉಳಿದಂತೆ ಮಾರ್ಕಸ್ ಸ್ಟೋಯ್ನಿಸ್ ಅಜೇಯ 10ರನ್ ಗಳಿಸಿದರು. ಆ ಮೂಲಕ ಪಂಜಾಬ್ 16.3 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 198ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಇತ್ತ ಮುಂಬೈ ಪರ ಘಜನ್‌ಫರ್ 2, ಶಾರ್ದೂಲ್ ಠಾಕೂರ್ ಒಂದು ವಿಕೆಟ್ ಪಡೆದರು.

ಈ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್‌ಗೆ ಡಿಕಾಕ್ ಅಜೇಯ ಶತಕದಾಟ ಆಡುವ ಮೂಲಕ ಆಸರೆಯಾದರು. 60 ಎಸೆತಗಳಲ್ಲಿ 8 ಬೌಂಡರಿ, 7 ಸಿಕ್ಸರ್ ಸಹಿತ ಅಜೇಯ 112 ರನ್ ಗಳಿಸಿದರು. ಇವರಿಗೆ ಸಾಥ್ ನೀಡಿದ ನಮನ್ ಧೀರ್ 31 ಎಸೆತಗಳಲ್ಲಿ 50ರನ್ ಚಚ್ಚಿದರು. ಉಳಿದಂತೆ ರಿಯಾನ್ ರಿಕೆಲ್ಟನ್ 2, ಸೂರ್ಯಕುಮಾರ್ ಯಾದವ್ ಗೋಲ್ಡನ್ ಡಕ್, ನಾಯಕ ಹಾರ್ದಿಕ್ ಪಾಂಡ್ಯ 14, ರುದರ್‌ಫೋರ್ಡ್ 1, ತಿಲಕ್ ವರ್ಮಾ 8 ರನ್ ಗಳಿಸಿದರು. ಪಂಜಾಬ್ ಪರ ಅರ್ಶ್‌ದೀಪ್ 3 ವಿಕೆಟ್, ಶಶಾಂಕ್ ಸಿಂಗ್ ಹಾಗೂ ಮರ್ಕೋ ಏನ್ಸನ್ ತಲಾ ಒಂದೊಂದು ವಿಕೆಟ್ ಪಡೆದರು.